
ಸಪ್ತಗಿರಿ

ಸೆಪ್ಟಂಬರ್. 1987 ಬೆಲೆ : ರೂ ೧













ತಿರುಮಲೆ ತಿರುಪತಿ ದೇವಸ್ಥಾನಗಳ ಸಚಿತ್ರ ಮಾಸ ಪತ್ರಿಕೆ











ನಿನ್ನ ನೋಡಿ ಧನ್ಯನಾದೆನೋ ಹೇ ಶ್ರೀನಿವಾಸ ॥ ಪ ॥

ನಿನ್ನನೋಡಿ ಧನ್ಯನಾದೆ ಎನ್ನ ಮನದಿ ನಿಂತು ಸುಪ್ರ
ಸನ್ನ ದಯಮಾಡಿ ಮುನ್ನಿನಂತೆ ಸಲಹಬೇಕೊ ॥ ಅ.ಪ ॥

ಲಕ್ಷ್ಮೀರಮಣ ಪಕ್ಷಿವಾಹನ ಲಕ್ಷ್ಮೀನಿನ್ನ ವಕ್ಷದಲ್ಲಿ
ರಕ್ಷಣ ಶಿಕ್ಷಣ ದಕ್ಷ, ಪಾಂಡವ ಪಕ್ಷ, ಕಮಲಾಕ್ಷ, ರಕ್ಷಿಸು –1–

ದೇಶದೇಶಗಳನು ತಿರುಗಿ ಆಶಾಬದ್ಧನಾದೆ ಸ್ವಾಮಿ
ದಾಸನೆನಿಸಿ ಎನ್ನ ಜಗದೀಶ ಕಾಯೋ ವಾಸುದೇವ –2–

ಕಂತುಜನಕ ಕೊಟ್ಟು ಎನಗೆ ಅಂತರಂಗದ ಸೇವೆಯನ್ನು
ಅಂತರವಿಲ್ಲದೆ ಪಾಲಿಸಯ್ಯ ಹೊಂತಕಾರಿ ಪುರಂದರ ವಿಠಲ

–ಶ್ರೀ ಪುರಂದರದಾಸರು.

ಸಂದರ್ಶಿಸಿ ಆನಂದಿಸಿ

ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯ

ತಿರುಮಲೆ

ವಾರ್ಷಿಕ ಬ್ರಹ್ಮೋತ್ಸವ

24-9-87 ರಿಂದ 3-10-87 ವರೆಗೆ

ಉತ್ಸವ ಕಾರ್ಯಕ್ರಮ


ದಿನಾಂಕ	ವಾರ	ಹಗಲು	ರಾತ್ರಿ
24-9-1987	ಗುರು	—	ಅಂಕುರಾರ್ಪಣೆ ಶ್ರೀ ಸೇನಾಧಿಪತಿ ಉತ್ಸವ
25-9-1987	ಶುಕ್ರ	ಚಿನ್ನದ ತಿರುಚ್ಚಿ ಉತ್ಸವ- ಧ್ವಜಾರೋಹಣ	ದೊಡ್ಡ ಶೇಷವಾಹನ
26-9-1987	ಶನಿ	ಚಿಕ್ಕ ಶೇಷವಾಹನ	ಹಂಸವಾಹನ
27-9-1987	ಭಾನು	ಸಿಂಹವಾಹನ	ಮುತ್ತಿನ ಪಲ್ಲಕ್ಕಿವಾಹನ
28-9-1987	ಸೋಮ	ಕಲ್ಪವೃಕ್ಷವಾಹನ	ಸರ್ವಭೂಪಾಲವಾಹನ
29-9-1987	ಮಂಗಳ	ಪಲ್ಲಕ್ಕಿಯಲ್ಲಿ ಮೋಹಿನೀ ಅವತಾರೋತ್ಸವ	ಗರುಡೋತ್ಸವ
30-9-1987	ಬುಧ	ಬೆಳಗ್ಗೆ : ಹನುಮದ್ವಾಹನ ಸಂಜೆ: ವಸಂತೋತ್ಸವ	ಗಜವಾಹನ
1-10-1987	ಗುರು	ಸೂರ್ಯಪ್ರಭವಾಹನ	ಚಂದ್ರಪ್ರಭವಾಹನ
2-10-1987	ಶುಕ್ರ	ರಥೋತ್ಸವ	ಅಶ್ವವಾಹನ
3-10-1987	ಶನಿ	ತೀರ್ಥವಾರಿ, ಅವಭೃತೋತ್ಸವ	ಧ್ವಜಾವರೋಹಣ

ವಿಶೇಷ :– 1. ಪ್ರತಿದಿನವೂ ರಾತ್ರಿ ಉತ್ಸವದ ಮುಂಚೆ ಉಯ್ಯಾಲೆ ಉತ್ಸವವು ರಾತ್ರಿ 7–00 ಗಂ॥ಯಿಂದ 8–00 ಗಂ॥ ವರೆಗೆ ನಡೆಯುವುದು. 2. ಪ್ರತಿ ದಿನವೂ ವಿದ್ವಾಂಸರು ಉಪನ್ಯಾಸಗಳನ್ನು ಮಾಡುವರು. 3. ಪ್ರತಿದಿನವೂ ನಡೆಯುವ ಕಾರ್ಯಕ್ರಮವು ಮುಂಚಿತವಾಗಿಯೇ ತಿಳಿಸಲ್ಪಡುವುದು.

ಬ್ರಹ್ಮೋತ್ಸವದಲ್ಲಿ ತಿರುಪತಿಯ ಹೊಸ ಸತ್ರದಿಂದ ಬೆಟ್ಟಕ್ಕೆ ಬೆಳಗ್ಗೆ 4-00 ಗಂಟೆಯಿಂದ ರಾತ್ರಿ 10–00 ಗಂಟೆಯವರೆಗೆ ಬಸ್ಸುಗಳು ಹೋಗುವುವು. ಬಸ್ ಟಿಕೆಟ್ಟು ಒಬ್ಬರಿಗೆ ರೂ. 4–25.

ತಿ. ತಿ. ದೇವಸ್ಥಾನಗಳು.

ನೀವೂ ಬನ್ನಿ ನಿಮ್ಮವರನ್ನೂ ಕರೆತನ್ನಿ



ಗೌರವ ಸಂಪಾದಕರು :

ಶ್ರೀ ಸಿ.ಎಚ್. ವೆಂಕಟಪತಿರಾಜು ಐ.ಎ.ಎಸ್.,

ಸಂಪಾದಕ :

ಕೆ. ಸುಬ್ಬಾರಾವು, ಎಂ.ಎ.,

ಉಪಸಂಪಾದಕ :

ಸಿ. ಎಸ್. ಶ್ರೀನಿವಾಸನ್ ಎಂ.ಎ.,

ಮುದ್ರಣ :

ಎಂ. ವಿಜಯಕುಮಾರ್‌ರೆಡ್ಡಿ

ಲೇಖನ/ಜಾಹೀರಾತುಗಳಿಗೆ
ಮಿಕ್ಕ ವಿವರಗಳಿಗೆ
ಸಂಪಾದಕರು,
ತಿರುಮಲ ತಿರುಪತಿ ದೇವಸ್ಥಾನಗಳು,
ತಿರುಪತಿ

ಸಪ್ತಗಿರಿಯ ಎಲ್ಲ ಭಾಷೆಯ ಪ್ರತಿಗಳೂ ಎಲ್ಲ ತಿ.ತಿ.ದೇ. ವಿಚಾರಣಾಕೇಂದ್ರಗಳಲ್ಲಿ ದೊರೆಯುವುವು.

ಬಿಡಿ ಪ್ರತಿ ೧-೦೦

ವಾರ್ಷಿಕ ಚಂದಾ ೧೨-೦೦

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕ ವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. –ಸಂ॥

ಸಂಪುಟ ೧೮]   ಸೆಪ್ಟಂಬರ್ ೧೯೮೭   [ಸಂಚಿಕೆ ೪

ವಿಷಯಸೂಚಿ

ಮುಖಚಿತ್ರ : ಬ್ರಹ್ಮೋತ್ಸವದ ವಿವಿಧ ವಾಹನ ಸೇವೆಗಳು.

ಸಂಪಾದಕೀಯ

ಕಲಿಯುಗದ ಪ್ರತ್ಯಕ್ಷ ದೈವ ಎಂದು ಹೆಸರಾದ ತಿರುಮಲೆಯ ಶ್ರೀನಿವಾಸನ ದರ್ಶನಕ್ಕೆ ದೇಶದ ನಾನಾ ಭಾಗಗಳಿಂದ ದಿನವೂ ಸಾವಿರ ಸಾವಿರ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದ್ದಾರೆ. ಈ ಸಂದಣಿಯ ಸಾಂದ್ರತೆ ದಿನೇ ದಿನೇ ಹೆಚ್ಚುತ್ತಲೇ ಹೋಗುತ್ತಿದೆ. ಜೊತೆಗೇ ನಿತ್ಯ ಕಲ್ಯಾಣ ಪಚ್ಚ ತೋರಣಗಳ ಸ್ವಾಮಿಯ ವಿಶೇಷ ಹಬ್ಬ ಹರಿದಿನಗಳ ಕಾಲದಲ್ಲಿಯಂತೂ ತಿರುಮಲೆ ಜನಸಾಗರವಾಗುತ್ತದೆ, ಗೋವಿಂದ ನಾಮ ಜಪ ಗಗನವನ್ನು ಮುಟ್ಟುತ್ತದೆ.

ಇಂತಲ್ಲಿ ತಿ. ತಿ. ದೇವಸ್ಥಾನಗಳು ತಿರುಮಲೆಯ ಸೀಮಿತವಾದ ಭೌತಿಕ ಕ್ಷೇತ್ರವನ್ನು ಆದಷ್ಟು ಹೆಚ್ಚು ಪವಿತ್ರವಾಗಿ, ಶುಭ್ರವಾಗಿ, ಆರೋಗ್ಯಕರವಾಗಿ ಇಡಲು, ತನ್ಮೂಲಕ ಸ್ವಾಮಿಯ ದರ್ಶನಕ್ಕೆ ಬರುವ ಯಾತ್ರಿಕರಿಗೆ ಇದೊಂದು ಆನಂದದ ಅನುಭವವೆನ್ನಿಸಲು ಅಹರ್ನಿಶಿ ಶ್ರಮಿಸುತ್ತಿದೆ. ದಿವ್ಯಾರಾಮ ಯೋಜನೆಯ ಉಪವನಗಳ ನಿರ್ಮಾಣವಾಗಲೀ ಚೆಕ್ ಡ್ಯಾಂಗಳಲ್ಲಿ ನೀರು ಸಂಗ್ರಹಿಸುವ ಯೋಜನೆಯಾಗಲೀ, ತಿರುಮಲೆಯಲ್ಲಿ ಆಸ್ಪತ್ರೆ, ವಸತಿ ನಿರ್ಮಾಣ, ರಸ್ತೆಗಳನ್ನು ವಿಶಾಲಗೊಳಿಸುವಿಕೆ, ರಸ್ತೆಯಲ್ಲಿನ ಅಡ್ಡಿ ಆತಂಕಗಳನ್ನು ನಿವಾರಿಸುವಿಕೆ, ಹೊಸ ಸಭಾಂಗಣ ಯೋಜನೆ, ಉಚಿತ ಭೋಜನ, ಕ್ಷೌರಕರ್ಮ ಸೌಲಭ್ಯ, ಉಚಿತ ಯಾತ್ರಿಕ ಬಸ್ ಸೌಲಭ್ಯ, ಸಾವಿರ ಕೋಣೆಯ ಸತ್ರ ನಿರ್ಮಾಣ ಯೋಜನೆ, ಸೌಲಭ್ಯಯುತವಾದ ಸರತಿಯ ಸಾಲಿನ ಯೋಜನೆ, ಎಲ್ಲವೂ ಯಾತ್ರಿಕರಿಗೆ ತಿರುಮಲೆಯಲ್ಲಿ ಸಂದಣಿಯ ಅನುಭವವಾಗದೆ ಸ್ವಾಮಿ ದರ್ಶನ ಸುಖಕರವಾಗಿ ಆಗಲಿ ಎಂಬ ಉದ್ದೇಶದಿಂದಲೇ ಆಗಿವೆ.

ಶ್ರೀವೆಂಕಟೇಶ್ವರ ಸ್ವಾಮಿಯ ಬ್ರಹ್ಮೋತ್ಸವ ಪ್ರತಿವರ್ಷದಲ್ಲಿ ಒಂದು ಹೊಸ ಹಬ್ಬದಂತೆ ಉತ್ಸಾಹದಿಂದ, ಸಡಗರದಿಂದ, ಭಕ್ತಿಯಿಂದ, ಆಚರಿಸಲ್ಪಡುತ್ತದೆ. ಈ ಬ್ರಹ್ಮೋತ್ಸವದ ಕಾಲದಲ್ಲಿ ಯಾತ್ರಿಕ ಸಂದಣಿಯೂ ಇತರ ದಿನಗಳಿಗಿಂತ ಹೆಚ್ಚು. ಆದರೂ ಇಲ್ಲೂ ಪರಿಶುಭ್ರತೆ, ನಗರ ನೈರ್ಮಲ್ಯ, ಶಾಂತಿ ಸೌಹಾರ್ದ ಪಾಲನೆ, ಅವರು ತಿರುಪತಿಯಲ್ಲಿ ಇರುವ ಹೊತ್ತಿನಲ್ಲಿ ಅವರ ಕನಿಷ್ಠ ಅಗತ್ಯಗಳ ಸುಲಭ ಪೂರೈಕೆ–ಇವುಗಳಿಗಾಗಿ ತಿ. ತಿ. ದೇ. ಅರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸುವುದು. ಅದಕ್ಕಾಗಿ ವ್ಯವಸ್ಥಿತವಾಗಿ ಸಿದ್ಧವಾಗಿದೆ.

ಆದರೆ ತಿರುಮಲೆಯಲ್ಲಿ ಮಾತ್ರ ಪರಿಶುಭ್ರತೆ, ನಗರ ನೈರ್ಮಲ್ಯ ಶಾಂತಿ ಸೌಹಾರ್ದ ವ್ಯವಸ್ಥೆ, ಇದ್ದರೆ ಸಾಕೆ? ಎಂಬ ಪ್ರಶ್ನೆ ಭರತ ಖಂಡದ ಭೂಪಟದ ಹಿನ್ನೆಲೆಯಲ್ಲಿ ಎದ್ದು ನಿಲ್ಲುವ ಪ್ರಶ್ನೆ. ಸನಾತನ ಧರ್ಮದ ತವರೂರಾದ ಭಾರತದಲ್ಲಿ ಶ್ರೀವೆಂಕಟೇಶ್ವರ ಸ್ವಾಮಿಯ ಚಿತ್ರ, ದೇವಾಲಯ, ನೆನಪು, ಪೂಜೆ, ಆರಾಧನೆ, ಎಲ್ಲೆಡೆಯೂ ನಡೆಯುತ್ತಿರವಾಗ ಎಲ್ಲ ಕಡೆಯೂ ಶಾಂತಿ ಸೌಹಾರ್ದ, ನೈರ್ಮಲ್ಯ, ಪರಿಶುಭ್ರತೆಗಳು ಹರಡಬೇಕಲ್ಲವೇ?

ಮಹಾಜನರು ನಡೆದಂತೆ ಶ್ರೀ ಸಾಮಾನ್ಯರೂ ನಡೆಯುತ್ತಾರೆ ಎಂಬುದು ಆರ್ಯೋಕ್ತಿ. ಭಾರತದಲ್ಲಿ ತಿರುಮಲೆ ಗುರುಮನೆ, ದೈವನಿಲಯ ಎಂಬ ಹೆಸರು ಹೊತ್ತಿದೆಯೆಂಬುದೂ, ಸ್ವಾಮಿಯ ಅನುಗ್ರಹದಿಂದ, ಅವನದೇ ನೇತೃತ್ವದಲ್ಲಿ, ನಿರ್ದೇಶನದಲ್ಲಿ, ಪವಿತ್ರವಾಗಿ, ಪರಿಶುಭ್ರವಾಗಿ ಅಲ್ಲಿಗೆ ಬರುವ ಭಕ್ತರಿಗೆ ಆಹ್ಲಾದಕರವಾಗಿ–ತಿರುಮಲೆಯಲ್ಲಿ ಒಂದು ಗಿಡವಾಗಿ, ಗಿಣಿಯಾಗಿಯಾದರೂ ಜನ್ಮ ತಳೆಯಲು ಅಪೇಕ್ಷಿಸುವೆ ಎನ್ನುವ ಭಾವನೆಯನ್ನು ಹುಟ್ಟಿಸುವಂತೆ ಇದ್ದಾಗ, ಇರುವಾಗ, ಇಡೀ ಭಾರತವೂ, ಅಷ್ಟೇಕೆ ಇಡೀ ಪ್ರಪಂಚ ಅದರ ಹಾಗೇ ಆದರ್ಶಪ್ರಾಯವಾಗಿ ಬೆಳೆಯಬೇಕು ಎಂಬ ಹಂಬಲ ಮೂಡಿದಲ್ಲಿ ಅತಿಶಯೋಕ್ತಿ ಆಗಲಾರದು.

ಭಾರತ ಗುಡಿಗಳ ನೆಲೆವೀಡು, ಮಾನವೀಯ ಮೌಲ್ಯಗಳಿಗೆ ಆಗರ. ಭ್ರಾತೃತ್ವ, ಸಹನೆ, ಸಜ್ಜನಿಕೆಗಳಿಗೆ ಇತಿಹಾಸದಲ್ಲಿ ಹೆಸರಾದದ್ದು. ಉತ್ಸವ ಹಬ್ಬಗಳಲ್ಲಿ ಹಿರಿಯ ಅಪೇಕ್ಷೆ ಆದರ್ಶಗಳನ್ನು ಹೊಂದಿ ಆಸಕ್ತಿ ಆದರಗಳನ್ನೂ ಹೊಂದಿ ನಡೆದಿರುವ ನಾಡು. ಸ್ವಾಮಿ ಬ್ರಹ್ಮೋತ್ಸವದ ದಿನಗಳಲ್ಲಿ ತಿರುಮಲೆಯಲ್ಲಿನ ಭಕ್ತಿ, ಸೌಭ್ರಾತೃತ್ವ, ಪವಿತ್ರ ಭಾವನೆಗಳು ಎಲ್ಲೆಡೆಯೂ ಹರಡಿ ಸ್ವಾಮಿಗೆ ಪ್ರಿಯವಾಗುವಂತೆ ಆಗಲಿ ಎಂದು ಬಯಸುವುದು ಕಾಲೋಚಿತವಾಗುತ್ತದೆ.

ವೇಂಕಟನಾಥರ ಕೃತಿಗಳ ವೈವಿಧ್ಯ

ಕವಿಸಾರ್ವಭೌಮರೆಂದು ಪ್ರಸಿದ್ಧರಾದ ವೇಂಕಟನಾಥರು ಹದಿಮೂರನೆಯ ಶತಮಾನದ ಆಚಾರ್ಯವರ್ಯರು. ಇವರಿಗೆ ಕವಿತಾರ್ಕಿಕಸಿಂಹ, ಸರ್ವತಂತ್ರ ಸ್ವತಂತ್ರ, ವೇದಾಂತಾಚಾರ್ಯ ಎಂಬ ಬಿರುದುಗಳಿದ್ದುವು. "ಯಶಿಖ್ಯಾತಿ ಲಾಭ ಪೂಜಾಸು ವಿಮುಖೋ ವೈಷ್ಣವೇ ಜನೇ" ಎಂಬಂತೆ ಅವರು ಇದಕ್ಕಾಗಿ ಎಂದೂ ಹೆಮ್ಮೆ ಪಡಲಿಲ್ಲ. ವಿದ್ವತ್ತು, ವಿನಯ ಮತ್ತು ವಿವೇಚನೆಯ ಮೂರ್ತಿಮತ್ತಾಗಿ, ಸದಾ ಪರಮಾತ್ಮ ವಿಷಯವಾದ ಗ್ರಂಥರಚನೆಯಲ್ಲಿ ನಿರತರಾಗಿದ್ದರು.

ವೇಂಕಟನಾಥರು ತಾವು ವಿಷ್ಣುವಿನ ಘಂಟಾವತಾರ ಎಂದು ಹೇಳಿಕೊಂಡಿದ್ದಾರೆ. "ಧರ್ಮತ್ರಾಣಾಯ ಭೂಸ್ಸಜಯತು ಭಗವಾನ್ ವಿಷ್ಣುಘಂಟಾವತಾರಃ'' ಎಂದು ತಿಳಿಸಲಾಗಿದೆ. ಅವರ ಅವತಾರ ಕಥಾ ಸಂದರ್ಭ ಹೀಗೆ ನಮೂದಿಸಲಾಗಿದೆ.

ವೇದ ವಿದ್ಯಾಸಂಪನ್ನರಾದ ಅನಂತಸೂರಿಗಳು ತಮ್ಮ ಪತ್ನಿ ತೋತಾರಮ್ಮನವರೊಡನೆ ಶ್ರೀನಿವಾಸಸ್ವಾಮಿಯ ದರ್ಶನಕ್ಕೆ ತಿರುಮಲೆಗೆ ಬಂದರು. ವೆಂಕಟೇಶ್ವರ ಸ್ವಾಮಿಯ ವೈಭವಯುತವಾದ ಉತ್ಸವಾದಿಗಳನ್ನು ದರ್ಶನಮಾಡಿ ತೃಪ್ತಿ ಹೊಂದಿ, 'ಅಪುತ್ರಸ್ಯ ಗತಿರ್ನಾಸ್ತಿ'–ಆದ್ದರಿಂದ ತಮಗೆ ಪುತ್ರನಾಗುವಂತೆ ಕರುಣಿಸಬೇಕೆಂದು ಪ್ರಾರ್ಥಿಸಿದರು. ಭಕ್ತನ ಮೊರೆ ಭಗವಂತನಿಗೆ ಮುಟ್ಟಿತು.

ಕಾಂಚೀಪುರದಿಂದ ಬಂದಿದ್ದ ಅನಂತಸೂರಿಗಳಿಗೆ ಆ ರಾತ್ರಿ ಯಾರೋ ಬಂದು ಸ್ವಪ್ನದಲ್ಲಿ ಕಾಣಿಸಿಕೊಂಡು ತಮಗೆ ಪುತ್ರ ಹುಟ್ಟುವನೆಂದು ತಿಳಿಸಿದಂತಾಯಿತು. ಅದೇ ರಾತ್ರಿ ಅವರ ಪತ್ನಿಯ ಸ್ವಪ್ನದಲ್ಲಿ ಒಬ್ಬ ತೇಜಸ್ವಿ ಬಾಲಕನು ಬಂದು ಅವರಿಗೆ ಒಂದು ಸಣ್ಣ ಗಂಟೆಯನ್ನು ಕೊಟ್ಟು ಅದನ್ನು ನುಂಗುವಂತೆ ತಿಳಿಸಿದನು. ಅವರು ಹಾಗೆಯೇ ಮಾಡಿದರು. ಬೆಳಗಾದ ಮೇಲೆ ದಂಪತಿಗಳು ತಮ್ಮ ಸ್ವಪ್ನವಿಚಾರ ಹೇಳಿಕೊಂಡು ಆಶ್ಚರ್ಯಪಟ್ಟರು.

ಪರಮಾತ್ಮನ ಬೆಳಗಿನ ಆರಾಧನೆಗೆ ಗರ್ಭಗುಡಿಯಲ್ಲಿದ್ದ ಗಂಟೆ ಮಾಯವಾಗಿತ್ತು. ಅಧಿಕಾರಿಗಳು ವಿಚಾರಣೆ ನಡೆಸಲು ಪ್ರಾರಂಭಿಸಿದಾಗ, ಗಂಟೆಯು ತಮ್ಮ ಇಚ್ಛೆಯಿಂದಲೇ ಮಾಯವಾಗಿದೆಯೆಂದೂ, ಅದರ ಅಗತ್ಯ ಇಲ್ಲವೆಂದೂ ಅರ್ಚಕಮುಖೇನ ತಿಳಿಸಿದಂತಾಯಿತು. ಅಂದಿನಿಂದ ಇಂದಿನವರೆಗೆ ತಿರುಮಲೆ ವೆಂಕಟೇಶ್ವರಸ್ವಾಮಿಯ ಗರ್ಭಗುಡಿಯಲ್ಲಿ ಘಂಟಾನಾದವಿಲ್ಲದೆ ಆರಾಧನೆ ನಡೆಯುತ್ತಿದೆ. ಅಲ್ಲಿ ನಡೆಯುತ್ತಿರುವ ಘಂಟಾನಾದವೆಲ್ಲ ಗರ್ಭ ಅಂಕಣದ ಹೊರಗೇ ನಡೆಯುತ್ತಿದೆ.

ಅನಂತಸೂರಿ ದಂಪತಿಗಳು ಪರಮಾತ್ಮನ ದರ್ಶನದಿಂದ ತೃಪ್ತರಾಗಿ ಕಾಂಚೀಪುರಕ್ಕೆ ಹಿಂತಿರುಗಿದರು. ಕಾಲಕ್ರಮದಲ್ಲಿ ತೋತಾರಮ್ಮನವರು ಗರ್ಭಧರಿಸಿ, ಶುಕ್ಲ ಸಂವತ್ಸರ ಭಾದ್ರಪದ ಶುದ್ಧ ದಶಮಿ ಶ್ರವಣ ನಕ್ಷತ್ರದಲ್ಲಿ ಪುತ್ರರತ್ನ ಪಡೆದರು. ವೆಂಕಟೇಶ್ವರಸ್ವಾಮಿಯ ಕೃಪಾಕಟಾಕ್ಷದಿಂದ ಜನಿಸಿದ ಮಗುವಿಗೆ ವೇಂಕಟನಾಥನೆಂದೇ ನಾಮಕರಣ ಮಾಡಲಾಯಿತು. ಈ ವಿಷಯವನ್ನು ವೇಂಕಟನಾಥರೇ ತಮ್ಮ ಗ್ರಂಥದಲ್ಲಿ ಒಂದು ಕಡೆ ಹೀಗೆ ಹೇಳಿದ್ದಾರೆ.

"ಪರಮಾತ್ಮನ ಪೂಜಾವಿಧಿಗಾಗಿ ನಿಯತವಾದ ಯಾವ ಗಂಟೆಯ ಧ್ವನಿಯಿಂದ ಸುರವೈರಿ ದೈತ್ಯ ಸಂಘಗಳು ಭಯಪಟ್ಟು ಓಡುವುವೋ, ಅಂತಹ ಗಂಟೆಯೇ ವೇಂಕಟನಾಥ ರೂಪದಿಂದ ಅವತಾರಮಾಡಿದೆ ಎಂದು ಪಂಡಿತರು ಸರಿಯಾಗಿ ಊಹಿಸುತ್ತಿದ್ದಾರೆ."

ವೇಂಕಟನಾಥರಿಗೆ ಕಾಲಕ್ರಮದಲ್ಲಿ ಚೌಲ, ಉಪನಯನಾದಿ ಶಾಸ್ತ್ರ ಕರ್ಮಗಳೆಲ್ಲ ನಡೆದವು. ಅವರ ಮಾತುಲರಾದ ಆತ್ರೇಯ ರಾಮಾನುಜರು ಬಾಲಕನ ವಿದ್ಯಾಭ್ಯಾಸ ಕಾರ್ಯವಹಿಸಿಕೊಂಡರು. ಬಾಲಕನ ತೇಜಸ್ಸು, ಪ್ರತಿಭೆ, ಆಸಕ್ತಿ, ಉತ್ಸಾಹ– ಎಲ್ಲವೂ ಅತ್ಯಾಕರ್ಷಕವಾಗಿದ್ದುವು.

ಶ್ರೀ ಡಿ. ಕೃಷ್ಣೈಂಗಾರ್

ಸಕಲಶಾಸ್ತ್ರ ಪಾರಂಗತರಾದ ಆತ್ರೇಯ ರಾಮಾನುಜರಿಗೆ, ಬಾಲಕ ವೇಂಕಟನಾಥರಿಗೆ ಪಾಠಹೇಳುವುದೆಂದರೆ ಬಹು ಸಂತೋಷ ಮತ್ತು ಉತ್ಸಾಹ. ಮೊದಲು ವೇದಾಧ್ಯಯನ ಪಾಠ ಪ್ರಾರಂಭವಾಯಿತು. ಅನಂತರ ಸಂಸ್ಕೃತಕಾವ್ಯ. ಅಲಂಕಾರ, ನಾಟಕ ಇತ್ಯಾದಿ ವ್ಯಾಸಂಗಗಳೆಲ್ಲ ಮುಗಿದು ನಂತರ ವೇದಾಂತಶಾಸ್ತ್ರ ತಿಳಿಯಲು ಪ್ರಾರಂಭ ಮಾಡಿದರು. ತಮಗೆ ಇಪ್ಪತ್ತು ವರ್ಷ ತುಂಬುವುದರೊಳಗೆ ವೇಂಕಟನಾಥರು ಸಕಲ ವಿದ್ಯಾ ಪಾರಂಗತರಾಗಿ, ಗ್ರಂಥರಚನ ಕಾರ್ಯದಲ್ಲಿ ತೊಡಗಿದರು. ತಮ್ಮ ವಿದ್ಯಾರ್ಜನೆಯ ಕಾಲವನ್ನೂ, ಪದ್ಧತಿ, ಸಾಧನ ಎಲ್ಲವನ್ನೂ ವೇಂಕಟನಾಥರು ತಾವು ರಚಿಸಿರುವ ನಾಟಕದಲ್ಲಿ ಜ್ಞಾಪಿಸಿಕೊಂಡಿದ್ದಾರೆ.

ತುಂಬು ಜೀವನದ ವೇಂಕಟನಾಥರು ಒಂದು ನೂರು ವರ್ಷಕಾಲ ಬಾಳಿದರು. ತಮ್ಮ ಜೀವಿತದ ಬಹುಭಾಗವನ್ನು ಸರ್ವೋತ್ತಮ ಗ್ರಂಥರಚನ ಕಾರ್ಯದಲ್ಲಿ ಕಳೆದರು. ಅವರು ರಚಿಸಿರುವ ಒಂದು ನೂರಕ್ಕಿಂತ ಹೆಚ್ಚು ಗ್ರಂಥಗಳನ್ನು ವ್ಯಾಸಂಗಮಾಡಲು ಒಂದು ಪುರುಷಾಯುಸ್ಸು ಆದರೂ ಸಾಲದು. ಈ ಗ್ರಂಥರಾಶಿಯನ್ನು ಪಂಡಿತರು ವಿಧವಿಧವಾಗಿ ವಿಂಗಡಿಸಿದ್ದಾರೆ. ಆದರೆ ವೈಭವ ಪ್ರಕಾಶಿಕೆಯ ಪ್ರಕಾರ ಇವನ್ನು ಆರು ಗುಂಪುಗಳಾಗಿ ವಿಂಗಡಿಸಲಾಗಿದೆ.

1) ವೈಷ್ಣವಸಿದ್ಧಾಂತದ ರಹಸ್ಯ ಗ್ರಂಥಗಳು.

2) ಮನುಧರ್ಮ ಮತ್ತು ಪ್ರಕ್ರಿಯಾ ಪ್ರಬಂಧಗಳು.

3) ಭಕ್ತಿಯುತ ಮತ್ತು ಬೋಧನಾತ್ಮಕ ಕವನಗಳು.

4) ಇತಿಹಾಸ, ನಾಟಕ ಮತ್ತು ಗೀತ ರೂಪಕ ಸಾಹಿತ್ಯ ಗ್ರಂಥಗಳು.

5) ಸ್ವತಂತ್ರನಾದ ವೇದಾಂತ ಪ್ರಮಾಣಗ್ರಂಥಗಳು.

6) ಭಾಷ್ಯ ಅಥವ ವ್ಯಾಖ್ಯಾನ ಗ್ರಂಥಗಳು.

ಈ ಗ್ರಂಥಗಳು ತಮಿಳು, ಸಂಸ್ಕೃತ ಮತ್ತು ಮಣಿಪ್ರವಾಳ ಭಾಷಾಶೈಲಿಯಲ್ಲಿವೆ. ಮೇಲೆ ಕಂಡ ಭಾಗಗಳಲ್ಲಿ ಕಂಡುಬರುವ ಗಹನ ವಿಷಯಗಳನ್ನು ಬಹು ಸೂಕ್ಷ್ಮವಾಗಿ ಇಲ್ಲಿ ನಮೂದಿಸಲಾಗಿದೆ.

ಮೊದಲನೆಯ ಗ್ರಂಥರಾಶಿಗೆ ಸೇರಿದ ಸಿದ್ಧಾಂತ ರಹಸ್ಯ ಗ್ರಂಥಗಳಲ್ಲಿ, ನ್ಯಾಸದಶಕ, ನ್ಯಾಸವಿಂಶತಿ, ವೈರಾಗ್ಯಪಂಚಕ, ಅರ್ಥಪಂಚಕ, ವೈಷ್ಣವದಿನಚರಿ ಸಾರಸಾರ, ರಹಸ್ಯಶಿಖಾಮಣಿ, ರಹಸ್ಯ ರತ್ನಾವಳಿ, ತತ್ತ್ವ ನವನೀತ, ಉಪಕಾರಸಂಗ್ರಹ, ಗೀತಾರ್ಥ ಸಂಗ್ರಹ, ರಹಸ್ಯಸಾರ–ಇತ್ಯಾದಿ ಮೂವತ್ತೆರಡು ರಹಸ್ಯಗಳಿವೆ. ಇವುಗಳು ತಮಿಳು ಭಾಷೆಯಲ್ಲಿವೆ. ಹಿಂದಿನ ಸಂಪ್ರದಾಯಗಳನ್ನು ಪ್ರಕಾಶಪಡಿಸಿ, ಪ್ರಚಾರಮಾಡುವುದು ಈ ಗ್ರಂಥಗಳ ರಚನೆಯ ಉದ್ದೇಶ.

ಇವರ ವೈರಾಗ್ಯಪಂಚಕದಲ್ಲಿ ಒಂದು ಶ್ಲೋಕ ಹೀಗಿದೆ. 'ನಾಸ್ತಿ ಪಿತ್ರಾರ್ಜಿತಂ ಕಿಂಚಿತ್ ನ ಮಯಾ ಕಿಂಚಿದಾರ್ಜಿತಂ ಅಸ್ತಿ ಮೇ ಹಸ್ತಿ ಶೈಲಾಗ್ರೇ ವಸ್ತು ಪೈತಾಮಹಂ ಧನಂ" ಶ್ಲೋಕದ ಅರ್ಥ ಸುಲ[illegible] ವಾಗಿದ್ದರೂ, ಅರ್ಥಗರ್ಭಿತವಾಗಿದೆ, ಮತ್ತ[illegible] ಸ್ವಂತಜೀವನ ರಹಸ್ಯವನ್ನು ತಿಳಿಸಲಾಗಿದೆ.

ಮನುಧರ್ಮ ಮತ್ತು ಪ್ರಕ್ರಿಯ[illegible] ಪ್ರಬಂಧಗಳು ವೇಂಕಟನಾಥರ ಎರಡನೆಯ[illegible] ಗ್ರಂಥರಾಶಿ. ಇವು ಸಂಸ್ಕೃತಭಾ[illegible] ಯಲ್ಲಿವೆ. ಇವುಗಳಲ್ಲಿ ಮುಖ್ಯವಾದು[illegible] ಯಾವುವೆಂದರೆ– ನಿಕ್ಷೇಪರಕ್ಷೆ, ಸಚ್ಚರಿತ್[illegible] ರಕ್ಷೆ, ಪಾಂಚರಾತ್ರರಕ್ಷೆ, ದ್ರಮಿಡೋಪನಿ[illegible] ಷತ್ಸಾರ, ದ್ರಮಿಡೋಪನಿಷತ್ತಾ[illegible] ರತ್ನಾವಳಿ, ಭೂಗೋಳ ನಿರ್ಣಯ–ಇತ್ಯಾ[illegible] ಗ್ರಂಥಗಳು.

ಭಕ್ತಿ ಪ್ರಚೋದಕ ಮತ್ತು ಬೋ[illegible] ನಾತ್ಮಕ ಕವನಗಳು, ಇವರ ಮೂರನೆಯ ಗ್ರಂಥರಾಶಿ ಇವರ ಈ ಮೂವತ್ತಾ[illegible]

ಸ್ತೋತ್ರಗಳು ಬಹುಪ್ರಸಿದ್ಧವಾಗಿವೆ. ಇವು ನಿತ್ಯಪಾರಾಯಣಕ್ಕೆ ಸುಲಭವಾಗಿಯೂ, ಸರಳವಾಗಿಯೂ ಇವೆ. ವೇಂಕಟನಾಥರು ತಾವು ವಿವಿಧ ಪುಣ್ಯಕ್ಷೇತ್ರಗಳಲ್ಲಿ ದರ್ಶನ ಮಾಡಿದ ಪರಮಾತ್ಮನ ಅರ್ಚಾಮೂರ್ತಿಗಳ ಮಹಿಮೆ ಮತ್ತು ವೈಭವವನ್ನು ಈಸ್ತೋತ್ರಗಳಲ್ಲಿ ವರ್ಣಿಸಿದ್ದಾರೆ. ಇಲ್ಲಿಯ ವಿವರಣೆ ಬಹು ಹೃದಯಂಗಮವಾಗಿದೆ ಮತ್ತು ಕಣ್ಣಿಗೆ ಕಟ್ಟಿದ ದೃಶ್ಯದಂತಿದೆ. ಇವುಗಳಲ್ಲಿ ಮುಖ್ಯವಾದುವು ದಶಾವತಾರಸ್ತೋತ್ರ, ಭಗವದ್ಧ್ಯಾನ ಸೋಪಾನ, ಶ್ರೀಸ್ತುತಿ, ಭೂ–ಸ್ತುತಿ ಗೋದಾಸ್ತುತಿ, ಗೋಪಾಲವಿಂಶತಿ, ವರದರಾಜ ಪಂಚಾಶತ್, ದೇವರಾಜ ಪಂಚಾಶತ್, ಅಚ್ಯುತಶತಕ, ಶರಣಾಗತಿ ದೀಪಿಕೆ– ಇತ್ಯಾದಿ. ಈ ಸ್ತೋತ್ರಗಳು ಬಹುಜನಪ್ರಿಯವಾಗಿರುವುದಲ್ಲದೆ, ವೇಂಕಟನಾಥರ ಪೂರ್ಣ ಪಾಂಡಿತ್ಯವೂ, ಮತ್ತು ಕವಿತಾ ಸಾಮರ್ಥ್ಯವೂ ಪ್ರದರ್ಶಿತವಾಗಿದೆ. ಬಾಯಿಪಾಠ ಮಾಡಿ ನಿತ್ಯವೂ ಹೇಳಲೂ, ಸುಲಭವೂ, ಸರಳವೂ ಆಗಿದೆ.

ಇದೇ ಗ್ರಂಥರಾಶಿಗೆ ಸೇರಿದ ಪಾದುಕಾ ಸಹಸ್ರ ಅತಿ ಅದ್ಭುತಗ್ರಂಥ. ರಂಗನಾಥ ಸ್ವಾಮಿಯ ಪಾದುಕೆಯೇ ಈ ಗ್ರಂಥದ ವಸ್ತು. ಇದರಲ್ಲಿ 32 ಪದ್ಧತಿಗಳೂ ಒಂದು ಸಾವಿರದ ಎಂಟು ಶ್ಲೋಕಗಳೂ ಇವೆ. ರಾಮಾಯಣ ಸಿದ್ಧಾಂತವನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ರಂಗನಾಥಸ್ವಾಮಿಯ ದಿವ್ಯಪಾದುಕೆಯ ಮಹಿಮೆಯನ್ನು ಸಮರ್ಥನಾದ ಕವಿಯು ವರ್ಣಿಸಬೇಕಾದರೆ ಆಕಾಶವೇ ಕಾಗದವಾಗಬೇಕೆಂದೂ, ಸಪ್ತ ಸಮುದ್ರವೇ ಮಸಿಯಾಗಬೇಕೆಂದೂ ಸಹಸ್ರವದನನಾದ ಆದಿಶೇಷನೇ ಕರ್ತೃವಾಗಿ ಇರಬೇಕೆಂದೂ ತಿಳಿಸಲಾಗಿದೆ. ಜ್ಞಾನಪ್ರದನೂ, ಬೋಧಪ್ರದನೂ ಆದ ಶ್ರೀಲಕ್ಷ್ಮೀ ಹಯಾಸ್ಯನೇ ತಮ್ಮ ಹೃದಯದಲ್ಲಿ ನಿಂತು ಪಾದುಕಾಸಹಸ್ರವನ್ನು ರಚಿಸುವಂತೆ ಕರುಣಿಸಿದನೆಂದು, ವೇಂಕಟನಾಥರು ಹೇಳಿಕೊಂಡಿದ್ದಾರೆ.

ವೇಂಕಟನಾಥರ ಗ್ರಂಥರಾಶಿಯಲ್ಲಿ ಕಾವ್ಯ, ನಾಟಕ, ಮತ್ತು ಗೀತರೂಪಕಗಳು ಸೇರಿವೆ. ಇವರ ಯಾದವಾಭ್ಯುದಯ ಮಹಾಕಾವ್ಯ, ಕಾಳಿದಾಸನ ರಘುವಂಶ, ಕುಮಾರ ಸಂಭವ ಕಾವ್ಯಗಳ ಧಾಟಿಯಲ್ಲಿವೆ. ಈ ಭಾಗದ ಸಂಕಲ್ಪಸೂರ್ಯೋದಯ, ಹಂಸ ಸಂದೇಶ, ದಯಾಶತಕ – ಮುಂತಾದುವು ಸಂಸ್ಕೃತ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ದಯಾಶತಕವು ಬಹು ಸೊಗಸಾದ ಮತ್ತು ಆಲೋಚನಾಪರವಾದ ಭಾವಗೀತೆ. ವೇಂಕಟನಾಥರು ತಿರುಮಲೆಗೆ ಬಂದು ಶ್ರೀನಿವಾಸದೇವರ ದರ್ಶನಮಾಡಿ ತೃಪ್ತಿ ಹೊಂದಿ ಪರವಶರಾದಾಗ, ಪರಮಾತ್ಮನ ಅನಂತ ಕಲ್ಯಾಣ ಗುಣಗಳಲ್ಲಿ ಮುಖ್ಯವಾದ ದಯಾಗುಣವನ್ನು ಆರೋಪಿಸಿ ವಿವಿಧರೀತಿಯಲ್ಲಿ ವಿವಿಧ ವೃತ್ತಗಳ ಶ್ಲೋಕಗಳಲ್ಲಿ ವರ್ಣಿಸಿದ್ದಾರೆ. ಈ ಸ್ತೋತ್ರವು ಬಹು ಗಂಭೀರವಾಗಿಯೂ, ಭಾವಗರ್ಭಿತವಾಗಿಯೂ, ಭಕ್ತಿಪ್ರಚೋದಕವೂ ಆಗಿದೆ. ಒಂದೊಂದು ದಶಕದಲ್ಲಿ ಒಂದೊಂದುಗಹನವಾದ ವಿಷಯವನ್ನು ಪ್ರತಿಪಾದಿಸಲಾಗಿದೆ. ಭಗವಂತನ ಮೋಕ್ಷಪ್ರದತ್ವ, ಸರ್ವಜ್ಞತ್ವ, ಸೌಜನ್ಯತ್ವ, ಸರ್ವದೋಷ ನಿವಾರಕತ್ವ, ಮೋಕ್ಷಮಾರ್ಗಪ್ರದತ್ವ, ದಯಾಗುಣದ ಮಹಿಮೆ– ಇತ್ಯಾದಿ ವಿಷಯಗಳನ್ನು ವಿವರಿಸಲಾಗಿದೆ.

ಎಲೈ, ದಯಾದೇವಿಯೇ, ಎಲ್ಲ ಸುಗುಣಗಳಲ್ಲಿ ನಿನಗೆ ಸಾರ್ವಭೌಮತ್ವ ಇದೆ. ಎಲ್ಲ ಅಪರಾಧಗಳ ಚಕ್ರವರ್ತಿ ನಾನು. ಸರ್ವ ಪಾಪ ನಿವೃತ್ತಿಮಾಡುವ ಸ್ವರೂಪ ನನಗಿದೆ. ಇಂತಹ ಪಾಪನಿವೃತ್ತಿಮಾಡುವ ಗುಣವಿರುವ ಶ್ರೀನಿವಾಸಸ್ವಾಮಿಯ ಪಾದಗಳಲ್ಲಿ ನನ್ನನ್ನು ಸೇರಿಸು.

ಅಹಮಸ್ಮ್ಯಪರಾಧ ಚಕ್ರವರ್ತೀ,
ಕರುಣೇತ್ವಯಿ ಗುಣೇಷು ಸಾರ್ವಭೌಮೀ.
ವಿದುಷೀಸ್ಥಿತಿ ಮೀದೃಶೀಂ
ಸ್ವಯಂ ಮಾಂ
ವೃಷಶೈಲೇಶ್ವರ ಪಾದ ಸಾತ್ಕುರು ತ್ವಂ||

ಸಂಕಲ್ಪಸೂರ್ಯೋದಯ ನಾಟಕದಲ್ಲಿ ವೇದಾಂತ ತತ್ತ್ವಗಳೆಲ್ಲವೂ ಪ್ರತಿಪಾದಿತವಾಗಿವೆ. ನಾಟಕದಲ್ಲಿ ಬರುವ ಪಾತ್ರಗಳು ಆಕಾರವಿಲ್ಲದ ಧರ್ಮ ಮತ್ತು ಗುಣ ವಿಶೇಷಗಳು. ಅವು ರಂಗದ ಮೇಲೆ ಬಂದಾಗ ಆಯಾಯಾ ಧರ್ಮಾವಲಂಬಿಗಳಾಗಿಯೂ, ಗುಣಾನುಯಾಯಿಗಳಾಗಿಯೂ, ಆಗುವುವು. ನಾಟಕದ ಕಥಾವಸ್ತು ಧಾರ್ಮಿಕವಿಷಯ. ಈ ನಾಟಕದಲ್ಲಿ ವೇಂಕಟನಾಥರು, ತಮಗೆ ತಮ್ಮ ಗುರುವಿನಲ್ಲಿದ್ದ ಪ್ರೀತಿ, ವಿಶ್ವಾಸ, ಗೌರವಗಳನ್ನು ಬಹುಚೆನ್ನಾಗಿ ವಿವರಿಸಿರುವುದಲ್ಲದೆ, ಸಿದ್ಧಾಂತವಿಷಯವನ್ನು ಬಹು ಚೆನ್ನಾಗಿ ಪ್ರತಿಪಾದಿಸಿದ್ದಾರೆ. ಒಟ್ಟಿನಲ್ಲಿ ನಾಟಕವು ಸರ್ವಾದರಣೀಯವಾಗಿಯೂ, ಜ್ಞಾನಪ್ರಚೋದಕವೂ ಆಗಿದೆ.

ನ್ಯಾಯಸಿದ್ಧಾಂಜನ, ನ್ಯಾಯಪರಿಶುದ್ಧಿ, ಸರ್ವಾರ್ಥಸಿದ್ಧಿ, ಶತದೂಷಿಣಿ, ತತ್ತ್ವಮುಕ್ತಾಕಲಾಪ, ಅಧಿಕರಣಸಾರಾವಳಿ ಮುಂತಾದ ವೇದಾಂತ ಪ್ರೌಢಗ್ರಂಥಗಳು ವೇಂಕಟನಾಥರ ಐದನೆಯಭಾಗದ ಗ್ರಂಥರಾಶಿಗಳಾಗಿವೆ. ರಾಮಾನುಜರು ಪರಿಷ್ಕರಿಸಿ, ಸ್ಥಾಪಿಸಿದ ದರ್ಶನವನ್ನು ಇನ್ನೂ ಸರ್ವಾಂಗ ಸುಂದರವಾಗಿ ವಿವರಿಸಿ, ಜನಪ್ರಿಯವಾಗುವಂತೆ ಮಾಡುವುದೇ ಈ ಗ್ರಂಥಗಳ ಉದ್ದೇಶ. ತತ್ತ್ವಮುಕ್ತಾಕಲಾಪ ಮತ್ತು ಅಧಿಕರಣ ಸಾರಾವಳಿ ಗ್ರಂಥಗಳು ಸ್ರಗ್ಧರಾ ವೃತ್ತದ ಪದ್ಯರೂಪಗಳಲ್ಲಿವೆ. ಹೀಗೆ ವೇದಾಂತ ಶಾಸ್ತ್ರವಿಷಯವನ್ನು ಪದ್ಯರೂಪದಲ್ಲಿ ವಿವರಿಸುವುದು ಬಹುಕಷ್ಟ ಮತ್ತು ಅತಿ ವಿರಳ. ಇದಕ್ಕಾಗಿ, ರಾಮಾನುಜರು ರಚಿಸಿದ ಶ್ರೀಭಾಷ್ಯ, ವೇದಾಂತಸಾರ, ವೇದಾಂತದೀಪ, ಗದ್ಯತ್ರಯ–ಮುಂತಾದ ಗ್ರಂಥಗಳ ವಸ್ತುವನ್ನೇ ಉಪಯೋಗಿಸಿಕೊಂಡು, ಅವರು ಸ್ಥಾಪಿಸಿದ ದರ್ಶನವನ್ನು ಹೆಚ್ಚು ಜನಪ್ರಿಯವಾಗುವಂತೆ ವೇಂಕಟನಾಥರು ಶ್ರಮಿಸಿದ್ದಾರೆ. ಇದರಿಂದ ರಾಮಾನುಜ ದರ್ಶನದ ಪ್ರಾಶಸ್ತ್ಯ, ಮಹಿಮೆ ಹೆಚ್ಚಿರುವುದಲ್ಲದೆ ಈ ದರ್ಶನವು ಪರಮಾತ್ಮ ಸಾಕ್ಷಾತ್ಕಾರಕ್ಕೆ ಅಗತ್ಯವಾದ ಸರ್ವಾದರಣೀಯವಾದ ಪದ್ಧತಿ ಎಂಬುದನ್ನು ಪರಿಷ್ಕರಿಸಿ ಸಾರಿದಂತಾಗಿದೆ.

ವೇಂಕಟನಾಥರ ಗ್ರಂಥರಾಶಿಯ ಕೊನೆಯಭಾಗ ವ್ಯಾಖ್ಯಾನಗ್ರಂಥಗಳು. ಇವುಗಳಲ್ಲಿ ಮುಖ್ಯವಾದುವು ತಾತ್ಪರ್ಯಚಂದ್ರಿಕೆ,

ಗೀತಾರ್ಥ ಸಂಗ್ರಹರಕ್ಷೆ, ಚತುಶ್ಶ್ಲೋಕಿಭಾಷ್ಯ ಈಶಾವಾಸ್ಯೋಪನಿಷತ್ ಭಾಷ್ಯ, ಮುಂತಾದುವು. ಇವುಗಳಲ್ಲದೆ, ವೇದಾಂತ ಕೌಸ್ತುಭ, ಕರಿಗಿರಿದಂಡಕ, ನಿಂದಾಸ್ತುತಿ, ಜಾಟುಧಾರಾಚಮತ್ಕಾರ ಮಂಜರಿ, ಇತ್ಯಾದಿ ಗ್ರಂಥಗಳನ್ನು ರಚಿಸಿದ್ದಾರೆ.

ಹೀಗೆ ವೇಂಕಟನಾಥರ ಗ್ರಂಥರಚನ ಸಾಮರ್ಥ್ಯ ಮಹತ್ತಾದುದು, ವೈವಿಧ್ಯ ಪೂರ್ಣವಾದುದು ಅವರನ್ನು ವಾದದಲ್ಲಿ, ವ್ಯಾಖ್ಯಾರ್ಥದಲ್ಲಿ ಜಯಿಸಲು ಬಂದ ಪಂಡಿತರು ಅವರ ವಿನಯ, ಸೌಜನ್ಯ ನೈಪುಣ್ಯ, ಪಾಂಡಿತ್ಯ- ಎಲ್ಲವನ್ನೂ ಮೆಚ್ಚಿ ಅವರ ಶಿಷ್ಯರಾಗಿಬಿಡುತ್ತಿದ್ದರು. ಒಟ್ಟಿನಲ್ಲಿ ವೇಂಕಟನಾಥರು ಗ್ರಂಥ ಬಾಹುಳ್ಯವನ್ನು ಹೆಚ್ಚಿಸಿ, ಕೃತಕೃತ್ಯರಾದುದಲ್ಲದೆ, ಜಗತ್ತಿನ ಜನರ ಮೆಚ್ಚಿಕೆಗೂ, ಕೃತಜ್ಞತೆಗೂ ಪಾತ್ರರಾಗಿದ್ದಾರೆ.

ಕವಿತಾರ್ಕಿಕಸಿಂಹಾಯ
ಕಲ್ಯಾಣ ಗುಣಶಾಲಿನೇ,
ಶ್ರೀಮತೇ ವೇಂಕಟೇಶಾಯ
ವೇದಾಂತಗುರವೇ ನಮಃ॥
ತುರಗವದನ ತೇಜೋ
ಬೃಂಹಿತಾಶಕ್ತಿಃ
ಕವಿಕಥಕ ಮೃಗೇಂದ್ರಃ
ಸರ್ವತಂತ್ರ ಸ್ವತಂತ್ರಃ
ಜಯತಿ ಗುರುರಭಾವಾಂ
ವೇದ ಚೂಡಾರ್ಯ ಸಂಸ್ಥಾ
ಮುನಿತರ ಜನ ಲಭ್ಯಾಂ
ಲಂಬಿತೋ ರಂಗಭರ್ತಾ

ಹಯಗ್ರೀವ ದೇವತೆಯ ತೇಜಸ್ಸಿನಿಂ ಉನ್ಮುಖವಾದ ಪ್ರತಿಭಾಶಕ್ತಿಯುಳ್ಳ, ಸರ್ವ ತಂತ್ರಸ್ವತಂತ್ರರಾದ, ಕವಿತಾರ್ಕಿಕಸಿಂಹ ಗುರುಪೀಠಕ್ಕೆ ಅರ್ಹವಾದ ವೇದಾಂ ತಾಚಾರ್ಯ ಎಂಬ ಬಿರುದನ್ನು ರಂಗನಾ ಸ್ವಾಮಿಯಿಂದಲೇ ಹೊಂದಿ ಸರ್ವೋತ್ಕೃಷ್ಟ ರಾಗಿ ಪ್ರಕಾಶಿಸುತ್ತಿದ್ದಾರೆ-

ಹೀಗೆ ವೇಂಕಟನಾಥರು ಸಿದ್ಧಾಂ ಸ್ಥಾಪನೆಯ ಮೂಲಕ ಧರ್ಮಸಂಸ್ಥಾಪ ಮಾಡಿ ಪೂಜ್ಯವ್ಯಕ್ತಿಗಳಾಗಿ, ಜಗತ್ತಿ ಕೃತಜ್ಞತೆಗೆ ಪಾತ್ರರಾಗಿದ್ದಾರೆ-



ಅನಂತಪುರದ ಶ್ರೀ ಅನಂತಪದ್ಮನಾಭಸ್ವಾಮಿ ದೇವಾಲಯ

ಸುತ್ತ ಮುತ್ತ ಗುಡ್ಡಗಳ ಕೋಟಿ–ಗುಡ್ಡಗಳಾದರೋ ಕೇವಲ ಮಳೆಗಾಲದಲ್ಲಿ ಮಾತ್ರ ಹಸಿರು ಸೀರೆಯುಡುತ್ತಾ, ಬೇಸಗೆ ಬಂದಂತೆ ಬೆತ್ತಲೆಯಾಗುತ್ತವೆ. ಬೇಸಗೆಯಲ್ಲಿ ಗಿಡ–ಗಂಟೆಗಳಷ್ಟೆ ಗೋಚರ. ಮೂಡಣ ಸಹ್ಯಾದ್ರಿ ಶೃಂಗ ಪಡುವಣ ಅರಬ್ಬೀ ಕಡಲು ಹವೆಯನ್ನು ಎಲ್ಲಾ ಋತುಗಳಲ್ಲೂ ಆಹ್ಲಾದಕರವಾಗಿರಿಸಿದೆ. ಈ ಮರುಭೂಮಿ ಮಧ್ಯೆಯೊಂದು ವಿಸ್ಮಯದ ಓಯಸಿಸ್. ವಿಶಾಲವಾದ ಸರೋವರದ ಮಧ್ಯೆ ಹಿಂದು ದೇವಸ್ಥಾನ. ಇದೇ ಅನಂತಪುರದ ಅನಂತಪದ್ಮನಾಭಸ್ವಾಮಿಯ ಕ್ಷೇತ್ರ.

ಹಿಂದೆ ಕರ್ನಾಟಕ ರಾಜ್ಯಕ್ಕೆ ಸೇರಿದ ಆದರೆ ಈಗ ಕೇರಳ ರಾಜ್ಯಕ್ಕೆ ಸೇರಿದ ಕಾಸರಗೊಂಡು ಜಿಲ್ಲೆ ಅನೇಕ ಐತಿಹಾಸಿಕ ದೇವಸ್ಥಾನಗಳಿಗೆ ಪ್ರಸಿದ್ಧವಾಗಿದೆ. ಅದರಲ್ಲೊಂದು ಬಹುಶಃ ದೇಶದಲ್ಲಿ ಬೆರಳೆಣಿಕೆಯಲ್ಲಿರುವ, ಕೆಲವು ಸರೋವರದ ಮಧ್ಯದಲ್ಲಿರುವ ದೇವಸ್ಥಾನಗಳಲ್ಲಿ ಈ ಕ್ಷೇತ್ರ ಬಹಳ ಪ್ರಸಿದ್ಧವಾದುದು. ಕಾಸರಗೋಡು ನಗರದಿಂದ ಕೇವಲ 10 ಕಿ.ಮಿ. ದೂರದಲ್ಲಿ ಈ ಕ್ಷೇತ್ರವಿದೆ. ಉತ್ತಮ ವಾಹನ ಸೌಕರ್ಯಗಳನ್ನು ಹೊಂದಿದೆ.

ಈ ವಿಶಾಲವಾದ ಸರೋವರವು ಪಾರೆ ಕಲ್ಲನ್ನು ಕಡಿದು ಮಾಡಿದಂತೆ ತೋರುತ್ತದೆ. ಸುಮಾರು 300 ಅಡಿಗಳಷ್ಟು ಜಚ್ಚಾಕವನ್ನು ಹೊಂದಿದೆ ಈ ಸರೋವರ. ಅನಂತಪದ್ಮನಾಭಸ್ವಾಮಿಯ ದೇವಾಲಯವು ಈ ಸರೋವರದ ಮಧ್ಯದಲ್ಲಿದೆ. ಸರೋವರದ ಮೇಲ್ಮೈಯನ್ನು ತಲಪಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಮೆಟ್ಟಿಲುಗಳನ್ನು ಇಳಿದಾಗ ಮೂಡು ಗೋಪುರ ಸಿಗುವುದು. ಗೋಪುರವನ್ನು ದಾಟಿದಾಗ ಸರೋವರ ನಮಗೆದುರಾಗುತ್ತದೆ. ಇಲ್ಲಿಂದ ಮುಂದೆ ದೇವರ ಗುಡಿಯನ್ನು ತಲುಪಲು ಶಾಶ್ವತವಾದ ಕಲ್ಲಿನ ಸಂಕವನ್ನು ಮಾಡಲಾಗಿದೆ. ಸಂಕದ ಮೂಲಕ ಒಳ ಪ್ರವೇಶಿಸಿದಾಗ ನಮಸ್ಕಾರ ಮಂಟಪ ಸಿಗುವುದು. ನಮಸ್ಕಾರ ಮಂಟಪದಿಂದ ಮುಂದುವರಿದಾಗ ಸ್ವಾಮಿಯನ್ನು ಗರ್ಭಗುಡಿಯಲ್ಲಿ ದರ್ಶಿಸಬಹುದು. ಗುಡಿಗೆ ಸುತ್ತು ಬರುವಂತೆ ಜಗಲಿಯನ್ನು ನಿರ್ಮಿಸಲಾಗಿದೆ.

ಗರ್ಭಗುಡಿಯಲ್ಲಿ ನಿತ್ಯ ಚೈತನ್ಯವನ್ನು ಮೂಡಿಸುವ ಶ್ರೀ ಅನಂತಪದ್ಮನಾಭಸ್ವಾಮಿಯು ಅನಂತನ ಮೇಲೆ ಕುಳಿತ ವಿಗ್ರಹವಿದೆ. ಇಕ್ಕೆಡೆಗಳಲ್ಲಿ ಭೂದೇವಿ–ಶ್ರೀದೇವಿಯರು ಜೊತೆಗಾತಿಯರಾಗಿದ್ದಾರೆ. ಗರುಡ ಮತ್ತು ಆಂಜನೇಯ ಶ್ರೀ ಸ್ವಾಮಿಗೆ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ದೇವಕನ್ನಿಕೆಯರು ಚಾಮರವನ್ನು ಬೀಸುತ್ತಾ ದೇವರ ಸೇವೆಯಲ್ಲಿ ನಿರತರಾಗಿದ್ದಾರೆ. ಜಯ–ವಿಜಯರು ಕಾವಲು ದ್ವಾರದಲ್ಲಿದ್ದಾರೆ.

ಗರ್ಭಗುಡಿಯ ಎಡಕ್ಕೆ, ಸರೋವರದ ಹೊರಕ್ಕೆ ಅಶ್ವತ್ಥಮರದ ಕಟ್ಟೆಯೊಂದಿದೆ. ಇದು ರಕ್ತೇಶ್ವರೀ ಕಟ್ಟೆಯಾಗಿದೆ. ಸಮೀಪದಲ್ಲಿ ವಿಘ್ನವಿನಾಶಕ ಶ್ರೀ ಮಹಾಗಣಪತಿಯ ಗುಡಿಯಿದೆ. ಈ ಗುಡಿಯ ಬಲಪಾರ್ಶ್ವದಲ್ಲೊಂದು ಪುರಾತನ ಶಿಲಾಲೇಖವಿದೆ. ಈ ಶಿಲಾಲೇಖನವನ್ನು ಈವರೆಗೂ ಯಾರಿಗೂ ಓದಲು ಸಾಧ್ಯವಾಗಿಲ್ಲ. ಇದನ್ನು ಅರ್ಥವಿಸಿದಾಗ ಈ ಕ್ಷೇತ್ರದ ಇನ್ನೂ ಹಲವು ಸಂಗತಿಗಳನ್ನು ತಿಳಿಯಬಹುದಾಗಿದೆ.

ದೇವಸ್ಥಾನದ ಮೊಸಳೆ

ಕೆಲವು ದೇವಸ್ಥಾನಗಳಲ್ಲಿ ದೇವಸ್ಥಾನದ ಆನೆಯೆಂಬುದೊಂದಿದೆ. ಆದರೆ ಈ ದೇವಸ್ಥಾನದ ಶ್ರೀ ಅನಂತಪದ್ಮನಾಭಸ್ವಾಮಿಗೊಂದು ಮೊಸಳೆ. ಅಂದರೆ ದೇವಸ್ಥಾನಕ್ಕೊಂದು ಶಾಶ್ವತ ಮೊಸಳೆ ಪರಂಪರೆಯಿದೆ. ದೇವಸ್ಥಾನಕ್ಕೆ ಜಗಲಿಯಲ್ಲಿ ಸುತ್ತುಬರುವಾಗ ಹಿಮ್ಮೊಮ್ಮೆ ಈ ಮೊಸಳೆ ಗೋಚರಿಸುವುದಿದೆ. ಪರಂಪರೆಯೋ ಎಂಬಂತೆ ಈ ಸರೋವರಕ್ಕೆ ಒಂದೇ ಒಂದು ಮೊಸಳೆ ಮಾತ್ರ ಇರುತ್ತದೆ. ಈ ಮೊಸಳೆಗಳ ಪರಂಪರೆಯ ಕತೆ ಬಹಳ ರೋಚಕವಾಗಿದ್ದು ದೇವಸ್ಥಾನದ ಇತಿಹಾಸ ಮತ್ತು ಪ್ರಸಿದ್ಧಿಗೆ ಇದೂ ಒಂದು ಪ್ರಮುಖ ಕಾರಣವಾಗಿದೆ.

ಈಗಿರುವ ಮೊಸಳೆಗಿಂತ ಮೊದಲು 'ಬಬಿಯಾ' ಎಂಬ ಹೆಸರಿನ ಮೊಸಳೆಯೊಂದಿತ್ತು. ಹೆಸರೆತ್ತಿ ಕರೆದಾಗ ಬರುತ್ತಿತ್ತು. ಈ ದೇವಸ್ಥಾನದ ಸಮೀಪದಲ್ಲಿರುವ ಮನೆಯ 82 ವರ್ಷದ ಹಿರಿಯ ವ್ಯಕ್ತಿ ಇದನ್ನು ಕಂಡು ಮಾತನಾಡಿಸಿದವರಾಗಿದ್ದಾರೆ. 1945 ರಲ್ಲಿ ಬ್ರಿಟಿಷರ ಮಿಲಿಟರಿ ಠಾಣ ಇದಾಗಿತ್ತು. ಅವರಲ್ಲಿ ಒಬ್ಬ ಸೈನಿಕ ಮೊಸಳೆಯನ್ನು ಕರೆದ. ಓಗೊಟ್ಟ ಮೊಸಳೆ ಅವನ ಬಂದೂಕಿನ ಗುಂಡಿಗೆ ಬಲಿಯಾಯಿತು. ಆ ಸೈನಿಕ ಆಗಲೇ ಅಲ್ಲೇ ವಿಷಬಾಧಿತನಾಗಿ ಸಾಯಲ್ಪಟ್ಟ. ನಂತರ ಕೆಲವು ದಿನಗಳ ಬಳಿಕ ಈಗಿರುವ ಮೊಸಳೆ ಕಂಡುಬಂದಿತು. ಕಳೆದ 42 ವರ್ಷಗಳಿಂದ ಈ ಮೊಸಳೆ ಇಲ್ಲಿನ ಸರೋವರದ ಚಿಕ್ಕ–ಪುಟ್ಟ ಮೀನುಗಳನ್ನು ಮಾತ್ರ ತಿಂದು ಬದುಕುತ್ತಿದೆ. ಮೊದಲಿನ ಮೊಸಳೆಯಂತೆ ಕರೆದಾಗ ಹಿಂಬಾಲಿಸಿ ಬರುವುದಿಲ್ಲ. ದೇವರ ನೈವೇದ್ಯಕ್ಕಾಗಿಯೂ ಆಸೆ ಪಡುವುದಿಲ್ಲ. (ಮೊದಲಿನ ಮೊಸಳೆಯಾದರೋ ನೈವೇದ್ಯವನ್ನು ತಿಂದು ಉರುಳಿ (ಪಾತ್ರೆ) ಯನ್ನು ಸರೋವರದ ನೀರಿನಲ್ಲಿ ತೊಳೆದು ತಂದು ಅರ್ಚಕನಿಗೆ ಪುನಃ ಕೊಡುತ್ತಿತ್ತಂತೆ!) ಸರೋವರದ ಬದಿಯ ಸುರಂಗವನ್ನೇ ತನ್ನ ಶಾಶ್ವತ ಮನೆಯನ್ನಾಗಿಸಿಕೊಂಡಿದೆ. ಅಪರೂಪಕ್ಕೊಮ್ಮೆ ತನ್ನ ಇರವನ್ನು ಸೂಚಿಸಲು ಪ್ರವಾಸಿಗಳಿಗೆ ಭಕ್ತರಿಗೆ ದರ್ಶನ ಕೊಡುವುದುಂಟು.

ಕೆಲವು ದೇವಸ್ಥಾನಗಳಲ್ಲಿ ಈ ರೀತಿಯ ಪ್ರಾಣಿಗಳ ನಂಟು ಈಗಲೂ ಉಂಟು.

ಶ್ರೀ ಶಂಕರ ಸಾರಡ್ಕ

ತಮಿಳುನಾಡಿನ ತಿರುಕ್ಕಳು ಕುಂಡ್ರ ಎಂಬ ಶಿವಕ್ಷೇತ್ರದಲ್ಲಿ ಎರಡು ಬಿಳೀ ಹದ್ದುಗಳು ದೇವಸ್ಥಾನದ ಅರ್ಚಕನಿಂದ ಗೊತ್ತಾದ ಹೊತ್ತಿನಲ್ಲಿ ಬಂದು ಪಾಯಸವನ್ನು ಕುಕ್ಕಿ ತಿಂದುಹೋಗುವ ಕ್ರಮ ಈಗಲೂ ಇದೆ. ಇದನ್ನು ನೋಡಲು ಜನ ಜಾತ್ರೆಯೇ ಪ್ರತಿ ದಿನ ಸೇರುತ್ತದಂತೆ.

ವಿಶೇಷವಾದ ಗುಹೆ :

ಸರೋವರದ ಈಶಾನ್ಯಭಾಗದಲ್ಲಿ ಶ್ರೀ ಜಲದುರ್ಗಾ ಗುಡಿಯ ಸಮೀಪದಲ್ಲಿ ಈ ವಿಶೇಷ ಗುಹೆಯಿದೆ. ಗುಹೆಯ ಮೇಲೆ ಮೊದಲು ಹೇಳಿದ ಗಣಪತಿಯ ಗುಡಿಯಿದೆ. ಗುಹೆಯೊಳಗೆ ಪ್ರವೇಶಿಸಿದೊಡನೆ ವಿಶಾಲವಾದ ಸ್ಥಳವು ಗೋಚರಿಸುವುದು. ಈ ಗುಹೆಯು ಉತ್ತರಭಾಗದಲ್ಲಿ ಮುಂದುವರೆದು ಪಶ್ಚಿಮ ಸಮುದ್ರವನ್ನು ಸೇರುತ್ತದೆ ಎಂಬ ಇತಿಹಾಸವಿದೆ. ಈ ಗುಹೆಯಲ್ಲಿ ಸುಮಾರು ಎರಡು ಅಡಿ ಆಳದ ಹೊಂಡವೊಂದರಲ್ಲಿ ಎಂತಹ ಕಾಲದಲ್ಲೂ ನೀರಿಗೆ ಬರ ಬರುವುದಿಲ್ಲ ಎಂಬ ಪ್ರತೀತಿಯಿದೆ.

ಅನಂತಪುರ—ಬಿಲ್ವಮಂಗಲ :

ವಿಷ್ಣುಭಕ್ತನಾದ ಶ್ರೀ ಬಿಲ್ವಮಂಗಲ ಸ್ವಾಮಿಯು ದೈವೀಕಾರ್ಯಗಳಿಗಾಗಿ ಕೆಲವು ಸಮಯ ಇಲ್ಲಿ ತಂಗಿದ್ದಾಗ, ಮಗುವೊಂದು ಬಂದು ಆಗಾಗ ದರ್ಶನ ಕೊಡುತ್ತಿತ್ತಂತೆ. ಒಂದು ದಿನ ಆ ಮಗುವು—"ಇನ್ನು ನೀವು ನನ್ನನ್ನು ಅನಂತನ ಕಾಡಿನಲ್ಲಿ ಕಾಣುವಿರಿ" ಎಂದು ನುಡಿದು ಮಾಯವಾಯಿತಂತೆ. ಮಗುವು ಇದ್ದ ಸ್ಥಳದಲ್ಲಿ ಗುಹೆಯೊಂದಾಯಿತು. ಸ್ವಾಮಿಯು ಗುಹಾದಾರಿಯಾಗಿ ಹೋಗುತ್ತಿರುವ ದಿವ್ಯ ಜ್ಯೋತಿಯನ್ನನುಸರಿಸಿ ಹೋದಾಗ ಗುಹೆಯು ಪಶ್ಚಿಮ ಸಮುದ್ರಕ್ಕೆ ತೆರೆದುಕೊಂಡಿತು. ಮುಂದೆ ಸ್ವಾಮಿಯು ತೆಂಕುಮುಖವಾಗಿ ನಡೆದು ಅನಂತನ ಕಾಡಿ (ತಿರುವನಂತಪುರ) ನಲ್ಲಿ ಭಗವಂತನ ದರ್ಶನ ಪಡೆದರು. ಈ ಸ್ಥಳದಲ್ಲಿ ಈಗ ಶ್ರೀ ಅನಂತಪದ್ಮನಾಭಸ್ವಾಮಿ ದೇವಸ್ಥಾನವಿದೆ. ತಿರುವನಂತಪುರದ ಈ ಕ್ಷೇತ್ರಕ್ಕೂ ಮತ್ತು ಇಲ್ಲಿನ ಅನಂತಪುರದ ಕ್ಷೇತ್ರಕ್ಕೂ ಹಲವಾರು ಸಾಮ್ಯಗಳಿವೆ.

ಶ್ರೀ ಪಾರ್ಥಸಾರಥಿ ದೇವಸ್ಥಾನ :

ಸರೋವರದ ನೈರುತ್ಯಭಾಗದಲ್ಲಿ ಶ್ರೀ ಬಿಲ್ವಮಂಗಲಸ್ವಾಮಿಗಳು ಪ್ರತಿಷ್ಠೆ ಮಾಡಿದ ಕಲ್ಲಿನಸುಂದರ ಪಾರ್ಥಸಾರಥಿ ವಿಗ್ರಹವಿದೆ. ಎಲ್ಲಾ ಕೃಷ್ಣಾಷ್ಟಮಿ ದಿನದಂದು ಇಲ್ಲಿ ಭಜನಾ ಕಾರ್ಯಕ್ರಮಗಳಿರುತ್ತವೆ. ರಕ್ತೇಶ್ವರಿ ಕಟ್ಟೆಯಲ್ಲಿ ಪ್ರತೀ ಮಂಗಳವಾರ ಮತ್ತು ಸಂಕ್ರಮಣದಂದು "ತಂಬಿಲ" ನಡೆಯುತ್ತದೆ.

ಜೀರ್ಣೋದ್ಧಾರ :

1972ರಲ್ಲಿ ಈ ದೇವಸ್ಥಾನದ ಜೀರ್ಣೋದ್ಧಾರ ಪ್ರಾರಂಭವಾಯಿತು. ಕಾಂಚೀಪುರದ ಜಗದ್ಗುರು ಶಂಕರಾಚಾರ್ಯ ಶ್ರೀ ಜಯೇಂದ್ರಸರಸ್ವತೀಸ್ವಾಮಿಗಳು ಈ ದೇವಸ್ಥಾನದ ಜೀರ್ಣಸ್ಥಿತಿಯನ್ನು ಕಂಡು ಡಾ। ಪಿ. ಎಸ್. ಶಾಸ್ತ್ರಿಗಳ ನೇತೃತ್ವದಲ್ಲಿ ಒಂದು ಜೀರ್ಣೋದ್ಧಾರ ಸಮಿತಿಯನ್ನು ನೇಮಿಸಿದರು.

"ಓಂ ನಮೋ ಭಗವತೇ ವಾಸುದೇವಾಯ" ಎಂಬ ದಿವ್ಯಮಂತ್ರ ಬರೆದು ಅನೇಕ ಭಕ್ತಜನರು ನಡೆಸಿದ ಜಪಲಿಪಿ ಯಜ್ಞವು ದಿವ್ಯ ಶಕ್ತಿಯಾಗಿ ಪರಿಣಮಿಸಿ ಅಲ್ಪಾವಧಿಯಲ್ಲಿ ಜೀರ್ಣೋದ್ಧಾರದ ಕೆಲಸ ಪೂರ್ತಿಗೊಂಡಿತು.

ಜಾತ್ರೆ :

ಪ್ರತಿ ವರ್ಷ ಮೇಷ ಮಾಸ 5 ರಂದು ವರ್ಷಾವಧಿ ಜಾತ್ರೆ ಇಲ್ಲಿ ನಡೆಯುತ್ತದೆ. ಹಗಲು ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದು ರಾತ್ರಿ ತೆಪ್ಪೋತ್ಸವ, ಸಿಡಿಮದ್ದು ಸುಡುವಿಕೆಯಿಂದ ದೇವತಾರಾಧನೆ ನಡೆಯುತ್ತದೆ. ನಯನ ಮನೋಹರವಾದ ತೆಪ್ಪೋತ್ಸವವನ್ನು ನೋಡಲು ಊರು ಪರವೂರುಗಳಿಂದ ಜನ ಬರುತ್ತಾರೆ. ಇತರ ದಿನಗಳಲ್ಲಿ ಮಧ್ಯಾಹ್ನದ ಪೂಜೆಯ ನಂತರ ನೈವೇದ್ಯವನ್ನು ಬಲಿವಾಡಾಗಿ ಉಂಡು—ವಿಶ್ರಮಿಸಿಕೊಂಡು ಹೋಗುವ ವ್ಯವಸ್ಥೆಯಿದೆ.

ಪ್ರಶಾಂತ ವಾತಾವರಣದಿಂದ ಕೂಡಿದ ಈ ಸ್ಥಳಕ್ಕೆ ಇದಕ್ಕಿಂತಲೂ ಹೆಚ್ಚಿನ ಚರಿತ್ರೆ ಇದ್ದಿರಬೇಕು. ಹಿಂದೊಮ್ಮೆ ಅತ್ಯಂತ ವೈಭವದಿಂದ ಇದ್ದ ಕುರುಹುಗಳಿವೆ. ಈಗ ಮತ್ತೊಮ್ಮೆ ಜೀರ್ಣೋದ್ಧಾರಗೊಂಡು ಆ ವೈಭವದಂಚನ್ನು ತಲಪುತ್ತಿದೆ. ಒಮ್ಮೆ ಬಂದ ಯಾತ್ರಿಕರು ಭಕ್ತಿಪರವಶರಾಗಿ ಆಗಾಗ ಬರುತ್ತಿರುತ್ತಾರೆ.



ಅರಮನೆ ಹಾಗೂ ಗುರುಮನೆ

ಮಾನವನು ಆಧ್ಯಾತ್ಮಿಕ ವ್ಯಕ್ತಿ. ಅವನ ವ್ಯಕ್ತಿತ್ವವು ದೇಹ ಮನಸ್ಸು ಮತ್ತು ಆತ್ಮಗಳಿಂದ ಆಗಿದೆ. ನೈತಿಕ ಮತ್ತು ಆಧ್ಯಾತ್ಮಿಕ ಅಭ್ಯಾಸ ಬಲದಿಂದ ಮನುಷ್ಯ ಪ್ರಗತಿಹೊಂದಲು ಸಾಧ್ಯ. ಶಾಂತಿ ಮತ್ತು ಸುರಕ್ಷೆ ಸಮಾಜದಲ್ಲಿ ನೆಲೆಸಬೇಕಾದರೆ ನೈತಿಕ ಹಾಗೂ ಧಾರ್ಮಿಕ ವಾತಾವರಣ ಇರಬೇಕೆಂಬುದನ್ನು ಐತಿಹಾಸಿಕ ಘಟನೆಗಳು ತೋರಿಸುತ್ತವೆ.

ಅರಮನೆ-ಗುರುಮನೆ

ಪ್ರಜಾಪಾಲನೆಯೇ ರಾಜನ ಮುಖ್ಯ ಧರ್ಮ. ಪ್ರಜೆಗಳನ್ನು ಧರ್ಮದ ದೃಷ್ಟಿಯಿಂದ ನೋಡಿ ಸುನೀತಿಯಿಂದ ರಾಜ್ಯವನ್ನು ಸಂರಕ್ಷಿಸುವುದೇ ರಾಜನ ಮುಖ್ಯ ಕರ್ತವ್ಯವಾಗಿತ್ತು. ಗಂಗರಸರು, ಹೊಯ್ಸಳರು ರಾಜ್ಯವಿಚಾರಗಳಲ್ಲಿ, ಧರ್ಮಪರಿಪಾಲನೆ ಮತ್ತು ಇತರ ಪಾರಮಾರ್ಥಿಕ ವಿಷಯಗಳಲ್ಲಿ ರಾಜಗುರುವಿನ ಅಭಿಪ್ರಾಯ ಪಡೆದು ಒಂದು ನಿರ್ಣಯಕ್ಕೆ ಬರುತ್ತಿದ್ದರು. ರಾಜ್ಯದ ಭದ್ರತೆ-ಶಾರೀರಿಕ ಬಲ (ಕ್ಷಾತ್ರ) ಮತ್ತು ಆಧ್ಯಾತ್ಮ ಬಲ–ಇವೆರಡರ ಸಹಕಾರದ ಮೇಲೆ ಆಧಾರಗೊಂಡಿತ್ತು. ಪ್ರಾಮುಖ್ಯತೆಯಲ್ಲಿ ಇವೆರಡು ಬಲಗಳಲ್ಲಿ ತಾರತಮ್ಯವಿರಲಿಲ್ಲ. ಒಂದು ಕಾಲದಲ್ಲಿ ಸಾರ್ವಭೌಮಾಧಿಕಾರತ್ವ ಎದ್ದು ಕಾಣುತ್ತಿತ್ತು. ಕ್ರಮೇಣ ತಕ್ಕಡಿ ಆಧ್ಯಾತ್ಮ ಬಲದೆಡೆಗೆ ವಾಲಿತು. ರಾಜರುಗಳು ಪಟ್ಟಾಭಿಷೇಕ ಸಮಯದಲ್ಲಿ'ನನ್ನನ್ನು ಈ ಎರಡು ಬಲಗಳು ರಕ್ಷಿಸಲಿ' ಎಂದು ದೇವರನ್ನು ಪ್ರಾರ್ಥಿಸುತ್ತಿದ್ದರು. ಸಾರ್ವಭೌಮಾಧಿಕಾರಕ್ಕಿಂತ ಆಧ್ಯಾತ್ಮಬಲವನ್ನೂ ಉಚ್ಚಸ್ಥಾನದಲ್ಲಿಡುವುದೇ ಉಚಿತವೆಂದು ದೊರೆಗಳು ನಿರ್ಧರಿಸಿದರು. ಒಬ್ಬ ಸಮರ್ಥ ಗುರುವನ್ನು ಆಶ್ರಯಿಸಿ, ಗುರುವಿನ ಅಜ್ಞಾನುಸಾರವಾಗಿ ರಾಜನು ನಡೆಯಬೇಕೆಂಬ ವಿಧಿ ಜಾರಿಗೆ ಬಂತು. ಇದರಿಂದ ಕೆಲವೊಮ್ಮೆ ರಾಜನಿಗೆ ಆಜ್ಞಾ ಮಾಡುವ ಅಧಿಕಾರವನ್ನು ರಾಜಗುರುಗಳು ಹೊಂದಿದ್ದರು. ಗುರುಗಳ ಮಾತನ್ನು ತೆಗೆದು ಹಾಕುವ ಧೈರ್ಯ ರಾಜನಿಗಿರಲಿಲ್ಲ.

ಗುರುವೆಂದರೆ ಮಾರ್ಗದರ್ಶಕ, ಸದ್ಬೋಧಕ ಮತ್ತು ಜ್ಞಾನವನ್ನು ಬೀರುವ ಒಬ್ಬ ಸಮರ್ಥ ವ್ಯಕ್ತಿ. ಧರ್ಮಾಚರಣೆ, ಪರಮತ ಸಹನೆ, ಗುರುಹಿರಿಯರಲ್ಲಿ ಭಕ್ತಿ, ವಿನಯ–ಇತ್ಯಾದಿ ಕಲ್ಯಾಣ ಗುಣಗಳು ಜನಜೀವನದಲ್ಲಿ ಬೆರೆಯಲು ಮತ್ತು ಸಂಸ್ಕೃತಿಯ ತಳಹದಿ ಭದ್ರವಾಗಿರಲು ಆಚಾರ್ಯರು ಬಹಳಷ್ಟು ಶ್ರಮಿಸಿದ್ದಾರೆ. ಸರ್ವಧರ್ಮ ಪಾಲನೆಯೇ ರಾಜ್ಯಸಂವಿಧಾನದ ಉದ್ದೇಶವಾಗಿತ್ತು. ಉದಾ-ವಿಜಯನಗರದರಸರು ಎಲ್ಲಾ ವರ್ಣದವರನ್ನೂ ಅವರವರ ಧರ್ಮದಲ್ಲಿ ನಿಷ್ಠೆಯಿಂದ ಇರುವಂತೆ ವ್ಯವಸ್ಥೆಗೊಳಿಸಿದರು. ವಿವಿಧ ಕೋಮುಗಳ ನಡುವೆ ಸೌಹಾರ್ದವನ್ನು ಬೆಳೆಸಿದರು. ಇಂತಹ ಸತ್ಕಾರ್ಯಗಳನ್ನು ಮಾಡಲು ಪ್ರಚೋದಿಸಿದವರು ವಿದ್ಯಾರಣ್ಯರು. ಜಾತಿಯ ಕಲಹಗಳನ್ನು ತಡೆಗಟ್ಟಲು ಬುಕ್ಕರಾಯನಿಗೆ ಸಲಹೆಗಳನ್ನು ಕೊಡುತ್ತಿದ್ದರು. ರಾಮಕೃಷ್ಣ ಪರಮಹಂಸರು ಹಿಂದೂ ಧರ್ಮದ ಜೊತೆಗೆ ಇತರ ಧರ್ಮಗಳನ್ನೂ ಆಚರಿಸಿದರು.

ಆಚಾರ್ಯ ಯಾರು?

ಭಾರತದ ಧಾರ್ಮಿಕ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಆಚಾರ್ಯರ ಸ್ಥಾನ ಅತ್ಯಂತ ಹಿರಿದಾದುದು. ಸನ್ಯಾಸ ಪದ್ಧತಿಯೂ ವಿಶೇಷ ಪಾತ್ರವನ್ನು ವಹಿಸಿದೆ. ಮಾನವ ಜೀವನದ ಮುಖ್ಯೋದ್ದೇಶವೇನು ಮತ್ತು ಅವನಿಗೆ ಬೇಕಾಗಿರುವ ಜ್ಞಾನಬಲ ಸದ್ವಿಚಾರ ಸದಾಚಾರ ಭಾವನೆಗಳು ಯಾವುವು? ಎಂಬುದನ್ನು ಅವರ ಜೀವನ ಮತ್ತು ತತ್ತ್ವಗಳು ತೋರಿಸುತ್ತವೆ. ಅವರ ಆಲೋಚನೆ ತತ್ತ್ವ ಮತ್ತು ದರ್ಶನಗಳು ಸನಾತನವಾದುದು.

ಆಚಿನೋತಿ ಹಿ ಶಾಸ್ತ್ರಾರ್ಥಾನ್
ಆಚಾರೇ ಸ್ಥಾಪಯತ್ಯಪಿ
ಸ್ವಯಮಾಚರತೇ ಯಸ್ಮಾತ್
ತಸ್ಮಾದಾಚಾರ್ಯ ಉಚ್ಯತೇ

ಪ್ರಾಚೀನ ಕಾಲದಿಂದಲೂ ಭಾರತ ಇಂತಹ ಶ್ರೇಷ್ಠ ವ್ಯಕ್ತಿಗಳಿಗೆ ಜನ್ಮವಿತ್ತಿದೆ. ಭಾರತದ ಮತ ಚರಿತ್ರೆಯಲ್ಲಿ ಅನೇಕ ಮತಗಳ ಬೆಳವಣಿಗೆಯನ್ನು ನೋಡಬಹುದು. ಇದರಿಂದ ಮತಾಚಾರ್ಯರೂ, ಮತ್ತು ಪೀಠಾಧಿಪತಿಗಳು ಹುಟ್ಟಿಕೊಂಡರು. ಕ್ರಮಬದ್ಧ ರೀತಿಯಲ್ಲೇ ಸನ್ಯಾಸವನ್ನು ಅವಲಂಬಿಸಬೇಕಾಗಿಲ್ಲ. ಮನೆಯಲ್ಲೇ ಇದ್ದು ಪ್ರಾಪಂಚಿಕ ವ್ಯವಹಾರಗಳಿಗೆ ಗಮನ ಕೊಡದೆ ಉನ್ನತ ಜ್ಞಾನವನ್ನು ಪಡೆದು ಮೋಕ್ಷಸಾಧನೆಯನ್ನು ಮಾಡಿದವರು ಗೃಹಸ್ಥಾಚಾರ್ಯರು. ಉದಾ: ವೇದಾಂತ ದೇಶಿಕರು. ಆಚಾರ್ಯಪರಂಪರೆಯಲ್ಲಿ ಇವರಿಗೂ ರಾಮಾನುಜರಷ್ಟೇ ಉತ್ತಮ ಸ್ಥಾನವಿದೆ. ಪ್ರಾಪಂಚಿಕ ಭೋಗಗಳಿಂದ ವಿರಕ್ತರಾಗಿದ್ದಾರೆ. ಪುರಸ್ಕಾರಗಳಿಗೆ ಆಸೆ ಪಡುವವರಲ್ಲ ಉದಾ: ವಿದ್ಯಾರಣ್ಯರ ಸಲಹೆಯಂತೆ ಬುಕ್ಕರಾಯನು, ಆಸ್ಥಾನದಲ್ಲಿ ಗೌರವಸ್ಥಾನವೊಂದನ್ನು ಕೊಡಲು ದೇಶಿಕರಿಗೆ ಆಹ್ವಾನ ಕಳುಹಿಸಿದನು. "ಭಗವಂತನ ಸೇವಾಸುಖವನ್ನು ಬಿಟ್ಟು ಬೇರಾವ ಭೋಗಕ್ಕೂ ನಾನು ಆಸೆ ಪಡುವುದಿಲ್ಲ" ಎಂದು ಪತ್ರಬರೆದು ಜೊತೆಯಲ್ಲಿ 'ವೈರಾಗ್ಯಪಂಚಕ' ವೆಂಬ ಪದ್ಯ ಮಾಲೆಯನ್ನು ಕಳುಹಿಸಿದರು ದೇಶಿಕರು. ನಾಥ ಮುನಿಗಳೂ ಒಬ್ಬ ಗೃಹಸ್ಥರು.

ಆಚಾರ್ಯಪರಂಪರೆ, ಮಠ, ಆಶ್ರಮಗಳ ಸ್ಥಾಪನೆ ಹೇಗೆ ಆರಂಭವಾಯಿತು ಎಂಬುದನ್ನು ಆಯಾ ಮತಚರಿತ್ರೆಗಳಲ್ಲಿ ನೋಡಬಹುದು, ಯತಿತ್ರಯರಾದ ಶಂಕರ–ರಾಮಾನುಜ – ಮಧ್ವರು ಭಾರತೀಯ ಸಂಸ್ಕೃತಿಯ ಇತಿಹಾಸದ ಮಹಾಪುರುಷರೆನ್ನಿಸಿಕೊಂಡಿದ್ದಾರೆ. ಇವರುಗಳ ದಿವ್ಯ ಚರಿತ್ರೆಯು 1 ಜನ್ಮ ಮತ್ತು ಬಾಲ್ಯಾವಸ್ಥೆ 2 ತುರ್ಯಾಶ್ರಮದಿಂದ ಬೃಂದಾವನಸ್ಥರಾಗುವ ಕಾಲವನ್ನೂ 3 ಶಿಷ್ಯಪರಂಪರೆಯನ್ನು ಮತ್ತು 4 ಅಂದಿನ ಸಾಮ್ರಾಟರ ಕಾಲವನ್ನು ತಿಳಿಸುತ್ತದೆ.

ಆಚಾರ್ಯರ ಜನ್ಮ ಭಾರತದ ಇತಿಹಾಸದಲ್ಲಿ ಒಂದು ಮುಖ್ಯ ಘಟ್ಟವಾಗಿದೆ. ಅದೊಂದು ಪರ್ವಕಾಲ. ಆಗ ದೇಶದ ಪರಿಸ್ಥಿತಿಯು ರಾಜಕೀಯ ಅಶಾಂತಿ, ಒಳಜಗಳ, ಘರ್ಷಣೆ ಧಾರ್ಮಿಕ ಸಂಸ್ಥೆಗಳ ಮತ್ತು ಗ್ರಂಥಗಳ ನಾಶ, ದ್ವೇಷಾಸೂಯೆಗಳೂ ಮತ್ತು ಇನ್ನೂ ಭಯಂಕರ ಸನ್ನಿವೇಶಗಳಿಂದ ಕೂಡಿತ್ತು. ಮತೀಯ ಪಂಥಗಳು ಒಡಕುಂಟು ಮಾಡುತ್ತಿದ್ದುವು ವೈದಿಕ ಧರ್ಮಕ್ಯೆದಕ್ಕೆ ಉಂಟಾದಾಗ ಶಂಕರರ ಜನ್ಮವಾಯಿತು. ರಾಮಾನುಜರ ಕಾಲದಲ್ಲಿ ಶ್ರೀವೈಷ್ಣವ ಸಂಪ್ರದಾಯದಲ್ಲಿ ಒಡಕುಂಟಾಗಿ ಭಕ್ತಿ ಪಂಥಕ್ಕೆ ವಿಪತ್ತುಂಟಾಗಿತ್ತು. ಮಧ್ವರ ಕಾಲದಲ್ಲಿ ಶಾಕ್ತಮತಗಳ ಪ್ರಾಬಲ್ಯವಿತ್ತು. ಪಶುಪತಿ ರಾಜನಿಂದ ಯಾವ ಸಹಾಯವೂ ಇಲ್ಲದಾಯಿತು. ದೇಶವು ಮುಸ್ಲಿಮರ ದಬ್ಬಾಳಿಕೆಗೆ ಸಿಕ್ಕಿಕೊಂಡಾಗ ಹಿಂದೂ ಮಠಗಳು ಸನ್ಯಾಸ ಪರಂಪರೆಯನ್ನು ಕಾಪಾಡಿದವು.

(29 ನೇ ಪುಟನೋಡಿ)

ಶ್ರೀ ಸಿ. ಗೋವಿಂದಾಚಾರ್ಯ

ತಿರುಮಲೆಯಲ್ಲಿ ವಸತಿ ಸೌಲಭ್ಯ

ಸರ್ವತೋಮುಖವಾಗಿ ಏರಿದ ದರಗಳ ಹಿನ್ನೆಲೆಯಲ್ಲಿ ತಿರುಮಲೆಯಲ್ಲಿನ ತಿ. ತಿ. ದೇವಸ್ಥಾನಗಳ ವಸತಿ ಸೌಲಭ್ಯದ ದರಗಳನ್ನು ಪುನರ್ವಿಮರ್ಶಿತಗೊಳಿಸಲಾಗಿದೆ. ತಿರುಮಲೆಯಲ್ಲಿ ದೊರೆಯುವ ವಸತಿಗಳ ಬಾಡಿಗೆಯ ಪರಿಷ್ಕೃತ ದರಗಳನ್ನು ಕೆಳಗೆ ಸೂಚಿಸಲಾಗಿದೆ. ಯಾತ್ರಿಕರು ದಯವಿಟ್ಟು ಗಮನಿಸಿ ಸಹಕರಿಸಬೇಕಾಗಿ ವಿನಂತಿ.

ವಸತಿ – ಸ್ಥಳ		ಪರಿಷ್ಕೃತ ಬಾಡಿಗೆ/ದಿನಕ್ಕೆ
ವಿಶೇಷರೀತಿಯ ಕಾಟೇಜುಗಳು	ರೂ	100–00
ಟಿ. ಬಿ. ಒಳಗಿನ ಕಾಟೇಜುಗಳು	ರೂ	70–00
ಟಿ. ಬಿ. ಹೊರಗಿನ ಕಾಟೇಜುಗಳು		
ಮೂರನೆಯ ಸಾಲೂ ಸೇರಿದಂತೆ :		
ಎ ವಿಭಾಗ– ಗ್ಯೆಸರ್‌ನೊಂದಿಗೆ	ರೂ	20–00
ಬಿ ವಿಭಾಗ– ಗ್ಯೆಸರ್ ರಹಿತ	ರೂ	12–00
ವಿ.ವಿ.ಸಿ. ಹಾಗೂ ಎಂ.ಬಿ ಸಿ. 31 ಹಾಗೂ 26	ರೂ	70–00
ಎಂ.ಬಿ.ಸಿ. ಎ–ಭಾಗ ಗ್ಯೆಸರ್‌ನೊಂದಿಗೆ	ರೂ	20–00
ಎಂ.ಬಿ.ಸಿ. ಬಿ–ಭಾಗ ಗ್ಯೆಸರ್ ರಹಿತ	ರೂ	12–00
ಟಿ.ಬಿ. ಸೂಟ್‌ಗಳು ಗ್ಯೆಸರ್‌ನೊಂದಿಗೆ	ರೂ	15–00
ಎ.ಟಿ.ಸಿ. ಸೂಟ್‌ಗಳು ಗ್ಯೆಸರ್ ರಹಿತ	ರೂ	10–00
ಎ.ಟಿ.ಸಿ. ನೆಲ ಅಂತಸ್ತು		
ಎ–ಭಾಗ ಮೊದಲ ಅಂತಸ್ತಿನಲ್ಲಿಯಂತೆ	ರೂ	30–00
ಬಿ–ಭಾಗ	ರೂ	30–00
ಎಸ್.ಎಂ.ಸಿ., ಎಸ್.ಎನ್.ಸಿ., ಎ.ಎನ್.ಸಿ ,		
ಜಿ.ಎನ್.ಸಿ., ಎಚ್.ವಿ ಸಿ. :		
ಎ–ಭಾಗ ಗ್ಯೆಸರ್ ರಹಿತ	ರೂ	12–00
ಬಿ–ಭಾಗ ”	ರೂ	12–00
ಎಚ್.ವಿ.ಡಿ.ಸಿ. ಸೂಟ್ಸ್ (ಪ್ರತಿಯೊಂದು) ಗ್ಯೆಸರ್ ನೊಡನೆ	ರೂ	25–00
ಎಚ್.ವಿ.ಸಿ. ಸೂಟ್ಸ್ (ಪ್ರತಿಯೊಂದು) ಗ್ಯೆಸರ್‌ರಹಿತ	ರೂ	12–00
ಎಚ್.ವಿ.ಸಿ. ಅತಿಥಿಗೃಹ ದೊಡ್ಡ ಸೂಟ್ (ಗ್ಯೆಸರ್‌ನೊಡನೆ)	ರೂ	50–00
” ” ಸಣ್ಣ ಸೂಟ್ (ಗ್ಯೆಸರ್ ರಹಿತ)	ರೂ	25–00
ಎಸ್.ವಿ. ಅತಿಥಿಗೃಹ ದೊಡ್ಡ ಸೂಟ್	ರೂ	70–00
” ” ಮೂಲೆ ಸೂಟ್	ರೂ	60–00
” ” ಇತರೆ	ರೂ	50–00
ಎನ್.ಜಿ. ಅತಿಥಿಗೃಹ I ಹಾಗೂ II		
ಮೂಲೆ ಸೂಟ್	ರೂ	60–00
ಇತರೆ	ರೂ	50–00
ಎಚ್.ಆರ್.ಜಿ. ಪೂರ್ತಿ ಕಾಟೇಜು	ರೂ	250–00
ಎಸ್. ಪಿ. ಅತಿಥಿಗೃಹ :		
ಮಾಸ್ಟರ್ ಸೂಟ್ ಸಂ. 9 ಹಾಗೂ		
ಕಿರಿಯ ಸೂಟ್‌ಗಳು ಸಂ. 7, 9 ಪರಿಷ್ಕರಣವಿಲ್ಲ	ರೂ	750–00
ಮಾಸ್ಟರ್ ಸೂಟ್ ಸಂ. 1		
ಕಿರಿಯ ಸೂಟ್ ಸಂ. 6 ”		
ಕಿರಿಯ ಸೂಟ್‌ಗಳು ಸಂ–2, 3, 4, 5,	ರೂ	750–00
ಶ್ರೀನಿಕೇತನ (ಪ್ರತಿ ಸೂಟ್),		
ಎಸ್.ಪಿ. ನಗರ್ ಅತಿಥಿಗೃಹ ನಂ.-IV	ರೂ	250–00
ಇಂದಿರಾ ಅತಿಥಿಗೃಹ (ಎ. ಸಿ.) (ಪ್ರತಿಸೂಟ್)		
(ಎಸ್. ಪಿ. ನಗರ್ ಅತಿಥಿಗೃಹ ನಂ–II)	ರೂ	250–00
ಬಾಲಕುಟೀರಂ (ಎ.ಸಿ.) (ಪ್ರತಿಸೂಟ್)		
(ಎಸ್. ಪಿ. ನಗರ್ ಅತಿಥಿಗೃಹ ನಂ–III)	ರೂ	250–00
ಗೋಕುಲಂ (ಎ. ಸಿ.)	ರೂ	500–00
ಮದುವೆಯ ಹಾಲ್‌ಗಳು–ದಿನವೊಂದಕ್ಕೆ (ಪ್ರತಿಯೊಂದು):		
ಎಸ್.ಎಂ.ಸಿ. 272, 260, 266, 267	ರೂ	75–00
ರೂಯಾ 248	ರೂ	100–00
ಗೋಗಿನೇನಿ 226	ರೂ	100–00
ಚಿದಂಬರಂ ಚೆಟ್ಟಿಯಾರ್ ಕಾಟೇಜ್	ರೂ	125–00
ಎ. ಟಿ. ಸಿ.– 99	ರೂ	100–00
ಟಿ. ಬಿ. ಸಿ. 136, 152, 71	ರೂ	75–00
ಬಾಲಾಜಿ ಕಲ್ಯಾಣ ಮಂಟಪ	ರೂ	500–00
ಸೀತಾರಾಮ ಕಲ್ಯಾಣ ಮಂಟಪ	ರೂ	1000–00
ಹೊಸದಾಗಿ ನಿರ್ಮಿತವಾದುವು:		
ಟಿ.ಬಿ.ಸಿ., ಎ.ಟಿ.ಸಿ. ಪೂರ್ತಿ ಕಾಟೇಜು	ರೂ	60–00
ಮೊದಲ ಅಂತಸ್ತಿನ ಕಾಟೇಜುಗಳು ಅರ್ಧ ಕಾಟೇಜು	ರೂ	30–00
ಎಸ್. ಎಸ್. ಅತಿಥಿಗೃಹ ಪ್ರತಿ ಸೂಟ್	ರೂ	50–00
ರಾಮಬಗೀಚಾ ಅತಿಥಿಗೃಹ ”	ರೂ	50–00

ಯಾತ್ರಿಕರು ಸಹಕರಿಸಬೇಕೆಂದು ಕೋರಲಾಗಿದೆ — ಮುಂಗಡ ಕಾಯ್ದಿರಿಸುವಿಕೆಗಾಗಿ ಬರೆಯಿರಿ.

ಉಪಕಾರ್ಯನಿರ್ವಹಣಾಧಿಕಾರಿ (ಸ್ವಾಗತ–II)
ತಿ, ತಿ. ದೇವಸ್ಥಾನಗಳು, ತಿರುಮಲೆ.

ಶ್ರೀವಚನ ಭೂಷಣಂ

ಕ್ರಿ. ಶ. ಹದಿಮೂರನೇ ಶತಮಾನದಲ್ಲಿ; ಭಾರತ ದೇಶವು ಯವನರದಾಳಿಗೆ ತುತ್ತಾಗಿ, ಸಾಮಾನ್ಯ ಜನರು ತತ್ತರಿಸಿ ಕಂಗಾಲಾಗಿದ್ದಕಾಲ. ಗುಡಿ ಗೋಪುರಗಳ ನೆಲಸಮ, ಪವಿತ್ರ ಪೂಜಾಮೂರ್ತಿಗಳ ಛಿನ್ನಭಿನ್ನ, ಧರ್ಮಗ್ರಂಥಗಳ ಅಳಿವು, ಸುಸಂಸ್ಕೃತರ ಸಾವುನೋವುಗಳ ದೃಶ್ಯಗಳು; ಜೊತೆಗೆ ಶಾಂತಿ ಸಮಾಧಾನಗಳಿಲ್ಲದ ಜನರು ತಲೆಮರೆಸಿಕೊಂಡು ಅಲೆದಾಡುವಂತಾಗಿದ್ದಿತು. ದಕ್ಷಿಣ ಭಾರತವೂ ಸಹ ಈ ದುಃಸ್ಥಿತಿಗೆ ಹೊರತಾಗಿರಲಿಲ್ಲ.

ಭೂ ವೈಕುಂಠವೆಂದು ಸುಪ್ರಸಿದ್ಧವಾಗಿರುವ ತಮಿಳುನಾಡಿನ 'ಶ್ರೀರಂಗಂ' ಒಂದು ಪುಣ್ಯಕ್ಷೇತ್ರ. ಯವನರ ಸೈನ್ಯ ಇಲ್ಲಿನ ದೇವಮಂದಿರವನ್ನು ಧ್ವಂಸಮಾಡುವ ಸನ್ನಿವೇಶ ಮನಸ್ಸಿಗೆ ನೆನೆಸಲೂ ಸಹ ಕಷ್ಟವಾಗಿದ್ದಿತಾದರೂ, ಅದು ಹಠಾತ್ತನೆ ಬಂದೇ ಬಿಟ್ಟಿತು. ಆ ಸಂದರ್ಭದಲ್ಲಿ ಬಹುಮಂದಿ ಭಕ್ತಿಯಿಂದ ಭಜಿಸಿ ಆರಾಧಿಸುವ ದೇವರ ವಿಗ್ರಹದ ರಕ್ಷಣೆ ಮತ್ತು ಧರ್ಮ ಗ್ರಂಥಗಳನ್ನು ಕಾಪಾಡುವ ಕಷ್ಟದ ಹೊರೆಯನ್ನು ಹೊತ್ತ ಪುಣ್ಯವ್ಯಕ್ತಿಯೇ ಪಿಳ್ಳೈಲೋಕಾಚಾರ್ಯರು.

ಲೋಕಾಚಾರ್ಯಾಯ ಗುರವೇ
ಕೃಷ್ಣ ಪಾದಸ್ಯ ಸೂನವೇ ।
ಸಂಸಾರ ಭೋಗಿ ಸಂದಷ್ಟ
ಜೀವಜೀವಾತವೇ ನಮಃ ॥

ಸುಪ್ರಸಿದ್ಧರಾದ ಶ್ರೀಕೃಷ್ಣಪಾದರು ಪಿಳ್ಳೈ ಲೋಕಾಚಾರ್ಯರ ಪೂಜ್ಯತಂದೆ. ಅವರು ಹುಟ್ಟಿದ ಊರು ಕಾಂಚೀಪುರದ ಬಳಿ 'ಮುಡುಂಬೈ' ಎಂಬ ಗ್ರಾಮ, ಮದುವೆ ಆಗಿದ್ದರೂ ಸಂಸಾರದ ಬಂಧನಕ್ಕೆ ಒಳಗಾಗದೆ, ಕಲಿವೈರಿದಾಸರೆಂಬ ಗುರುಗಳ ಬಳಿ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಆ ಗುರುಗಳ ವಿಶೇಷ ಅನುಗ್ರಹದಿಂದಲೇ ಅಮೂಲ್ಯ ರತ್ನದಂತಹ ಇಬ್ಬರು ಗಂಡುಮಕ್ಕಳಾದರು. ಹಿರಿಯರಾದ ಪಿಳ್ಳೈಲೋಕಾಚಾರ್ಯರು ಕ್ರಿ. ಶ. 1264 ಕ್ರೋಧನನಾಮ ಸಂವತ್ಸರದಲ್ಲಿ ಜನಿಸಿದರು. ಇವರ ತಮ್ಮಂದಿರಾದ ರಮ್ಯಜಾಮಾತೃದೇವ ಮೂರುವರ್ಷ ಚಿಕ್ಕವರು. ಇಬ್ಬರು ಹುಡುಗರೂ ಜೋಡಿಯಾಗಿ ಬೆಳೆದು; ಕಲಿವೈರಿದಾಸರಬಳಿ ವೇದವೇದಾಂತ ವಿದ್ಯೆಗಳನ್ನು ಮತ್ತು ನಮ್ಮ ಧರ್ಮದ ಮುಖ್ಯ ವಿಷಯಗಳನ್ನು ಕಲಿತರು. ತಂದೆಯವರ ಶಿಕ್ಷಣವೂ ಸೇರಿ ಚಿಕ್ಕಂದಿನಲ್ಲೇ ಸುಸಂಸ್ಕೃತರೂ, ವಿದ್ಯಾಪಾರಂಗತರೂ, ವಿನಯ ಸಂಪನ್ನರೂ ಆಗಿ ಜನರ ಮೆಚ್ಚುಗೆಗೆ ಪಾತ್ರರಾದರು.

ಲೋಕಾಚಾರ್ಯರು ಅನೇಕರಿಗೆ ಆತ್ಮಜ್ಞಾನವನ್ನು ಉಪದೇಶಿಸಿದರು. ಅವರ ತತ್ತ್ವೋಪದೇಶವು ಬಹಳ ಕಾಲ ಉಳಿಯಬೇಕೆಂಬ ಶಿಷ್ಯರುಗಳ ಅಭೀಷ್ಟದಂತೆ ಮಣಿಪ್ರವಾಳದಲ್ಲಿ (ಸಂಸ್ಕೃತ ಮತ್ತು ದ್ರಾವಿಡವೇದಗಳಲ್ಲಿ ಬಳಸಲಾದ ಸಂಮಿಶ್ರಣ ಭಾಷೆಯಲ್ಲಿ) ಶ್ರೀ ವಚನಭೂಷಣ ನೊಡಲಾದ ಹದಿನೆಂಟು ಗ್ರಂಥಗಳಲ್ಲಿ ಅವರೇ ಬರೆದಿಟ್ಟರು.

ಈ ಗ್ರಂಥಗಳಲ್ಲಿ ಮುಖ್ಯವಾಗಿ ವೇದರಹಸ್ಯವನ್ನು ಪ್ರಕಟಪಡಿಸಿರುವರು. ಅಪೃಥಕ್‌ಸಿದ್ಧಿ ಆಧಾರದಮೇಲೆ ಶರೀರಾತ್ಮಭಾವವನ್ನು ವಿವರಿಸಿ, ಜೀವಾತ್ಮನ ಸ್ವಾಭಾವಿಕ ಸ್ಥಾನದ ತಿಳುವಳಿಕೆಯನ್ನು ನೀಡಿರುತ್ತಾರೆ. ಈ ಚೇತನಾಚೇತನ ಪ್ರಪಂಚದ ವ್ಯಾಪಾರದ ನಿರ್ವಹಣೆಯು ಪರಮಾತ್ಮನೊಬ್ಬನಿಗೇ ಸೇರಿ, ಅದರ ನಿರ್ವಾಹಕತ್ವದಲ್ಲಿ ಆ ಪರಮಾತ್ಮನೊಂದಿಗೆ ವಿಶೇಷಣವಾಗಿ; ಉಪಕರಣ ರೀತ್ಯ; ವಿಶ್ವಾಸದಿಂದ ಸಹಕಾರ ನೀಡುವುದೊಂದೇ ಚೇತನನ ಪಾಲಿಗೆ ಉಳಿದಿರುವ ಕೈಂಕರ್ಯ, ಎಂಬ ಉನ್ನತ ಅರಿವನ್ನು ಸ್ಪಷ್ಟಪಡಿಸಿರುತ್ತಾರೆ.

ಶ್ರೀವಚನಭೂಷಣ ಗ್ರಂಥದ 'ಶ್ರೀ' ಶಬ್ದದ ಹಿರಿಮೆಯು ಪ್ರಧಾನವಾಗಿ ಭಗವಂತನ ಕಲ್ಯಾಣ ಗುಣಗಳ ಮಹಿಮೆಯನ್ನು ಪ್ರಕಾಶಪಡಿಸುತ್ತದೆ. ಸೂರ್ಯಕಿರಣಗಳು ಸಹಜವಾಗಿ ಎಲ್ಲೆಡೆಯುಲ್ಲೂ ಪ್ರವೇಶಿಸಿ ಅಲ್ಲಿರುವ ದೋಷವನ್ನು ದೂರಮಾಡಿ, ಬೆಳಕನ್ನು ಬೆಳಗಿಸಿ ಸದಾ ಶುದ್ಧವೂ, ಆನಂದಮಯವೂ ಆಗಿರುವ ಸನ್ನಿವೇಶವನ್ನು ಒದಗಿಸುವುದು. ಅಂತೆಯೇ ದುಃಖದಲ್ಲಿ ಮುಳುಗಿರುವ ಚೇತನನ ದುಃಖವನ್ನು ನಿವಾರಿಸಿ, ಆನಂದಸಾಗರದಲ್ಲಿ ಸದಾ ಓಡಾಡುತ್ತಿರಲು ಅನುಕೂಲಮಾಡಿಕೊಡುವ ಭಗವಂತನ ಸಹಜವಾದ ಗುಣಗಳೇ 'ಕಲ್ಯಾಣಗುಣಗಳು' ಆ ಗುಣಗಳನ್ನು ಸೂಚಿಸುವ ವಾಚಕಗಳಿಗೆ 'ಶ್ರೀವಚನಗಳು' ಎಂದು ಹೆಸರು.

ಭಗವಂತನ ಕಲ್ಯಾಣಗುಣಗಳು ದೋಷ ಮಿಶ್ರವಲ್ಲದುವು. ಹಾಗೂ ದೋಷವನ್ನು ದೂರವಾಗಿಸುವ ಶಕ್ತಿ ಉಳ್ಳದ್ದಾಗಿರುವುದರಿಂದ, 'ಹೇಯಪ್ರತ್ಯನೀಕ'. ಪರಮಾತ್ಮನಪಾಲಿಗೆ ನಿರತಿಶಯ ಸುಖ ಮತ್ತು ನಿಶ್ಶೇಷದುಃಖ ನಿವೃತ್ತಿ ಇವು ಸಹಜವೂ ಮತ್ತು ಶಾಶ್ವತವೂ ಆದ ಪ್ರಧಾನ ಸ್ವಭಾವ. ಇದಕ್ಕೆ 'ಉಭಯ ಲಿಂಗ' ಎಂದು ಹೆಸರು. ಬ್ರಹ್ಮನು ತನ್ನ ಕೃಪೆಗೆ ಸೇರಿಸಿಕೊಳ್ಳುವ ಚೇತನನಿಗೂ ಈ ಎರಡೂ ಗುಣಗಳು ಸಿದ್ಧಿಸುತ್ತವೆ. ಇವು ಚೇತನನಿಗೆ ಈಶ್ವರದತ್ತವಾದ ವೈಭವ. ಆದ್ದರಿಂದ ಬ್ರಹ್ಮಾನುಭವ ಎಂದರೆ, ಈ ಎರಡು ಗುಣಗಳ ಪೂರ್ಣ ಆವಿರ್ಭಾವ ಮತ್ತು ಅದಕ್ಕೆ ಪೂರ್ಣ ಹೊಣೆಯನ್ನು ಹೊತ್ತ ಈಶ್ವರನ ವಿಷಯದಲ್ಲಿ ಶರೀರಾತ್ಮಭಾವದ ಅನುಸಂಧಾನ. ಈ ಅಂಶವನ್ನು ಅನೇಕ ಮಹನೀಯರು ಬಹುವಿಧವಾಗಿ ಅನುಭವಿಸಿ ಲೋಕೋಪಕಾರಕ್ಕಾಗಿ ಸೂಕ್ತವಾದ ಶಬ್ದಗಳೊಡನೆ ಪ್ರಚುರಪಡಿಸಿರುವರು. ಆ ಶಬ್ದರಾಶಿಯೇ ಶ್ರೀವಚನಗಳು. ಅವುಗಳನ್ನು ಪಿಳ್ಳೈ ಲೋಕಾಚಾರ್ಯರು ತಮ್ಮ ವಿಶೇಷ ಜ್ಞಾನದಿಂದ ಒಟ್ಟುಗೂಡಿಸಿ ಗ್ರಂಥವಾಗಿಸಿರುವರು. ರತ್ನದಿಂದ ಮಾಡಿದ ಆಭರಣಕ್ಕೆ ರತ್ನಾಭರಣವೆಂದು ಹೆಸರಿಡುವಂತೆ, ಪೂರ್ವಾಚಾರ್ಯರುಗಳ ಶ್ರೀಸೂಕ್ತಿಯಿಂದ ಕೂಡಿದ್ದಾಗಿಯೂ, ಇವುಗಳನ್ನು ಕಂಠಪಾಠಮಾಡಿ ಅನುಸಂಧಾನ ಮಾಡುವವರಿಗೆ ಆಭರಣದಂತೆ ಈ ಗ್ರಂಥವು ಪ್ರಕಾಶಿಸೋಣದರಿಂದಲೂ, ಇದಕ್ಕೆ ಶ್ರೀವಚನಭೂಷಣವೆಂದು ಹೆಸರಾಯಿತು.

ಮಹಾಭಾರತದಲ್ಲಿ ಭಗವದ್ಗೀತೆ ಮತ್ತು ಶ್ರೀ ವಿಷ್ಣು ಸಹಸ್ರನಾಮ ಇವೆರಡೂ ಶ್ರೀವಚನಗಳಿಂದ ಕೂಡಿ ಶ್ರೇಷ್ಠಭಾಗಗಳಾಗಿವೆ. ಶ್ರೀಕೃಷ್ಣ ಪರಮಾತ್ಮನ ಉಪದೇಶವಾದ ಭಗವದ್ಗೀತೆಯು ವೇದದ ಆಧಾರದಮೇಲೆ, ಅದರಲ್ಲಿ ಹೇಳಿರುವ ತತ್ತ್ವ ಮತ್ತು ಅನುಷ್ಠಾನದ ಅನುಭವಗಳನ್ನು ಒಟ್ಟುಗೂಡಿಸಿ ಭಗವಂತನೇ ನುಡಿದಿರುವುದಾದರೂ ಗೀತೆಯು ಸ್ಮೃತಿಗ್ರಂಥವಾಯಿತು. ಮುಖ್ಯವಾಗಿ ಚೇತನನ ದುಃಖವಿಮೋಚನೆಗೆ ಪರಮಾತ್ಮನಾದ ಶ್ರೀಕೃಷ್ಣನು ಮಾಡುವ ಕೆಲಸವನ್ನು ಚರಮ ಶ್ಲೋಕದಲ್ಲಿ ತಿಳಿಯಪಡಿಸಲಾಗಿದೆ.

ಸರ್ವಧರ್ಮಾನ್ಪರಿತ್ಯಜ್ಯ
ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ
ಮೋಕ್ಷಯಿಷ್ಯಾಮಿ ಮಾಶುಚಃ ॥

"ಯಾವ ಧರ್ಮಗಳು ನನ್ನಮಾತಿಗೆ ವಿರುದ್ಧಗಳಾಗಿರುವುವೋ, ಅವುಗಳನ್ನೆಲ್ಲಾ ಬಿಟ್ಟು ನನ್ನನ್ನೇ ಶರಣುಹೊಂದು; ನಾನು ನಿನ್ನನ್ನು ಸರ್ವಪಾಪಗಳಿಂದ ಮುಕ್ತನನ್ನಾಗಿ ಮಾಡುವೆನು, ಶೋಕಿಸಬೇಡ". ಎಂದು ಕೃಷ್ಣಪರಮಾತ್ಮನು ಹೇಳಿರುತ್ತಾನೆ.

ಶ್ರೀಮತಿ ಬಿ. ಎಸ್. ಮಣಿ

ಅದಕ್ಕೆ ಅನುಗುಣವಾಗಿ ಮೋಹಪಾಶಕ್ಕೆ ಸಿಲುಕಿದ ಅರ್ಜುನನಿಗೆ ತಿಳುವಳಿಕೆ ನೀಡಿ, ಯಾವ ರೀತಿಯಲ್ಲಿ ಕೆಲಸವನ್ನು ನಿರ್ವಹಿಸಬೇಕೆಂಬುದನ್ನು ಉಪದೇಶರೂಪದಲ್ಲಿ ಶ್ರೀಕೃಷ್ಣನು ದಿವ್ಯವಚನಗಳಿಂದ ಹದಿನೆಂಟು ಅಧ್ಯಾಯಗಳಲ್ಲಿ ವಿಸ್ತರಿಸಿದ್ದಾನೆ. ಅರ್ಜುನನು ಸ್ವತಂತ್ರನೂ ಅಲ್ಲ, ಹಾಗೂ ಅಚೇತನನಂತೆ ಅಲಸ್ಯನೂ ಅಲ್ಲ. ಆದುದರಿಂದ ತನ್ನ ಸ್ಥಾನವನ್ನು ಅರಿತು ಅದಕ್ಕೆ ಅನುಗುಣವಾಗಿ ಅನುಷ್ಠಾನವನ್ನು ಕೈಗೊಳ್ಳಬೇಕಾದುದು ಅವನ ಪಾಲಿಗೆ ಸೇರಿದುದು. ಆದರೆ ಸರ್ವನಿರ್ವಾಹಕತ್ವವೂ ಭಗವಂತನಿಗೇ ಸೇರಿದುದೆಂಬ ಭಾವನೆಯನ್ನು ಮರೆಯುವಂತೆಯೇ ಇಲ್ಲ.

ವಿಷ್ಣುಸಹಸ್ರ ನಾಮವು ಮತ್ತೊಂದು ಭಾಗ, ಮರಣ ಶಯ್ಯೆಯಲ್ಲಿ ಮಲಗಿದ್ದ ಭೀಷ್ಮಾಚಾರ್ಯರು, ಕೃಷ್ಣಪ್ರೇಮಿಯಾದ ಧರ್ಮಸೂನುವಿಗೆ ನುಡಿದುದು ಅದರಲ್ಲಿ 'ಋಷಿಭಿಃ ಪರಿಗೀತಾನಿ ವಕ್ಷ್ಯಾಮಿ ಭೂತಯೇ' ಎಂದು ಹೇಳಿರುವಂತೆ, ಅನೇಕ ಋಷಿಗಳು ಅನುಭವಿಸಿದ ಭಗವಂತನ ಅನಂತಗುಣಗಳನ್ನು ಕೂಡಿಸಿ ಸ್ತೋತ್ರ ಮಾಲಿಕೆಯನ್ನಾಗಿಸಿ ಭಗವಂತನಿಗೆ ಅರ್ಪಿಸಿದರು. ಇದೇ ರೀತಿಯಾಗಿ ಶ್ರೀ ವಚನಭೂಷಣವೂ ಬಂದುದರಿಂದ, ಈ ಮೂರು ಗ್ರಂಥಗಳನ್ನು ಒಂದೇ ದೃಷ್ಟಿಯಿಂದ ಆದರಿಸಬೇಕಾದುದು ವಿವೇಕಿಯ ಕರ್ತವ್ಯ. ಅಂತೆಯೇ ಪಿಳ್ಳೈಲೋಕಾಚಾರ್ಯರು ಆದರಣೀಯರು.

ವೇದಮೂಲವಾದ 'ಪ್ರಣವ' ಎಂಬ ಏಕಾಕ್ಷರಕ್ಕೆ ಆಧಾರವಾದ ಅ-ಕಾರವೆಂಬ ವೇದಾರ್ಥ ಸಂಗ್ರಹ ಶಬ್ದಕ್ಕೆ ಸ್ವಾಭಾವಿಕವಾಗಿ ವೇದವೆಂದೇ ಹೆಸರು. ಅ-ಕಾರವು ತನ್ನ ಸ್ವರೂಪವನ್ನು ತೋರಿಸುವುದಲ್ಲದೆ, ತನ್ನ ವೃತ್ತಿಯನ್ನೂ ತಿಳಿಯಪಡಿಸುವುದು, ಸ್ವರೂಪಪ್ರಧಾನವಾದ ಅಂಶ ಉಪನಿಷತ್ತುಗಳಲ್ಲಿ ವಿಶೇಷವಾಗಿ ನಿರ್ಣಿತವಾಗಿದೆ. ಈ ಭಾಗಕ್ಕೆ ಪರತ್ವ, ಕಾರಣತ್ವ ಮುಂತಾದ ಪರತತ್ತ್ವದ ಸರ್ವವಿಲಕ್ಷಣವಾದ ಸ್ವರೂಪವನ್ನು ಪ್ರಕಟಪಡಿಸುವುದು ಮುಖ್ಯ ಉದ್ದೇಶವಾಗಿದೆ. ಇದು ತಿಳಿಯಬೇಕಾದರೆ ಅದಕ್ಕೆ ವಿರೋಧವಾದ ನಾನಾ ಬಗೆಯ ವಸ್ತುಗಳಲ್ಲಿ ಕಾರಣತ್ವ ಮುಂತಾದ ಭಾವನೆಗಳನ್ನು ಆರೋಪಿಸಿ ಅನರ್ಥಪಡುವ ಅನುಭವ ವಿಶೇಷಕ್ಕೆ ಸಾಂಸಾರಿಕ ಪ್ರತೀತಿ ಎಂದು ಹೆಸರು.

ಮೇಲೆ ಕಂಡುಬರುವ ಅ-ಕಾರವನ್ನು ಬದಿಗೊತ್ತರಿಸಿದರೆ, ಮೂಲದಲ್ಲಿ ಉಳಿದುಕೊಳ್ಳುವ ಅ-ಕಾರವು ನಿತ್ಯಸಿದ್ಧವೂ, ಸ್ವತಂತ್ರ್ಯವೂ, ಸರ್ವವ್ಯಾಪಿಯೂ ಆಗಿದೆ. ಅದರ ಮರೆಯಲ್ಲಿ ಬದು[illegible]ಬಹುದೆಂಬ ಭಾವನೆ ಮೂಡಿದವನಿಗೆ ಮುಮುಕ್ಷು ಜ್ಞಾನಿ ಮುಂತಾದ ಹೆಸರುಗಳು ಸಲ್ಲುತ್ತವೆ. ತತ್ತ್ವದಲ್ಲಿ ಭಗವಂತನಿಲ್ಲದೆ ಯಾವಪದಾರ್ಥವು ಇರಲು ಸಾಧ್ಯವಿಲ್ಲವಾದರೂ, ಈ ಅರಿವು ಇಲ್ಲದರಿಂದ; ಅನರ್ಥವುಂಟಾಗಿ ಅದರ ಪರಿಹಾರಕ್ಕೆ ತಿಳುವಳಿಕೆ ಮೂಡಿ ಅದು ಸ್ಥಿರವಾಗಿ, ಪೂರ್ಣವಾ[illegible] ಮತ್ತು ಶುದ್ಧವಾಗಿ ಉಳಿದುಕೊಳ್ಳುವುದೇ ಸಂಸಾ[illegible] ನಿವೃತ್ತಿಗೆ ಮಹತ್ತಾದ ಔಷಧಿ. ಆದುದರಿಂ[illegible] ವೇದ ಎಂಬ ಅ-ಕಾರವು ಉಪನಿಷತ್ತುಗಳ[illegible] 'ಮರೈ' ಎಂಬ ರೂಪದಿಂದ ಕಾಣಿಸಿಕೊಳ್ಳುತ್ತದೆ. 'ಮರೆ' ಅಥವಾ 'ರಹಸ್ಯ' ಎಂದರೆ ಮರೆಯಾ[illegible] ನಿಲ್ಲುವ ಪರವಸ್ತುವನ್ನು ತಿಳಿಸುವ ಗ್ರಂಥವೆಂದರ್ಥ. ಹೀಗೆ ಅಗೋಚರವಾದ ಪದಾರ್ಥವನ್ನು ಮನಸ್ಸಿ[illegible] ಮುಂದೆ ಇಡುವುದೇ ಉಪನಿಷತ್ತುಗಳ ಪ್ರಧಾ[illegible] ಕೃತ್ಯ. ಆದ್ದರಿಂದ ಪೂರ್ಣ ಆನಂದವನ್ನು ಬಯಸುವವನು ಮಧ್ಯೆ ಏರ್ಪಟ್ಟ ಅಜ್ಞಾನವೆಂಬ ತೆ[illegible]ಯನ್ನು ತೆಗೆದುಹಾಕುವುದಕ್ಕೆ ಕೈಗೊಳ್ಳಬೇಕಾ[illegible] ಕ್ರಮಗಳೆಲ್ಲ ಉಪನಿಷತ್ತುಗಳಲ್ಲಿ 'ಉಪಾಸನೆ' ಎಂ[illegible] ಶಬ್ದದಲ್ಲಿ ಅಡಗಿವೆ.

ಆ 'ಮರೈ' ಯನ್ನು ತೆಗೆಯಬೇಕಾದರೆ, ಅದಕ್ಕೆ ತುತ್ತಾದವನಿಗೆ ಸಾಧ್ಯವಿಲ್ಲ. ಮರೈಯನ್ನು ಹೊರಿಸಿದವನೇ ಅದನ್ನು ಹೋಗಲಾಡಿಸಬೇಕು. ಆ ಹೊಣೆ ಕಾರಣಭೂತನಾದ ಪರಮಾತ್ಮನಿಗೆ ಸೇರಿದುದಾಗಿದೆ. ಆ ಭಾಗವನ್ನು ಅದೇ ಅ-ಕಾ[illegible]ದಿಂದ ಪ್ರದರ್ಶನ ಮಾಡಲಾಗಿದೆ, ಈ ಭಗ[illegible]ದ್ವ್ಯಾಪಾರವೇ 'ರಕ್ಷಕತ್ವ'. ಭಗವಂತನು ತನ್ನ ಹಿರಿಮೆಯನ್ನೇ ಮುಖ್ಯವೆಂದು ಬಗೆದು ಸುಮ್ಮ[illegible] ಕುಳಿತಿರುವ ಸ್ವಭಾವದವನಲ್ಲ. ಮರೈಗೆ ಸಿಕ್ಕಿ[illegible] ವಸ್ತುಗಳ ದುಃಸ್ಥಿತಿಯನ್ನು ಕಂಡು ಅದರ ನಿವಾರಣೆಗಾಗಿ ಕೃಪೆಯಿಂದ ಕೈಕೊಳ್ಳುವುದೇ ರಕ್ಷಾ[illegible] ವ್ಯಾಪಾರ. ಇದಕ್ಕಾಗಿ ಭಗವಂತನು ಅನೇ[illegible] ಅವತಾರಗಳನ್ನು ಕೈಕೊಂಡಿರುವರು. 'ಅವತಾರ[illegible] ಎಂದರೆ ತನ್ನ ಹಿರಿಮೆಯನ್ನು ಮರೆತು ತನ್ನ ವ[illegible]ದಲ್ಲಿರುವವರ ದುಃಸ್ಥಿತಿ ನಿವಾರಣೆಗಾಗಿ ಅಯಾ[illegible] ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ರೂಪಗಳನ್ನು ತಾಳಿ; ಅವರೊಡನೆ ಕಲೆತು ಸುಖದ ಅನುಭ[illegible]ವನ್ನುಂಟುಮಾಡಿ, ಅದಕ್ಕೆ ತಡೆಯಾಗಿರು[illegible] ವಿರೋಧವನ್ನು ನಿರಸನಮಾಡುವುದೇ ಅವತಾರ[illegible] ಕೃತ್ಯ, ಈ ಸಂದರ್ಭದಲ್ಲಿ ಉಪಕಾರ ಮಾಡಿ[illegible] ವ್ಯಕ್ತಿ ಪರಮಾತ್ಮನೇ ಎಂಬುದನ್ನು ಎಲ್ಲರು[illegible] ಮನಗಾಣುವಂತೆ ಮಾಡುವುದು ಮತ್ತೊಂದ[illegible] ಉದ್ದೇಶ ಆದ್ದರಿಂದ ಅ-ಕಾರದ ತತ್ತ್ವಾರ್ಥವನ್ನು ವೇದಾಂತಗಳಲ್ಲಿ, ಅದನ್ನು ಅನುಸರಿಸುವ ಶಾಸ್ತ್ರಗಳಲ್ಲಿ ಭಗವಂತನ ಎರಡು ಮುಖ್ಯಗುಣಗಳಾ[illegible] ಕಾರಣಿಕತ್ವ ಮತ್ತು ಸರ್ವೇಶ್ವರತ್ವವನ್ನು ಕಾಣ[illegible]ತ್ತಾರೆ.

(28ನೇ ಪುಟ ನೋಡಿ

ಸರಸ್ವತೀದೇವಿ

ವೇದಗಳು ಹಾಗೂ ಮಹಾಭಾರತದಲ್ಲಿ ಸರಸ್ವತಿಯ ವರ್ಣನೆಯನ್ನು ದೇವಿಯರೂಪದಲ್ಲಿ ಮಾಡಲಾಗಿದೆ, ಮತ್ತೆ ಒಂದು ನದಿಯ ರೂಪದಲ್ಲಿಯೂ ಸಹ ನದಿಯ ರೂಪದಲ್ಲಿ ಅವಳನ್ನು ಒಂದು ಅದ್ವಿತೀಯ ನದಿ ಎಂದು ಪರಿಗಣಿಸುತ್ತಾರೆ. ಎಲ್ಲ ನದಿಗಳಿಗಿಂತಲೂ ಶ್ರೇಷ್ಠ. ಸರಸ್ವತಿ ವಿದ್ಯೆ ಮತ್ತು ಜ್ಞಾನದ ದೇವಿಯೂ ಹೌದು. ಮಹಾಭಾರತದ ವನಪರ್ವದಲ್ಲಿ ವಿದ್ಯಾರೂಪಿಣಿ ಸರಸ್ವತಿ ಮತ್ತು ತಾರ್ಕ್ಷ್ಯನ ಸಂವಾದ ನಡೆಯುತ್ತದೆ. ತಾರ್ಕ್ಷ್ಯನು ಅವಳನ್ನು ಕೇಳಿದಾಗ, "ಹೇ ದೇವಿ ನೀನು ಪರಲೋಕದ ಭಾವಗಳಿಗೆ ಕ್ಷೇತ್ರಜ್ಞೆ, ಆತ್ಮನಂತೆ ತಿಳಿಯುವ, ಬುದ್ಧಿಯ ಸಮಾನ ಕರ್ಮಕಾಂಡದ ಧರ್ಮಕ್ಕೆ ಸರಿಯಾಗಿ ನಡೆಯುತ್ತೀಯೆ. ಅಲ್ಲದೆ ನಿನ್ನ ವಿಚಾರದಿಂದ, ಹೇ ಸುಭಗೇ ನೀನು 'ಪ್ರಜ್ಞಾ' ಎನಿಸಿದ್ದೀಯೆ, ನೀನು ಯಾರು, ಏನೆಂಬುದನ್ನು ನೀನೇ ತಿಳಿಸು. "ಆಗ ಸರಸ್ವತಿ, ಋಷಿಗಳ ಸಂದೇಹ ದೂರ ಮಾಡಲು" "ನಾನು ಅಗ್ನಿ ಹೋತ್ರದಿಂದ ಬಂದಿದ್ದೇನೆ ನಾನು ನಿನಗೆ ಯಥಾವತ್ತಾಗಿ ಹೇಳಿಯಾಗಿದೆ" ಎಂದಳು.

ತಾರ್ಕ್ಷ್ಯನು "ಹೇ ದೇವಿ, ತಮ್ಮ ಸಮಾನ ಯಾರು ಇಲ್ಲ, ತಾವು ಸಾಕ್ಷಾತ್ ಲಕ್ಷ್ಮಿಯ ಸಮಾನರಾದ ದಿವ್ಯಶೋಭೆಯುಳ್ಳವರು ತಾವೇ ಪ್ರಜ್ಞಾ ದೇವಿಯನ್ನು ಧಾರಣ ಮಾಡಿದ್ದೀರ. ಹೇ ಸುಭಗೆ, ನಿಮ್ಮ ರೂಪ ದಿವ್ಯ ಮತ್ತು ಕಾಂತಿ ಅನಂತವು" ಎಂದು ಹೇಳಿದನು. ಸರಸ್ವತಿಯು 'ಹೇದ್ವಿಜೇಂದ್ರ! ಋತ್ವಿಕ್‌ಗಳು ಯಜ್ಞದಲ್ಲಿ ಯಾವ ಕಾಷ್ಠ, ಲೋಹ ಮತ್ತು ಮಣ್ಣಿನ ಪಾತ್ರೆಗಳನ್ನು ಉಪಯೋಗಿಸುತ್ತಾರೆ, ಮತ್ತ್ಯಾವ ಶ್ರೇಷ್ಠ ಕರ್ಮಗಳ ಸಂಪಾದನೆ ಮಾಡುತ್ತಾರೆ ಅವುಗಳಿಂದಲೇ ರೂಪವತಿಯಾಗಿ ನಾನು ಅಧಿಕಳಾಗುತ್ತೇನೆ. ಹೇ ವಿದ್ವನ್, ನನ್ನ ಆ ದಿವ್ಯರೂಪ ಮತ್ತು ಪ್ರಜ್ಞಾದಿಂದಲೇ ಸಿದ್ಧಿ ಸಿಗುತ್ತದೆ" ಎಂದಳು.

ತಾರ್ಕ್ಷ್ಯನು "ಶ್ರದ್ಧಾಳು ಮುನಿಜನರು ಯಾವ ಮೋಕ್ಷಕ್ಕೆ ಎಲ್ಲಕ್ಕಿಂತ ಹೆಚ್ಚು ಮುನ್ನಗುತ್ತಾರೋ ಯಾವುದರ ಪ್ರಾಪ್ತಿಗೆ ಇಂದ್ರಿಯ ದಮನ ಮೊದಲಾದ ಕಠೋರ ವ್ರತ ಮಾಡುತ್ತಾರೋ, ಆ ಶೋಕ ರಹಿತ ಮೋಕ್ಷದ ಸ್ವರೂಪವನ್ನು ನನಗೆ ತಿಳಿಸಿರಿ, ಸಾಂಖ್ಯಯೋಗ ಶಾಸ್ತ್ರದ ಜ್ಞಾತರು ಯಾರನ್ನು ಪುರಾತನ ಮತ್ತು ಶ್ರೇಷ್ಠರೆಂದು ತಿಳಿಯುತ್ತಾರೋ, ಆ ಪರಮಾತ್ಮನನ್ನು ನಾನು ಚೆನ್ನಾಗಿ ತಿಳಿದವನಲ್ಲ. ಆದ್ದರಿಂದ ಆ ವಿಷಯವನ್ನು ತಿಳಿಯುವಂತೆ ಮಾಡಿರಿ' ಎಂದನು.

ಈ ಪ್ರಶ್ನೆಗೆ ಉತ್ತರವಾಗಿ ಸರಸ್ವತಿಯು, "ಹೇ ತಾರ್ಕ್ಷ್ಯನೇ! ಸ್ವಾಧ್ಯಾಯನಿರತ ವೇದಾರ್ಥದ ಜ್ಞಾತರು ಶೋಕ ಮತ್ತು ವಿಷಯವಾಸನೆ ಬಿಟ್ಟು, ವ್ರತ ಪುಣ್ಯಕರ್ಮ ಮತ್ತು ಯೋಗಾಭ್ಯಾಸದ ಮೂಲಕ ಯಾವ ಪುರಾತನ ಪರಮ ಪುರುಷನಿಗೆ ಪ್ರಾಪ್ತರಾಗುತ್ತಾರೋ, ಅದೇ ಪರಬ್ರಹ್ಮವು. ಆ ಪರಮ ಪುರುಷದ ಒಳಗೆ ಸಹಸ್ರ ಶಾಖಾಶೋಭಿತ, ಪುಣ್ಯ ಗಂಧಾವಲೀ, ವಿಶಾಲ ವತ್ಸಲತೆಯಿದೆ. ಅದರ ಮೂಲದಿಂದ ಮಧುರ ಜಲದಿಂದ ಹರಿಯುವ ಪವಿತ್ರನದಿಗಳು ಹೊರಡುತ್ತವೆ. ಎಲ್ಲಿ ಅಗ್ನಿ, ಇಂದ್ರ, ಮರುತ್‌ಗಣ ಮುಂತಾದ ದೇವತೆಗಳು ಶ್ರೇಷ್ಠ ಯಜ್ಞ ಮಾಡಿದ್ದಾರೆ, ಅದೇ ಪರಮಪದ. ಹೇ ತಾರ್ಕ್ಷ್ಯನೇ, ನನ್ನ ಸ್ಥಿತಿಯ ಸ್ಥಾನವೂ ಅದೇ. ನಾನು ವಿದ್ಯಾರೂಪಿಣೀ ಸರಸ್ವತಿ" ಎಂದಳು.

ಅದಕ್ಕೆ ತಾರ್ಕ್ಷ್ಯನು ಅವಳನ್ನು – ಭದ್ರೆ! ಈ ಲೋಕದಲ್ಲಿ ಮನುಷ್ಯನ ಶ್ರೇಯ ಯಾವುದು (ಧ್ಯೇಯ)? ಏನು? ಯಾವ ರೀತಿಯ ಆಚರಣೆಯಿಂದ ಮನುಷ್ಯನು ಧರ್ಮಭ್ರಷ್ಟನಾಗುವುದಿಲ್ಲ? ನಾನು ಯಾವಾಗ, ಯಾವ ಪ್ರಕಾರ ಅಗ್ನಿಹೋತ್ರ, ದೇವ ಪೂಜೆ ಮಾಡಲಿ? ಏನು ಮಾಡುವುದರಿಂದ ನಾಶ ಅರ್ಥಾತ್ ಅಧರ್ಮವಾಗುವುದಿಲ್ಲ? ಎಲೈ ಸುಭಗೇ! ಇವೆಲ್ಲವನ್ನೂ ತಿಳಿಸುವವಳಾಗು. ಹೇಗೆ, ನಾನು ರಜೋಗುಣದ ಪ್ರಭಾವದಿಂದ ಉಳಿದು, ಪವಿತ್ರಲೋಕಗಳಿಗೆ ಹೋಗಲಿ ಎಂಬ ಉಪದೇಶವನ್ನು ಮಾಡು" ಕೇಳಿಕೊಂಡನು.

ಅದಕ್ಕೆ ಸರಸ್ವತಿಯು "ಯಾರು ಸಾವಧಾನ, ಸ್ವಾಧ್ಯಾಯ ಯುಕ್ತನಾಗಿ ಗುರುವಿನ ಉಪದೇಶಾನುಸಾರ, ಪರಬ್ರಹ್ಮನನ್ನು ತಿಳಿಯುತ್ತಾನೆ, ಅವನೇ ದೇವಲೋಕಕ್ಕೆ ಹೋಗುತ್ತಾನೆ ಹೇತಾರ್ಕ್ಷ್ಯನೇ, ಯಾವುದೇ ಸದಾಚಾರಿ ಸಜ್ಜನರು ಏಳು ವರ್ಷಗಳ ವರೆಗೆ ನಿಯಮಪೂರ್ವಕವಾಗಿ ಅಗ್ನಿಹೋತ್ರ ಮಾಡುತ್ತಾರೆ, ಅವರು ತಮ್ಮ ಪುಣ್ಯದಿಂದ ಮೊದಲ ಏಳು ಮತ್ತು ನಂತರದ ಏಳು ಪೀಳಿಗೆಗಳಿಗೆ ಸಂದೇಶ ಕಳುಹುತ್ತಾರೆ" ಎಂದಳು

"ಭಗವತೀ, ವೇದೋಕ್ತ ಅಗ್ನಿಹೋತ್ರ ವ್ರತದ ವಿಧಿಯಾವುದು? ಅಗ್ನಿ ಹೋತ್ರ ಸಂಬಂಧಿ! ಎಲ್ಲ ಜ್ಞಾನ ಕೊಡುವ ಕೃಪೆ ಮಾಡುವಂತಾಗು" ಎಂದು ತಾರ್ಕ್ಷ್ಯನು ಬೇಡಿದನು. ಅದಕ್ಕೆ ಸರಸ್ವತಿಯು–ಎಲೈ ತಾರ್ಕ್ಷ್ಯನೇ! ಅಶುದ್ಧ ಬ್ರಹ್ಮವಿದ್ಯೆಯಿಂದ ಅನಭಿಜ್ಞ ಅವಿದ್ವಾಂಸನಾದ ವ್ಯಕ್ತಿಗೆ ಅಗ್ನಿ ಹೋತ್ರದ ಅಧಿಕಾರವಿಲ್ಲ. ಏಕೆಂದರೆ ಅಂತರ್ಯಾಮೀ ದೇವತೆಯು ಶುದ್ಧಿಯನ್ನು ಇಚ್ಛಿಸುತ್ತಾಳೆ. ಅವಳು ಶ್ರದ್ಧಾಹೀನ, ಅಶುದ್ಧ ವ್ಯಕ್ತಿ ಕೊಟ್ಟ ಹವ್ಯವನ್ನು ಪಡೆಯುವುದಿಲ್ಲ. ಯಾವನು ವೇದ ಪಾಠಿಯಲ್ಲವೋ ಅವನಿಂದ ಮಾಡಲ್ಪಟ್ಟ ಹವನ ವ್ಯರ್ಥವಾಗುತ್ತದೆ.

ಶ್ರೀಮತಿ ಕಲ್ಯಾಣಿ ಮೂರ್ತಿ

ಸರಸ್ವತಿ ಎಲ್ಲಾ ನದಿಗಳಲ್ಲಿ ಶ್ರೇಷ್ಠವೆಂದು ತಿಳಿಯಲ್ಪಡುತ್ತದೆ; ಇದೊಂದೇ ನದಿ ವಿನಶನ ತೀರ್ಥದಲ್ಲಿ ಹೋಗಿ ನಷ್ಟವಾಗಿದೆ–ಅಂದರೆ ಭೂಮಿಯಲ್ಲಿ ಸರಸ್ವತಿ ಗುಪ್ತಗಾಮಿನಿಯಾಗಿದೆ. ಮಹಾ ಬಲಿ ಭದ್ರನು ಅಲ್ಲಿ ಸ್ನಾನ,ದಾನ ಮಾಡಿ ಸರಸ್ವತಿಯ ತಟದಲ್ಲಿರುವ ಪವಿತ್ರ ಸೂಭೂಮಿ ತೀರ್ಥಕ್ಕಾಗಿ ಯಾತ್ರೆ ಮಾಡಿದನು. ಅಲ್ಲಿ ಸ್ವಲ್ಪ ದಿನವಿದ್ದಮೇಲೆ ಅವನು ಗರ್ಗಸ್ರೋತವೆಂಬ ತೀರ್ಥವನ್ನು ತಲುಪಿದನು.

ಗರ್ಗಸ್ರೋತ ತೀರ್ಥ ಪ್ರಾಚೀನಕಾಲದಲ್ಲಿ ಅತ್ಯಂತ ಪವಿತ್ರಸ್ಥಾನವಾಗಿತ್ತು. ಇಲ್ಲಿ ವೃದ್ಧ ಗರ್ಗ ಮುನಿಯು ಘೋರ ತಪಸ್ಸು ಮಾಡಿ ಕಾಲಗತಿ ಮತ್ತು ನಕ್ಷತ್ರ ಮೊದಲಾದ ಜ್ಯೋತಿರ್ಮಯ ಪದಾರ್ಥಗಳ ಸಂಬಂಧದ ವಿಷಯಗಳನ್ನು ತಿಳಿದಿದ್ದರು. ಶುಭಶಕುನ ಮತ್ತು ಅಶುಭ ಉತ್ಪಾತಗಳ ಜ್ಞಾನವನ್ನು ಪಡೆದಿದ್ದು, ಇದರಿಂದಲೇ ಸರಸ್ವತಿ ತಟದ ಈ ನೀರು ಅವನ ಹೆಸರಿನಲ್ಲೇ ಪ್ರಸಿದ್ಧವಾಗಿದೆ. ಅನೇಕ ಮುನಿಗಳು ಇಲ್ಲಿ ಗರ್ಗ ಋಷಿಯಿಂದ ಜ್ಯೋತಿಷ್ಯವಿದ್ಯೆ ಓದಿದ್ದರು. ಬಲಭದ್ರ, ಶಂಕರಾಚಾರ್ಯರು ಅಲ್ಲಿಂದ ಹೋದರೂ, ಮಹಾಶಂಖದ ಒಂದು ವೃಕ್ಷ, ತನ್ನ ವಿಶಾಲತೆಯ ಕಾರಣ ಇಡೀ ಭೂಮಂಡಲದಲ್ಲಿ ಪ್ರಸಿದ್ಧವಾಗುವಂತೆ ವಿಖ್ಯಾತರಾಗಿದ್ದರು.

ಮತ್ತೆ ಸರಸ್ವತಿಯ ದಕ್ಷಿಣ ದಡಕ್ಕೆ ಹೋಗಿ, ಸ್ವಲ್ಪ ದೂರದಲ್ಲಿ ಧರ್ಮಾತ್ಮ ಬಲಭದ್ರರು ನಾಗಧನ್ವ ಎಂಬ ಪವಿತ್ರ ತೀರ್ಥ ನೋಡಿದರು. ಅಲ್ಲಿಂದ ಪೂರ್ವದಿಕ್ಕಿನ ಕಡೆಗೆ ಹೊರಟರು. ಮಾರ್ಗದಲ್ಲಿ ಅವರಿಗೆ ಹೆಜ್ಜೆ ಹೆಜ್ಜೆಗೂ ಅಸಂಖ್ಯಾತ ಪ್ರಸಿದ್ಧ ತೀರ್ಥಗಳು ಸಿಕ್ಕವು. ಇಲ್ಲಿಂದ ಸರಸ್ವತಿಯ ಧಾರಾ ಪೂರ್ವದ ಕಡೆಗೆ ಹಿಂದಿರುಗಿದರು. ಇದರಿಂದ ನಮಗೆ

ನೈಮಿಶ ನಿವಾಸಿ ಅಸಂಖ್ಯಾತ ಮುನಿಗಳ ದರ್ಶನವಾಗಿ ನಮ್ಮನ್ನು ಕೃತಾರ್ಥರನ್ನಾಗಿಸಕೊಳ್ಳಲೆಂದೇ ಶ್ರೇಷ್ಠನದಿ ಸರಸ್ವತಿ ಆಕಡೆ ತಿರುಗಿದ್ದಾಳೆ! ತೀರ್ಥಶ್ರೇಷ್ಠ ನೆ ಮಿಶಿಯನ್ನು ತಿಳಿಯುವುದುಕ್ಕಾಗಿ ಸರಸ್ವತಿಯು ಅನುಗಾಮಿನಿಯಾಗಬೇಕಿತ್ತೆಂದು ತಿಳಿದು ಬರುತ್ತದೆ.

ಮಹಾನದಿ ಸರಸ್ವತಿ ಪೂರ್ವಾಭಿಮುಖಳಾಗಿ ಏಕೆ ಹಿಂದಿರುಗಿದಳೆಂಬ ಕಥೆ ಸತ್ಯಯುಗ ಕಾಲದ್ದಾಗಿದೆ. ಸತ್ಯಯುಗದಲ್ಲಿ ನೈಮಿಶಾರಣ್ಯದಲ್ಲಿ, ಅಲ್ಲಿಯ ಆಶ್ರಮವಾಸಿಗಳು 12 ವರ್ಷಗಳಲ್ಲಿ ಕೊನೆಗೊಳ್ಳುವ ಯಜ್ಞದ ಆರಂಭ ಮಾಡಿದ್ದರು. 12 ವರ್ಷಗಳ ನಂತರ ಯಾವಾಗ ಈ ಯಜ್ಞ ಕೊನೆಗೊಂಡಿತೋ ಆಗ ಋಷಿಗಣ ತೀರ್ಥದರ್ಶನದ ಇಚ್ಛೆಯಿಂದ ಸರಸ್ವತಿಯ ದಕ್ಷಿಣ ದಡದಲ್ಲಿ ಉಪಸ್ಥಿತರಾದರು. ಅಸಂಖ್ಯಾ ಮುನಿಗಳು ಸರಸ್ವತಿ ದಡದ ಶೋಭೆಯನ್ನು ಹೆಚ್ಚಿಸಿದರು.

ಆ ಜನಗಳನಂತರವೂ ಸಾವಿರಾರು ಯಾಜ್ಞಿಕ ಋಷಿಗಳು ತಪಸ್ಸು, ತೀರ್ಥಕ್ಕಾಗಿ ಅಲ್ಲಿಗೆ ಬಂದು ನೆಲಸಿದರು. ಆದರೆ ಸರಸ್ವತಿ ನದಿಯು ಎರಡು ದಡಗಳು ಖಾಲಿ ಇರಲಿಲ್ಲ. ಎಲ್ಲೂ ನೆಲಸಲು ಸ್ಥಳ ಸಿಗದೆ, ಆ ಮಹಾವ್ರತಧಾರೀ ಮುನಿಗಳು ಪೂರ್ವದ ಕಡೆಗೆ ಇರುವ ಪವಿತ್ರ ಕುರುಕ್ಷೇತ್ರವನ್ನು ವನ್ನು ತಲುಪಿದರು. ಮತ್ತೆ ಅಲ್ಲಿ ಯಜ್ಞೋಪವೀತಗಳಿಂದ ಭೂಮಿಯನ್ನು ಅಳೆದು, ಅದೇ ಸ್ಥಳವನ್ನು ಸರಸ್ವತಿ ತೀರ್ಥವೆಂದು ಕಲ್ಪಿಸಿ, ಅಗ್ನಿಹೋತ್ರಾದಿ ವಿವಿಧ ಕರ್ಮ ಮಾಡಲಾರಂಭಿಸಿದರು. ಸರಸ್ವತಿ ನದಿ ಆಋಷಿಗಳು ತನ್ನ ನೀರಿಗಾಗಿ ಚಿಂತೆಯಿಂದ ನಿರಾಶರಾದುದನ್ನು ಕಂಡು ಅವರ ಕಾರ್ಯಸ್ಥಾನಕ್ಕಾಗಿ, ಆಸ್ಥಳಕ್ಕೆ ತಲುಪಿದಳು. ಅಲ್ಲಿ ಅನೇಕ ಆಳವಾದ ಸ್ಥಳಗಳಲ್ಲಿಸರಸ್ವತಿಯ ನೀರು ತುಂಬಿತು. ಮತ್ತೆ ಅವುಗಳೂ ಪವಿತ್ರ ತೀರ್ಥವಾದುವು. ಈ ರೀತಿ, ಕರುಣಾವಶಳಾಗಿ ಆ ಋಷಿಗಳ ಇಚ್ಛೆಯನ್ನು ಪೂರ್ಣಗೊಳಿಸಿ ಸರಸ್ವತಿ ಮತ್ತೆ ತಿರುಗಿ ಪಶ್ಚಿಮಾಭಿಮುಖವಾಗಿ ಹರಿಯ ತೊಡಗಿದಳು. ಸರಸ್ವತಿಯ ನೀರುನಿಂದ ತುಂಬಿದ ಕುಂಡಗಳು ನೈಮಿಶೀಯ ತೀರ್ಥ ವೆಂದು ಕರೆಯಲ್ಪಡುತ್ತವೆ. ನೈಮಿಷಾರಣ್ಯದಿಂದ ಹಿಂದಿರುಗಿದ ಮುನಿಗಳ ಮೇಲೆ ಕೃಪೆಯಿಟ್ಟು ಸರಸ್ವತಿ ಅವರಲ್ಲಿ ನೆಲಸಿರುವುದೇ ಇದಕ್ಕೆ ಕಾರಣ.

ಸರಸ್ವತಿ ನದಿಯು ಏಳುಶಾಖೆಗಳು ಹೊರಟವು. ಸುಪ್ರಭಾ, ಕಾಂಚನಾಕ್ಷೀ, ವಿಶಾಲಾ, ಮನೋರಮಾ, ಓಘವತೀ, ಸುರೇಣು ಮತ್ತು ವಿಮಲೋದಕಾ–ಇವುಗಳೇ ಆ ಏಳು. ಎಲ್ಲ ಲೋಕಗಳ ಪಿತಾಮಹನಾದ ಬ್ರಹ್ಮ ಒಮ್ಮೆ ಪುಷ್ಕರ ತೀರ್ಥದಲ್ಲಿ ಮಹಾಯಜ್ಞವನ್ನು ಆರಂಭಿಸಿದನಲ್ಲದೆ ದೀಕ್ಷೆಯನ್ನು ಪಡೆದ. ಆಗ ಋಷಿಗಳು ಬ್ರಹ್ಮನಿಗೆ ಹೇಳಿದರು, “ಮಹಾತ್ಮನೇ, ಇದು ಸರ್ವಾಂಗ ಪೂರ್ಣವಲ್ಲ, ಏಕೆಂದರೆ ನದಿಗಳಲ್ಲಿ ಶ್ರೇಷ್ಠವಾದ ಸರಸ್ವತಿ ಇಲ್ಲಿ ಕಾಣುವುದಿಲ್ಲ”. ಬ್ರಹ್ಮ ಇದನ್ನು ಕೇಳಿ ಪುಷ್ಕರ ತೀರ್ಥದಲ್ಲಿ ಸರಸ್ವತಿಯ ಆವಾಹನೆ ಮಾಡಿದ. ಅಗ ಅವಳು ತಕ್ಷಣ ಸುಪ್ರಭಾ ಎಂಬ ಹೆಸರಿನ ಶಾಖೆಯಾಗಿ ಅಲ್ಲಿ ಕಾಣಿಸಿದಳು.

ಸರಸ್ವತಿಯ ಮತ್ತೊಂದು ಶಾಖೆ ಕಾಂಚನಾಕ್ಷಿ ನೈಮಿಷ ಕ್ಷೇತ್ರದಲ್ಲಿ ವಿರಾಜಮಾನವಾಗಿದೆ. ಒಂದು ಕಾಲಕ್ಕೆ ನೈಮಿಷಾರಣ್ಯದಲ್ಲಿ ಮುನಿಜನರು ಒಂದಾಗಿ ಯಜ್ಞಕ್ಕಾಗಿ ಸ್ವಾಧ್ಯಾಯ ಮಾಡುತ್ತಿದ್ದಾಗ ಅವಳು ಅಲ್ಲಿ ಪ್ರಕಟವಾದಳು. ಗಯ ಮಹಾರಾಜ ಗಯೆಯಲ್ಲಿ ಯಜ್ಞ ಮಾಡಿದಾಗ ಮೂರನೆಯ ಶಾಖೆಯಾದ ವಿಶಾಲಳ ಉತ್ಪತ್ತಿಯಾಯಿತು.

ಸರಸ್ವತಿಯೇ ವಿಶಾಲಳ ರೂಪದಲ್ಲಿ ಬಂದು, ಯಜ್ಞವನ್ನು ಸಫಲಗೊಳಿಸಿದ್ದಳು. ಔದ್ದಾಲಕ ಋಷಿ ಕೋಶಲದೇಶದ ಉತ್ತರ ಭಾಗದಲ್ಲಿ ಯಜ್ಞ ಮಾಡಿದಾಗ ನಾಲ್ಕನೆಯ ಶಾಖೆ ಉತ್ಪತ್ತಿಯಾಗಿತ್ತು. ಋಷಿಗಳು ಸ್ಮರಿಸುತ್ತಲೇ ಸರಸ್ವತಿ ಅಲ್ಲಿ ಮನೋರಮೆಯಾದಳು. ಮಹಾರಾಜ ಕುರು, ಕುರುಕ್ಷೇತ್ರದಲ್ಲಿ ಯಜ್ಞ ಮಾಡಿದಾಗ ಓಘವತೀ ಎಂಬ ಐದನೆಯ ಶಾಖೆ ಹುಟ್ಟಿತು. ಆರನೆಯ ಶಾಖೆಯಾದ ಸುರೇಣು, ದಕ್ಷ ಪ್ರಜಾಪತಿಯ ಮೂಲಕ ಹರಿದ್ವಾರದಲ್ಲಿ ಯಜ್ಞವಾಗುವಾಗ ಕಂಡಳು. ವಿಮಲೋಕದಳೆಂಬ ಏಳನೆಯ ಶಾಖೆಯು ಬ್ರಹ್ಮ ಯಜ್ಞ ಮಾಡುವ ಸಂದರ್ಭದಲ್ಲಿ ಹಿಮಾಲಯ ಪರ್ವತದ ಮೇಲೆ ಉದ್ಭವಿಸಿದಳು

ಸರಸ್ವತಿ ಅನೇಕ ಹೆಸರುಗಳಿಂದ ಪ್ರಸಿದ್ಧಳಾಗಿದ್ದಾಳೆ. ಸತ್‌ರೂಪಾ, ಸಾವಿತ್ರಿ, ಗಾಯತ್ರಿ ಮಾಹೇಶ್ವರೀ ಮತ್ತು ಬ್ರಾಹ್ಮಣಿ. ಮಹಾಭಾರತದ ಅನುಸಾರ ದೇವಿ ಸರಸ್ವತಿಯು ವೇದಗಳಿಗೆ ಜನ್ಮ ಕೊಟ್ಟಿದ್ದಳು. ತೈತ್ತಿರಿಯ ಬ್ರಾಹ್ಮಣದಲ್ಲಿ “ಸರಸ್ವತಿಯು ಇಂದ್ರನ ಪತ್ನಿಯೆಂದು, ವೇದಗಳ ಋತ್‌ಗಳನ್ನು ಸೃಜಿಸುವ ಋಷಿಗಳು ಅವಳನ್ನು ಬಯಸುತ್ತಿದ್ದರೆಂದು” ಹೇಳಿದೆ.

ಸರಸ್ವತಿಯ ವಿಧಿವತ್ ಪೂಜೆ ಹೀಗೆ ವಸಂತ ಪಂಚಮಿಯಂದು ಮಾಡಲ್ಪಡುತ್ತದೆ. ಹಾಗಿದ್ದರೂ ದಸರಾ ಉತ್ಸವದ ಸಮಯದಲ್ಲಿ ಸಹ ಜ್ಞಾನ ಮತ್ತು ವಿದ್ಯೆಯ ದೇವಿಯ ಪೂಜೆ ನಡೆಯುತ್ತದೆ. ಬಂಗಾಲದ ವೈಷ್ಣವ ಮತಾವಲಂಬಿಗಳು ಲಕ್ಷ್ಮಿ ಮತ್ತು ಗಂಗೆಯ ನಂತರ ಸರಸ್ವತಿಯನ್ನೇ ಮೂರನೆಯವಳೆಂದು ತಿಳಿಯುತ್ತಾರೆ.

ಆದರೆ ಸಾಮಾನ್ಯವಾಗಿ ಎಲ್ಲರೂ ಅವಳನ್ನು ಬ್ರಹ್ಮನ ಭಾರ್ಯೆಯೆಂದು ತಿಳಿಯುತ್ತಾರೆ. ಅವಳ ನಾಲ್ಕೂಕಡೆಗೆ ಹರಡಿದ ಕೈಗಳು ಅವಳ ಸರ್ವವ್ಯಾಪಕತೆ ಮತ್ತು ಸರ್ವಜ್ಞತೆಯ ಚಿಹ್ನೆಗಳಾಗಿವೆ. ಅವಳ ಎರಡು ಕೈಗಳಲ್ಲಿ ವೀಣೆ, ಒಂದರಲ್ಲಿ ಅಕ್ಷಮಾಲೆ, ನಾಲ್ಕನೆಯದರಲ್ಲಿ ಒಂದು ಪುಸ್ತಕ ಕಾಣುತ್ತದೆ. ಅವೆಲ್ಲವೂ ಜ್ಞಾನ-ವಿಜ್ಞಾನ ಮತ್ತು ಕಲೆಗಳ ಪ್ರತೀಕವಾಗಿವೆ. ಅವಳ ಚಿತ್ರ ಮಹಾಸರಸ್ವತಿಯ ರೂಪದಲ್ಲಿ ಚಿತ್ರಿತವಾದಾಗ, ಅವಳನ್ನು ಪಂಚ ಮುಖಿ ಹಾಗೂ ಆರು ಕೈಗಳುಳ್ಳವಳಾಗಿ ತಿಳಿಸುತ್ತಾರೆ. ಅವಳ ವಾಹನ ಹಂಸ ಅವಳ ಶ್ವೇತ ವಸ್ತ್ರ, ಜ್ಞಾನದ ಸಂಪೂರ್ಣ ಪ್ರಕಾಶದದ್ಯೋತಕವಾಗಿದ್ದಾಳೆ.

ತಿರುಮಲೆಯಲ್ಲಿ

ಶ್ರೀ ವೆಂಕಟೇಶ್ವರಸ್ವಾಮಿ ಬ್ರಹ್ಮೋತ್ಸವ



24-9-87 ರಿಂದ **3-10-87** ವರೆಗೆ

ಲೇಖನ: ಶ್ರೀ ಎಂ.ವಿ. ಸುಬ್ಬರಾವ್


ಹಾಡುಗಳು :

ಶ್ರೀ ವಕ್ಕಂತಂ ಸೂರ್ಯನಾರಾಯಣ ರಾವ್

ಶ್ರೀ ಎಸ್.ವಿ. ರಂಗಭಟ್ಟರ್



ದೊಡ್ಡ ಶೇಷವಾಹನ
25-9-87



ಚಿಕ್ಕಶೇಷವಾಹನ
26-9-87

ತಿರುಮಲೆಯಲ್ಲಿ ಸಪ್ತಗಿರಿಯೊಡೆಯನ ಸನ್ನಿಧಿಯಲ್ಲಿ ನಡೆಯುವ ಉತ್ಸವಗಳಲ್ಲೆಲ್ಲಾ ಅತಿಪ್ರಾಚೀನತೆಯಿಂದ ಪ್ರಾಮುಖ್ಯತೆ ಹೊಂದಿ, ಅತ್ಯಂತ ವೈಭವದಿಂದ ನಡೆಸಲ್ಪಡುವ ಮಹೋತ್ಸವ "ಬ್ರಹ್ಮೋತ್ಸವ" ಅನಾದಿಕಾಲದಲ್ಲಿ ಪಿತಾಮಹ ಬ್ರಹ್ಮನಿಂದಲೇ ಆರಂಭಿಸಲ್ಪಟ್ಟು ಅನೂಚಾನವಾಗಿ ನಡೆದು ಬರುತ್ತಿರುವ ಈ ಉತ್ಸವದ ಪ್ರಶಂಸೆಯು ವರಾಹ ಪುರಾಣ, ವೇಂಕಟಾಚಲ ಮಹಾತ್ಮ್ಯೆ, ಭವಿಷ್ಯೋತ್ತರ ಪುರಾಣವೇ ಮೊದಲಾದ ಗ್ರಂಥಗಳಲ್ಲಿ ಕಂಡು ಬರುತ್ತದೆ. ಆದಿ ಬ್ರಹ್ಮನೇ ಈ ಉತ್ಸವದ ಸೂತ್ರಧಾರಿ. ಉತ್ಸವದ ಸಮಯದಲ್ಲಿ ಪ್ರತಿಯೊಂದೂ ನಡೆಯುವುದು ಆತನ ಪರ್ಯವೇಕ್ಷಣೆಯಲ್ಲೇ. ಸಾಲಂಕೃತನಾದ ಸ್ವಾಮಿ ವಿವಿಧ ವಾಹನಗಳನ್ನೇರಿ ಹೊರಹೊರಟಾಗ ಉಸ್ತುವಾರಿಗಾಗಿ ಬ್ರಹ್ಮದೇವನೂ ಹೊರಡಬೇಕು. ಅಲಂಕೃತವಾದ ಸಣ್ಣ ರಥ ಒಂದು ಸ್ವಾಮಿಯ ಮುಂದೆ ನಡೆಯಲೇ ಬೇಕು. ಆಕಾರರಹಿತನಾದ ಬ್ರಹ್ಮ ಅವ್ಯಕ್ತನಾಗಿ ಆ ರಥದಲ್ಲಿ ಕುಳಿತು ಕಾರ್ಯಕ್ರಮವನ್ನು ವೀಕ್ಷಿಸುತ್ತಿರುತ್ತಾನೆ.

ಶೇಷವಾಹನ

ಹೊರಡುತಿಹ ಶೇಷನ ಮೇಲ್
ವೆಂಕಟನಾಥನ ನೋಡಿರಿ
ತೊಲಗುತಿದೆ ಕತ್ತಲೆಯು
ದಿಸೆಗಳ ತುಂಬಿದೆ ದೀಧಿತಿಯೂ ॥ ಪ ॥

ಕಡಲೊಳು ಹಾಸಿಗೆ ಹಾಸಿದ ಶೇಷನ
ಎತ್ತಿದ ಹೆಡೆಗಳ ಕೊಡೆಗಳ ನೆರಳೊಳು
ಬೇಡುವ ಭಕ್ತರಪೇಕ್ಷೆಯ ತೀರಿಸ
ವೆಂಕಟನಾಥನು ಪತ್ನಿಯರೊಡನೆ —1—

ಮುಡಿಪುಗಳೆಲ್ಲವ ಮೋದದೆ ಸಲ್ಲಿಸಿ
ನಮಿಸುವ ಜನರಿಗೆ ಮೋಕ್ಷವ ನೀಡಲು
ಶ್ರೀ ಭೂಲಲನೆಯರೊಂದಿಗೆ ಕೂಡಿ
ಶೇಷಾದ್ರೀಶನು ಶೋಭೆಯ ಬೀರುತ —2—

ಹಂಸವಾಹನ

26–9–87

ಸಿಂಹವಾಹನ

ಮಲೆಯು ಮೊನೆ ಶಿಖರದಲಿ ಮನೆಯು ಮಾಡಿದ ಸ್ವಾಮಿ
ಮೇಲಾದ ಸಿಂಹವಾಹನ ವೇರಿದ ॥ಪ॥

ನರಸಿಂಹ ರೂಪದೊಳು ಅಂದು ಮೆರೆದಾ ಸ್ವಾಮಿ
ವಿರಳದಾ ಸಿಂಹ ವಾಹನವೇರಿದ
ದುರಿತ ಮದವಾರಣಂಗಳ ಮುರಿಯುವಾ ಸ್ವಾಮಿ
ವರವಾದ ಸಿಂಹ ವಾಹನವೇರಿದ –1–

ಭಕ್ತಜನ ಹೃದಯ ಗುಹೆಯೊಳಗೆ ನಿಂದಿಹ ಸ್ವಾಮಿ
ಭವ್ಯಮೃಗರಾಜ ವಾಹನವೇರಿದ
ತಿರುವೆಂಕಟಾದ್ರಿಯೊಳು ಸಂಚರಿಸುವಾ ಸ್ವಾಮಿ
ಕರಿರಾಜ ವೈರಿ ವಾಹನ ವೇರಿದ –2–

ಹಂಸವಾಹನ

ರಾಜ ಹಂಸವಾಹನದೊಳು ರಾಜೀವಾಕ್ಷನು ಸಾಗಿದ
ತೇಜವು ದಶದಿಶೆಯು ಹರಿಯೆ ದೇವರು ತಾ ಮೆರೆದನು ॥ ಪ ॥

ದೇವರು ತಾ ಮೆರೆದನು ದೇವರು ತಾ ಮೆರೆದನು ॥ ಅ.ಪ ॥

ಪರಮಯೋಗಿ ಹೃತ್ತರಂಗದೊಳು ತೇಲುವ ಪರಮಹಂಸ
ರಾಜಯೋಗಿ ಸಹಸ್ರಾರದೊಳು ಬೆಳಗುವ ರಾಜಹಂಸ
ಸಕಲ ಜೀವರಾಶಿಯಲ್ಲಿ ಸಂಚರಿಸುವ ಪ್ರಾಣಹಂಸ
ಅಂತರ್ಯಾಮಿಯಾಗಿ ಸಕಲದಲ್ಲಿ ಅರಳುವಾತ್ಮ ಹಂಸ –1–


ಶರಣಾಗತಜನದೀನಾಲಾಪಂಗಳನವಧರಿಸಿ
ಅಂಕದೊಳಗೆ ಹಂಸನಡೆಯ ಅಲಿವೇಣಿಯನು ಧರಿಸಿ
ಕರುಣಾವೃಷ್ಟಿಯ ಕರೆಯುತ ಕಣ್ಣಿಗೆ ಹಬ್ಬವ ಮಾಡುತ
ಅದ್ವಿತೀಯ ಜಗನ್ಮೋಹನಾಕಾರನು ತಿರುವೀಧಿಲಿ –2–

ಮುತ್ತಿನ ಪಲ್ಲಕಿ ವಾಹನ

27–9–87



ಕಲ್ಪವೃಕ್ಷ ವಾಹನ
28–9–87



ಸರ್ವಭೂಪಾಲವಾಹನ
28–9–87

(18ನೇ ಪುಟದಿಂದ)

ಚರಿತ್ರೆ :

ಚಾರಿತ್ರಿಕವಾಗಿ ಈ ಉತ್ಸವ ದಂತಿವರ್ಮ ಪಲ್ಲವನ ಕಾಲದಲ್ಲಿ ಪ್ರಾರಂಭಿಸಲ್ಪಟ್ಟಿತೆಂದು ತಿಳಿದುಬರುತ್ತದೆ. ಪಲ್ಲವರಾಜಕುಮಾರಿ ಸಾಮವೈ,ಮಾರ್ಗಳಿ ಮಾಸದಲ್ಲಿ ಏಳುದಿನಗಳಕಾಲ ಈ ಉತ್ಸವ ನಡೆಯ ಬೇಕೆಂದು ನಿರ್ದೇಶಿಸಿ ಶ್ರೀನಿವಾಸನ ಬೆಳ್ಳಿಯ ವಿಗ್ರಹವೊಂದನ್ನೂ, ಉತ್ಸವದ ಖರ್ಚಿಗೆಂದು ಭೂಮಿ,ಕಾಣಿ ಬೆಳ್ಳಿ ಬಂಗಾರಗಳನ್ನೂ ದೇವಾಲಯಕ್ಕೆ ಕೊಟ್ಟಳು. ಆ ವಿಗ್ರಹವೇ ಈಗ "ಮನವಾಳ ಪೆರುಮಾಳ್" ಎನ್ನಿಸಿಕೊಳ್ಳುವ ಮೂರ್ತಿ, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಎರಡನೆಯ ಹರಿಹರರಾಯನು ಬ್ರಹ್ಮೋತ್ಸವವೊಂದನ್ನೇರ್ಪಡಿಸಿ ಅದರ ನಿರ್ವಹಣೆಗಾಗಿ ಹಲವು ಗ್ರಾಮಗಳನ್ನು ದೇವಾಲಯಕ್ಕೆ ಬಿಟ್ಟು ಕೊಟ್ಟಂತೆ ಶಾಸನಗಳಿಂದ ತಿಳಿದು ಬರುತ್ತದೆ. ಇವಲ್ಲದೆ ಹತ್ತು ಹನ್ನೆರಡನೆಯ ಶತಮಾನಗಳ ನಡುವೆ ಆಡಿಮಾಸದಲ್ಲೂ ಒಂದು ಬ್ರಹ್ಮೋತ್ಸವ ನಡೆಯುತ್ತಿದ್ದಂತೆ ತಿಳಿದು ಬರುತ್ತದೆ. ಏನಾದರೂ ತಿರುಮಲೆಯಲ್ಲಿ 'ಪುರಟ್ಟಾಸಿ' ಮಾಸದಲ್ಲಿ ನಡೆಯುವ, ಬ್ರಹ್ಮೋತ್ಸವಕ್ಕೇ ಹೆಚ್ಚಿನ ಪ್ರಾಶಸ್ತ್ಯ.

ಈಗ ತಿರುಮಲೆಯಲ್ಲಿ ಬ್ರಹ್ಮೋತ್ಸವ ಹತ್ತುದಿನ ನಡೆದರೂ ಮೊದಲ ದಿನದ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಾಮುಖ್ಯವಿಲ್ಲ. ಉತ್ಸವದ ಅಂಗವಾಗಿ ಮೊದಲ ದಿನದ ಸಾಯಂಕಾಲ ವಿಷ್ವಕ್ಸೇನರು ದೇವಾಲಯದ ಸುತ್ತಲೂ ಮೆರವಣಿಗೆ ಹೊಂಟು ಯಾಗಶಾಲೆಗಾಗಿ ಪವಿತ್ರ ಮೃತ್ತಿಕೆಯನ್ನು ಸಂಗ್ರಹಿಸಿಕೊಂಡು, ಮಾರನೆಯದಿನ ಪ್ರಾರಂಭವಾಗುವ ಕಾರ್ಯಕ್ರಮಗಳಿಗೆ ಸಕಲ ದೇವತೆಗಳನ್ನೂ ಆಹ್ವಾನಿಸಿ, 'ತಿರುಮಲರಾಯನ ಮಂಟಪ' ವನ್ನು ಸೇರುತ್ತಾರೆ.

ಎರಡನೆಯದಿನ ಬ್ರಹ್ಮೋತ್ಸವ ಶಾಸ್ತ್ರೋಕ್ತವಾಗಿ ಪ್ರಾರಂಭವಾಗುತ್ತದೆ. ಉತ್ಸವಮೂರ್ತಿಯಾದ ಶ್ರೀ ಮಲೆಯಪ್ಪಸ್ವಾಮಿ ಉಭಯ ದೇವೇರಿಯರೊಡನೆ ಬಂಗಾರದ 'ತಿರುಚ್ಚಿ' ಯಲ್ಲಿ ತಿರುಮಲರಾಯನ ಮಂಟಪಕ್ಕೆ ಬಿಜಯಮಾಡಿಸುತ್ತಾನೆ, ವೇದಘೋಷ, ಮಂಗಳವಾದ್ಯಗಳ ಶ್ರುತಿಗೆ ಧ್ವಜಾರೋಹಣ ನಡೆಯುತ್ತದೆ. ಸ್ವಾಮಿಯ ಗರುಡಧ್ವಜ (ವಿಶಾಲವಾದ ನೂತನ ವಸ್ತ್ರದ ಮೇಲೆ ಚಿತ್ರಿಸಲ್ಪಟ್ಟ, ಗರುಡನ ಚಿಹ್ನೆಯುಳ್ಳ ಪತಾಕೆ) ಧ್ವಜಸ್ತಂಭವನ್ನೇರುತ್ತದೆ. ಬ್ರಹ್ಮೋತ್ಸವದ ವಿಶೇಷವೆಂದರೆ ಪ್ರತಿದಿನವೂ ಶ್ರೀಯವರು ವಿವಿಧವಾಹನಗಳ ಮೇಲೆ ಮೆರವಣಿಗೆ ಹೊರಡುವುದು.

ಮೊದಲನೆಯ ರಾತ್ರಿ (ಎಂದರೆ ಎರಡನೆಯದಿನದ ರಾತ್ರಿ) ಮಲೆಯಪ್ಪಸ್ವಾಮಿಯವರು ದೇವೇರಿಯರೊಡನೆ "ದೊಡ್ಡ ಶೇಷವಾಹನ"ದ ಮೇಲೆ ದೇವಾಲಯದ ಪ್ರದಕ್ಷಿಣೆ ಮಾಡುತ್ತಾರೆ.

ಎರಡನೆಯ ಪ್ರಾತಃಕಾಲ ಶ್ರೀ ಸ್ವಾಮಿಯವರಿಗೆ ಮಾತ್ರ 'ಸಣ್ಣ ಶೇಷವಾಹನ'. ಅದೇ ಸಂಜೆ 'ಹಂಸವಾಹನ'

ಮೂರನೆಯದಿನದ ಬೆಳಿಗ್ಗೆ 'ಸಿಂಹವಾಹನ', ರಾತ್ರಿ 'ಮುತ್ತಿ[illegible] ಚಪ್ಪರ'–ಮುತ್ತಿನ ಹಾರಗಳಿಂದ ಅಲಂಕೃತವಾದ ಚಪ್ಪರದಲ್ಲಿ ಕುಳಿ[illegible] ಸ್ವಾಮಿಯ ಮೆರವಣಿಗೆ ನಡೆಯುತ್ತದೆ.

ನಾಲ್ಕನೆಯದಿನ ಸ್ವಾಮಿಯವರು ಉಭಯ ದೇವೇರಿಯರೊಡ[illegible] "ಕಲ್ಪವೃಕ್ಷ ವಾಹನ"ವನ್ನಲಂಕರಿಸಿ ದೇವಾಲಯದ ಸುತ್ತಲು[illegible] ಸುತ್ತುತ್ತಾರೆ.



ಮೋಹಿನೀ ಅವತಾರ
29–9–87

ಅದೇ ಸಾಯಂಕಾಲ "ಸರ್ವಭೂಪಾಲವಾಹನ". ಬಂಗಾರದ ನೀರಿನಿಂದ ತೊಳೆಯಲ್ಪಟ್ಟ ಈ ವಾಹನದ ಮೇಲೆ ಉಭಯನಾಚ್ಚಿಯಾರ ರೊಡನೆ ಹೊರಟ ಸ್ವಾಮಿ, ದೀಪಗಳ ಕಾಂತಿಯಲ್ಲಿ ನಯನಮನೋಹರ ನಾಗಿ ಸರ್ವ ಪಾಪಹರಣನಾಗಿ ಪ್ರಕಾಶಿಸುತ್ತಾನೆ.

ಬ್ರಹ್ಮೋತ್ಸವದ ಉತ್ಸವಗಳಲ್ಲೆಲ್ಲಾ ಅತಿ ಆಕರ್ಷಣೀಯವಾದ ದ್ದೆಂದರೆ ಐದನೆಯ ದಿನದ 'ಮೋಹಿನೀ ಅವತಾರ'. ಈ ಉತ್ಸವಕ್ಕೆ ಉತ್ಸವ ಮೂರ್ತಿಯನ್ನು ಮೋಹಿನಿ ಯಂತೆ ಸರ್ವಾಂಗ ಸುಂದರವಾಗಿ ಅಲಂಕರಿಸುತ್ತಾರೆ. ಕಡೆಗೆ ವರದ ಹಸ್ತವೂ 'ಅಭಯ ಹಸ್ತ'ವಾಗುತ್ತದೆ. ಸರ್ವಾಲಂಕಾರ ಭೂಷಿತಳಾದ ಮೋಹಿನಿ ದಂತದ ಪಲ್ಲಕಿಯಲ್ಲಿ ಮೆರವಣಿಗೆ ಹೊರಡುತ್ತಾಳೆ.

ಅಂದಿನ ರಾತ್ರಿಯ ಉತ್ಸವ ಬಹಳ ಮುಖ್ಯವಾದ 'ಗರುಡೋತ್ಸವ'. ಆ ದಿನ ದೇಶದ ಮೂಲೆ ಮೂಲೆಗಳಿಂದ ಲಕ್ಷಾಂತರ ಜನ ತಿರುಮಲೆಯನ್ನು ಸೇರಿ ನಡುರಾತ್ರಿಯ ವರೆಗೆ ಸ್ವಾಮಿ ದರ್ಶನಾಕಾಂಕ್ಷಿ ಗಳಾಗಿ ಸಾವಧಾನದಿಂದ ಕಾಯುತ್ತಾರೆ. ಆ ದಿನ ಉತ್ಸವ ಮೂರ್ತಿ ಯನ್ನು 'ಲಕ್ಷ್ಮೀಹಾರ' 'ಮಕರಕಂಠಿಕೆ' ಮೊದಲಾದ ಅಪೂರ್ವ ಆಭರಣಗಳಿಂದ ಅಲಂಕರಿಸುತ್ತಾರೆ. ಆ ಸಮಯದಲ್ಲಿ ಸ್ವಾಮಿಯನ್ನು ದರ್ಶಿಸುವುದೊಂದಪೂರ್ವವಾದ ಅನುಭವ.

ಆರನೆಯ ಪ್ರಾತಃಕಾಲ "ಹನುಮಂತವಾಹನ" ಆ ಸಂಜೆ 'ವಸಂತೋತ್ಸವ'. ಈ ಉತ್ಸವಕ್ಕಾಗಿ ಮಲೆಯಪ್ಪಸ್ವಾಮಿ ಶ್ರೀದೇವಿ ಭೂದೇವಿಯರೊಡನೆ ವಸಂತಮಂಟಪವನ್ನು ಸೇರಿ 'ತಿರುಮಂಜನ' ಆಸ್ಥಾನಗಳಾದ ಮೇಲೆ ಹಿಂತಿರುಗುತ್ತಾರೆ. ಅದೇ ದಿನ ರಾತ್ರಿ "ಗಜ ವಾಹನ".

ಏಳನೆಯದಿನ ಸ್ವಾಮಿಯವರು "ಸೂರ್ಯಪ್ರಭ" ಮತ್ತು "ಚಂದ್ರ ಪ್ರಭ" ವಾಹನಗಳನ್ನಲಂಕರಿಸುತ್ತಾರೆ.


(ಮುಂದಿನ ಪುಟ ನೋಡಿ)

ಗರುಡವಾಹನ

ಗರುಡವಾಹನವೇರಿ ಘನನು ತಾ ಬಂದ
ಧರೆಯೊಳಗೆ ಧರ್ಮವನು ಸ್ಥಾಪಿಸಲು ಬಯಸಿ ॥ ಪ ॥

ಉರಗ ಪರ್ಯಂಕದಲಿ ಉದಧಿಯೊಳಗಿಹ ಸ್ವಾಮಿ
ಉರಗಾರಿಮೇಲೆ ಉರಗಾದ್ರಿಗೈತಂದ
ನರರ ಪಾಮರರ ತಾ ಮರೆಯದೇ ರಕ್ಷಿಸಲು
ಮಿಂಚಿನೊಲು ಗಗನದಲಿ ಮಿಂಚಿ ತಾ ಬಂದ –1–

ರೆಕ್ಕೆಗಳೆ ಮಿಂಚಾಗಿ ಶಬ್ದವೇ ಗುಡುಗಾಗಿ
ಮಿಕ್ಕು ಹಾರುವ ಪಕ್ಷಿರಾಜನ ಬೆನ್ನೇರಿ
ಬೇಡುವಾ ಭಕ್ತರಿಗೆ ನೆರವಾಗಿ ನೆರಳಾಗಿ
ಏಳು ಬೆಟ್ಟಗಳೊಡೆಯ ಇದೆ ತಾನು ಬಂದ –2–



ಗರುಡವಾಹನ
29–9–87

ಗಜವಾಹನ

ಅನಘನು ಶ್ರೀಹರಿ ಗಮನಿಸಿರಿ
ಘನಗಜವಾಹನದಲಿ ಗಮನಿಸಿರಿ ॥ಪ

ದುರಿತ ಲತೆಯ ಹರಿಸುವ ಪರಮಾತ್ಮನು
ಕರಿರಾಜನ ಮೇಲ್ ಗಮನಿಸಿರಿ
ಮದಗಜಗಮನನು ಮದನಜನಕನು
ಮತ್ತೇಭದ ಮೇಲ್ ಗಮನಿಸಿರಿ –1-

ತಂದೆಯ ದಂಡಿಸಿ ತನಯನ ಕಾಯ
ದಯಾಸ್ವರೂಪನ ಗಮನಿಸಿರಿ
ಮಕರಿಯ ವಧಿಸಿ ಕರಿಯ ಸಲಹಿದ
ಮಮತಾ ರೂಪನ ಗಮನಿಸಿರಿ –2-

ಕೋಟಿ ಸೂರ್ಯಕರ ಕಾಂತಿಯನೊಂದಿದ
ಕೋನೇರಿರಾಯನ ಗಮನಿಸಿರಿ
ಉನ್ನತ ರೂಪದ ಆನೆಯನೇರಿದ
ತಿರುಮಲೆರಾಯನ ಗಮನಿಸಿರಿ –3-

ಗಜವಾಹನ
30–9–87

ಹನುಮಂತ ವಾಹನ
30–9–87

ಹನುಮಂತವಾಹನ

ಅಂಬುಧಿಯನವಲೀಲೆಯಿಂದ ಲಂಘಿಸಿದ ಆ
ಹನುಮಂತನನ್ನೇರಿ ಬಂದ ಪ್ರಭುವು ॥ ಪ ॥

ಇದೊ ಬಂದ ಪ್ರಭುವು ॥ ಅ.ಪ ॥

ದೂತನಾಗಿ ಅಂದು ಸೀತೆ ವಾರ್ತೆಯ ಹೊತ್ತು
ಸಂಜೀವಗಿರಿಯ ಸೌಮಿತ್ರಿಗೋಸುಗ ತಂದು
ವಾಯುವೇಗದಿ ಗುರಿಯ ಸೇರಿ ಸೇವಿಸಿದಂಥ
ವಾಯುಸುತನನ್ನೇರಿ ಬಂದ ಪ್ರಭುವು –1–

ಏಳು ಮಲೆಗಳನೇರಿ ಬೇಡುವಾ ಆರ್ತರನು
ಎಣೆಯಿಲ್ಲದಾ ಕರುಣೆಯಲಿ ತಾನು ರಕ್ಷಿಸಲು
ಅಂಜನೇಯನ ಭುಜಸ್ಕಂಧಂಗಳನ್ನೇರಿ
ಅಂಜನಾದ್ರೀಶನೈತಂದ ನೋಡಿ –2–

(ಹಿಂದಿನ ಪುಟದಿಂದ)

ಎಂಟನೆಯ ದಿನವೇ "ರಥೋತ್ಸವ". ಗರುಡೋತ್ಸವದಂತೆಯೆ ಈ ಉತ್ಸವಕ್ಕೂ ಜನಸಂದಣಿ ಯಿರುತ್ತದೆ. ಉದಯಕಾಲದಲ್ಲೇ ಮ ಯಪ್ಪಸ್ವಾಮಿಯವರು ಸರ್ವಾಲಂಕೃತರಾಗಿ ದೇವೇರಿಯರೊಡನ ರಥದೊಳಕ್ಕೆ ದಯಮಾಡಿಸುತ್ತಾರೆ. ಭಕ್ತಿ ಪರವಶರಾದ ಭಕ್ತಕೋ ಅಪರಿಮಿತವಾದ ಭಕ್ತಿ ಶ್ರದ್ಧೆಗಳಿಂದ ರಥವನ್ನೆಳೆಯುತ್ತಾರೆ ರಥೋತ್ಸವದ ರಾತ್ರಿ "ಅಶ್ವವಾಹನ" ವಿರುತ್ತದೆ.

ಮೂರು ವರುಷಗಳಿಗೊಂದುಬಾರಿ ಅಧಿಕ ಮಾಸ ಬರುತ್ತದೆ ಆ ಸಂವತ್ಸರದಲ್ಲಿ ತಿರುಮಲೆಯಲ್ಲಿ ಅಶ್ವಯುಜಮಾಸದ ನವರಾತ್ರಿ ಯಲ್ಲೂ ಒಂದು ಬ್ರಹ್ಮೋತ್ಸವ ಜರುಗುತ್ತದೆ. ಇದನ್ನು ಎರಡನೆಯ ಬ್ರಹ್ಮೋತ್ಸವವೆನ್ನುತ್ತಾರೆ. ವ್ಯತ್ಯಾಸವೇನೆಂದರೆ ಮೊದಲನೆಯ ಬ್ರಹ್ಮೋತ್ಸವದಲ್ಲಿ ಮರದಿಂದ ನಿರ್ಮಿತವಾದ ರಥವನ್ನೇರುವ ಸ್ವಾಮಿ ಎರಡನೆಯ ಬ್ರಹ್ಮೋತ್ಸವದಲ್ಲಿ ಬೆಳ್ಳಿಯ ರಥವನ್ನೇರಿ ಸೇವ ಪಡೆಯುತ್ತಾನೆ

ಬ್ರಹ್ಮೋತ್ಸವದ ಕೊನೆಯ ದಿನವಾದ ಒಂಭತ್ತನೆಯದಿ ಮೆರವಣಿಗೆಯಾದ ನಂತರ ಸ್ವಾಮಿಯವರು ಸ್ವಾಮಿ ಪುಷ್ಕರಿಣಿಯ ದಡದಲ್ಲಿರುವ ವರಾಹಸ್ವಾಮಿ ಆಲಯಕ್ಕೆ ಬಂದು ಅವಭೃಥ ಸ್ನಾ (ತಿರುಮಂಜನ) ಮಾಡುತ್ತಾರೆ. ಸಹಸ್ರಾರು ಯಾತ್ರಿಕರು ಪುಷ್ಕರಿಣಿ ಯ ತೀರದಲ್ಲಿ ಕಾದಿದ್ದು ಚಕ್ರಸ್ನಾನದ ವೇಳೆಯಲ್ಲೇ ನೀರಿನಲ್ಲಿ ಮುಳ ಗುತ್ತಾರೆ. ಸುದರ್ಶನ ಚಕ್ರಸ್ನಾನದ ಸಮಯದಲ್ಲಿ ಪುಷ್ಕರಿಣಿಯ

ಆರಾಧಿಸುವರ ಅಂಗೈಯ ಮಾಣಿಕ್ಯ

ಆರಾಧಿಸುವರ ಅಂಗೈಯ ಮಾಣಿಕ್ಯವು
ಶ್ರೀ ವೆಂಕಟಗಿರಿವಾಸನು ಹೊರಟನೀಗಲೇ ॥ ಪ ॥

ಕೋಟಿ ಸೂರ್ಯ ಕಾಂತಿ ಪಡೆದ ಕಪ್ಪುದೇಹದವನು
ಸೂರ್ಯಪ್ರಭವಾಹನದೊಳು ಸೂರ್ಯನೇತ್ರನು
ಜನನ ಮರಣ ತಾಪಂಗಳ ತಂಪಾಗಿಪ ತಣ್ಣನೆಯವ
ಚಂದ್ರಪ್ರಭ ವಾಹನದೊಳು ಚಂದ್ರನೇತ್ರನು –1–

ನಶ್ವರವಹ ದ್ವಂದ್ವಗಳ ನಾಶ ತಾ ಮಾಡುವನು
ಅಶ್ವವಾಹನ ವೇರಿದ ಕಲ್ಕಿದೇವನು
ಕಾಮಿತಾರ್ಥಗಳನಿತ್ತು ಕಾಪಾಡುವ ಕರುಣಾಳುವು
ಕಲ್ಪವೃಕ್ಷ ವಾಹನದೊಳು ಆದಿದೇವನು –2–

ಮುಮುಕ್ಷುವುಗಳಿಗೆಲ್ಲ ಮೋಕ್ಷ ತಾ ನೀಡುವನು
ಮುತ್ತಿನಾ ಪಲ್ಲಕಿಯಲ್ಲಿ ಮುನಿವಂದ್ಯನು
ಸರ್ವಜೀವ ಕೋಟಿಯಲ್ಲಿ ಸಾಕ್ಷಿಯಾಗಿರುವವನು
ಸರ್ವಭೂಪ ವಾಹನದೊಳು ಸರ್ವಾತ್ಮಕನು –3–

–ವಿ ಎಸ್.ಆರ್.



ಚಂದಪ್ರಭವಾಹನ
1–10–87

ಮುಳುಗಿದರೆ ಸಕಲಪಾಪಗಳು ನಾಶವಾಗುವುವೆಂದು ಪ್ರತೀತಿ. ಶ್ರೀಯವರು ಬಂಗಾರದ 'ತಿರುಚ್ಚಿ'ಯಲ್ಲಿ ದೇವಾಲಯಕ್ಕೆ ಹಿಂದಿರುಗುತ್ತಾರೆ. ಗರುಡಧ್ವಜಾವರೋಹಣ, ಮಂತ್ರಾಕ್ಷತೆಗಳ ವಿತರಣೆಯೊಡನೆ ಹತ್ತುದಿನಗಳ ಉತ್ಸವ ಮುಕ್ತಾಯ ಹೊಂದುತ್ತದೆ.

ಈ ಉತ್ಸವ ಸಮಯದಲ್ಲಿ ನಡೆಯುವ ಕಾರ್ಯಕ್ರಮಗಳ ಜೊತೆಗೆ ಪುರಾಣ ಹರಿಕಥಾಕಾಲಕ್ಷೇಪಗಳೂ, ಶಾಸ್ತ್ರೀಯ ಸಂಗೀತ ಕಚೇರಿಗಳೂ, "ಧರ್ಮ ಪ್ರಚಾರ ಪರಿಷತ್" ಆಧ್ವರ್ಯದಲ್ಲಿ ನಡೆಯುತ್ತವೆ.

ತಿರುಮಲೆಯಲ್ಲಿ ದಿನ ದಿನವೂ ಉತ್ಸವಗಳು ನಡೆದರೂ ಬ್ರಹ್ಮೋತ್ಸವದ ಸಡಗರ ವಿಜ್ಞಂಭಣೆ ಇತರತ್ರ ಕಂಡು ಬರುವುದಿಲ್ಲ. ಬ್ರಹ್ಮೋತ್ಸವ ಉತ್ಸವಗಳ ಬೀಡಾದ ತಿರುಮಲೆಯಲ್ಲಿ ನಡೆಯುವ ಮಹೋತ್ಸವ. ಭಕ್ತರ ಹೃನ್ಮನಗಳನ್ನು ತಣಿಸುವ ಪರ್ವಕಾಲ. *


ರಥೋತ್ಸವ

ನೋಡಿದಿರಾ ತಿರುಮಲೆಯೊಳು ಬಂತು ಬಂತು ದಿವ್ಯರಥ
ಮಹಿನದಂತೆ ಕಲಿ ತೊಲಗಿತು ಹರಡುತ್ತಿದೆ ದರ್ಮಪಥ ॥ಪ॥

ಕಣ್ಣೆದುರು ಕಾಣುತಿಹುದು ಎಣೆಯಿಲ್ಲದ ನೊಗವು
ಬಂಡುಕೇಳಿಯರಿಯದಂಥ ಗರುಡಧ್ವಜ ಕಾಂತಿಯು
ಕಿರುಗಂಟೆಯ ದನಿಗಳು ಬೆಳ್ಳಿಚಕ್ರ ತಿರುವುಗಳು
ಪೂರ್ಣಕುಂಭ ಕಲಶಗಳು ಮೇಲು ಕುಚ್ಚು ಜರಿಗಳು –1–

ಸಿರಿ ಸತಿಯನು ಉರದೆ ಧರಿಸಿ ತಿಮ್ಮಪ್ಪನು ರಥವನೇರಿ
ಶರಣೆನರರ ಪಾಲಿಸಲು ಪರಮದಯದಿ ನಡೆದನು
ಪರಮಭಕ್ತರೇ ನೀವೆಲ್ಲರವನ ಸೇವಿಸಿ
ಪರಮಾನಂದವ ಹೊಂದಿ ಪರವಶದೊಳು ನಲಿಯಿರಿ –2–

ಎಸ್. ವಿ. ಆರ್.



ರಥೋತ್ಸವ
2–10–87

ತಿರುಮಲೆ ತಿರುಪತಿ ದೇವಸ್ಥಾನಗಳು

ತಿರುಮಲೆಯಲ್ಲಿ ವಸತಿಗಾಗಿ ದಾನಯೋಜನೆ

ಕಲಿಯುಗ ವೈಕುಂಠವೆಂದು ಹೆಸರಾದ ತಿರುಮಲೆ ಶ್ರೀ ವೆಂಕಟೇಶ್ವರನ ಆವಾಸಸ್ಥಳ. ಇಲ್ಲಿಗೆ ಸಹಸ್ರಾರು ಮಂದಿ ಯಾತ್ರಿಕರು ಪ್ರತಿದಿನವೂ ಬರುತ್ತಾರೆ. ಅನುದಿನವೂ ಹೆಚ್ಚುತ್ತಿರುವ ಯಾತ್ರಿಕರ ವಸತಿ ಸೌಕರ್ಯಗಳಿಗಾಗಿ ತಿ. ತಿ. ದೇ. ಗಳು ದಾನಯೋಜನೆಯಲ್ಲಿ ಕಾಟೇಜುಗಳು, ಸತ್ರಗಳು, ಅತಿಥಿಗೃಹಗಳನ್ನು ನಿರ್ಮಿಸುತ್ತಿದೆ. ವಿವಿಧ ಯೋಜನೆಗಳ ವಿವರಗಳು ಈ ರೀತಿ ಇವೆ.

ರಾಮಬಗೀಚಾ ಅತಿಥಿಗೃಹ

ಈ ಅತಿಥಿಗೃಹವನ್ನು ದೇವಾಲಯದ ಈಶಾನ್ಯ ಭಾಗದಲ್ಲಿ ನಿರ್ಮಿಸಲಾಗುವುದು.

* ಇದು ಪ್ರತಿಯೊಂದರಲ್ಲೂ 50 ಸೂಟ್‌ಗಳಿರುವ ಮೂರು ಅಂತಸ್ತುಗಳನ್ನು ಹೊಂದಿದ್ದು, ಪ್ರತಿ ಸೂಟ್ 14'×18' ಗಳದ್ದಾಗಿ, ಸುಮಾರು 600 ಚದರಡಿ ಪ್ಲಿಂತ್ ಏರಿಯಾದಲ್ಲಿ ಸಾಮಾನ್ಯ ಅಂಗಳವನ್ನು ಹೊಂದಿರುತ್ತದೆ.
* ದಾನಿಗಳು ಒಂದು ಸೂಟ್ ನಿರ್ಮಾಣಕ್ಕೆ ರೂ 60,000 ನೀಡಬೇಕಾಗುವುದು.

ಸಪ್ತಗಿರಿ ಧರ್ಮಶಾಲೆ

8.5 ಕೋಟಿ ರೂಗಳ ವೆಚ್ಚದ ಈ ಭಾರೀ ಯೋಜನೆಯನ್ನು ಸಪ್ತಗಿರಿ ಸತ್ರಗಳ ನಿರ್ಮಾಣಕ್ಕಾಗಿ ತಿ.ತಿ.ದೇ. ಕೈಗೊಂಡಿದೆ. ಪ್ರತಿ ಸೂಟ್‌ನ ನಿರ್ಮಾಣ ವೆಚ್ಚ 80000 ರೂಗಳು.

ದಾನಿಗಳು 40,000 ರೂಗಳನ್ನು ತಮ್ಮ ಹೆಸರಿನ ಒಂದು ಸೂಟ್‌ಗಾಗಿ ನೀಡಬೇಕಾಗುವುದು.

ಎ. ಟಿ. ಸಿ. ಕಾಟೇಜುಗಳು ಹಾಗೂ ಎಂ. ಬಿ. ಸಿ ಕಾಟೇಜುಗಳಲ್ಲಿನ ಮೇಲಂತಸ್ತು ಕೋಣೆಗಳಿಗೂ ಇದೇ ರೀತಿ ದಾನಗಳನ್ನು ನೀಡಬಹುದು.

ದಾನಿಗಳಿಗೆ ಪ್ರತಿಫಲ

* ದಾನಿಗಳಿಗೆ ತಮ್ಮ ದಾನದ ಪ್ರತಿಯಾಗಿ ವರ್ಷಕ್ಕೆ 60 ದಿನಗಳ ಕಾಲ ತಿರುಮಲೆಯಲ್ಲಿ ಉಚಿತ ವಸತಿ ದೊರೆಯುವುದು.
* ಕಂಪನಿಗಳಿಗೂ, ಸಂಸ್ಥೆಗಳಿಗೂ ಈ ಸೌಲಭ್ಯ 15 ವರ್ಷಕ್ಕೆ ಮಾತ್ರ ಸೀಮಿತ.
* ದಾನಿಗಳ ಬಂಧುಗಳಿಗೆ ವಸತಿ ನೀಡುವಲ್ಲಿ ಆದ್ಯತೆ, ನೀಡಲಾಗುವುದು.
* ಪ್ರತಿ ಕಾಟೇಜು/ಸೂಟ್ ನ ಹೊರಗೆ ದಾನಿಗಳ ಹೆಸರನ್ನು ಕೆತ್ತಿಡಲಾಗುವುದು.

ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಯವರ ಹೆಸರಿನಲ್ಲಿ ಪಡೆದ ಡಿ.ಡಿ. ಯನ್ನು ತಿರುಮಲೆಯ ಎಕ್ಸಿಕ್ಯೂಟಿವ್ ಇಂಜನಿಯರ್–V ಇವರಿಗೆ ಕಳುಹಿಸಿ.

ತುಸು ಧನವನ್ನು ವಿನಿಯೋಗಿಸಿ, ಪುಣ್ಯಫಲವನ್ನು ಪಡೆಯಿರಿ

ಮಿಕ್ಕ ವಿವರಗಳನ್ನು ಪಡೆಯಬಹುದಾದ ವಿಳಾಸ :

ಕಾರ್ಯನಿರ್ವಹಣಾಧಿಕಾರಿ
ತಿ.ತಿ. ದೇವಸ್ಥಾನಗಳು
ತಿರುಪತಿ–೫೧೭೫೦೧ ಆಂಧ್ರಪ್ರದೇಶ.

ಕಾರ್ಯನಿರ್ವಹಣಾಧಿಕಾರಿ

ಗೃಹಲಕ್ಷ್ಮಿ

ಪ್ರಾತಃಸ್ಮರಣೀಯ ತಪಃಪೂತರೂ, ದೇವಿಯರೂ ಆದವರಲ್ಲಿ ಮೊಟ್ಟಮೊದಲು ನೆನಸಬೇಕಾದುದು ಸತೀಶಿರೋಮಣಿಯಾದ ಶೀಲಾದೇವಿಯನ್ನು.

ವೈವಸ್ವತವೆನ್ನುವ ಈಗಿನ ಮನ್ವಂತರದ ಕೃತಯುಗದಲ್ಲಿ ನಡೆದ ಕಥೆ ಇದು.

ವಸಿಷ್ಠಗೋತ್ರದ ಸುಮಂತು ಎನ್ನುವ ಓರ್ವ ಬ್ರಾಹ್ಮಣನ ಪುತ್ರಿಯಾಗಿ ಶೀಲಾ ಜನಿಸಿದಳು. ಇವಳ ತಾಯಿ ಪ್ರಶಾಂತಿಯು ನಿಶ್ಶಕ್ತಳೂ, ಸದಾ ರೋಗಗ್ರಸ್ತಳೂ ಆದುದರಿಂದ ಇವಳ ಜನನವಾದ ಕೆಲವೇ ದಿನಗಳಲ್ಲಿ ಜ್ವರದ ತಾಪದಿಂದ ಬೆಂದು ಸರಿತಾ ನದಿಯ ತೀರದಲ್ಲಿ ದೇಹತ್ಯಾಗ ಮಾಡಿದಳು. ಮಾತೃಹೀನಳಾಗಿ ಶೀಲಾಳು ಬೆಳೆದಳು.

ಶೀಲಾಳ ತಾಯಿಯ ಮರಣಾನಂತರ, ಸುಮಂತುವು ಎರಡನೆ ಮದುವೆಯಾದನು. ಈಕೆಯ ಹೆಸರು ಕರ್ಕಶಾ. ಹೆಸರಿಗೆ ತಕ್ಕಂತೆ ಇದ್ದ ಇವಳು ಚರಿತ್ರಹೀನಳೂ, ಜಗಳಗಂಟಿಯೂ ಆಗಿದ್ದಳು. ಶೀಲಾಳನ್ನು ಬಯ್ಯುವುದೇ ಅಲ್ಲದೆ ಅವಳಿಂದ ಮನೆಯ ಎಲ್ಲ ರೀತಿಯ ಕೆಲಸಗಳನ್ನೂ ಮಾಡಿಸಿಕೊಳ್ಳುತ್ತಿದ್ದಳು.

ಬೆಳೆಯುತ್ತಾ, ಬೆಳೆಯುತ್ತಾ ಶೀಲಳು ವಿವಾಹಯೋಗ್ಯ ವಯಸ್ಕಳಾದಳು. ಈಗ ಸುಮಂತುವಿಗೆ ಮಗಳಿಗಾಗಿ ಯೋಗ್ಯ ವರವನ್ನು ಹುಡುಕಬೇಕಾದ ಪ್ರಸಂಗ ಒದಗಿ ಬಂದಿತು.

ಆದರೆ ಇದೇ ಸಮಯದಲ್ಲಿ ಪರಮ ವೈದಿಕನೂ, ಮುನಿರಾಜನೆಂದು ಖ್ಯಾತನಾದವನೂ ಕೌಂಡಿನ್ಯ ಮಹರ್ಷಿಯು ಅಲ್ಲಿಗೆ ಬಂದನು. ಶೀಲಾಳನ್ನು ನೋಡಿ, ಸುಮಂತನೊಂದಿಗೆ ಹೀಗೆಂದನು–

"ನಿಮ್ಮ ಪರಮ ಸುಂದರಿಯಾದ ಮಗಳನ್ನು ನೋಡಿದೆನು. ನನಗೆ ತುಂಬಾ ಇಷ್ಟವಾಯಿತು. ಆಕೆಯನ್ನು ನಾನು ವಿವಾಹವಾಗಲು ಇಚ್ಛಿಸುತ್ತಿದ್ದೇನೆ".

ಇದನ್ನು ಆಲಿಸಿ ಸುಮಂತನು ತುಂಬಾ ಸಂತೋಷಗೊಂಡು, ವಿವಾಹಕ್ಕೆ ಸಿದ್ಧತೆಗಳನ್ನು ಮಾಡಿದನು. ಪ್ರಜ್ವಲಿತ ಅಗ್ನಿ, ವಿಪ್ರೋತ್ತರ ವೇದಪಠನ ಹಾಗೂ ಸ್ತ್ರೀಯರ ಮಂಗಳಮಯ ಹಾಡುಗಳ ನಡುವೆ ವಿಧಿವಿಧಾನಗಳೊಂದಿಗೆ ಶೀಲಾಳ ವಿವಾಹವು ಕೌಂಡಿನ್ಯ ಋಷಿಯೊಂದಿಗಾಯಿತು.

ವಿವಾಹಾನಂತರ ಶೀಲಾಳು ತನ್ನ ಪತಿಯೊಂದಿಗೆ ಗಂಡನ ಮನೆಗೆ ಹೊರಟಳು. ಧನವಂತನಾದ ಋಷಿಯು ಶೀಲಾಳನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಕರೆದುಕೊಂಡು



ಅನಂತ ಪದ್ಮನಾಭ ವ್ರತಮಹಿಮೆ

ಹೋಗುತ್ತಿದ್ದನು. ಒಮ್ಮೆ ಮಧ್ಯಾಹ್ನ ಭೋಜನದ ಸಮಯವಾಗಿತ್ತು. ನದಿಯ ದಡದಲ್ಲಿ ಕೆಂಪು ವಸ್ತ್ರಗಳನ್ನು ಧರಿಸಿದ ಸ್ತ್ರೀ ಸಮುದಾಯವೊಂದನ್ನು ಶೀಲಾಳು ನೋಡಿದಳು. ಅವರು ಯಾವುದೋ ವ್ರತವನ್ನು ಆಚರಿಸುವಂತಿತ್ತು. ಅವಳು ಅವರ ಬಳಿಗೆ ಹೋಗಿ,

"ಸಹೋದರಿಯರೆ, ನೀವು ಆಚರಿಸುತ್ತಿರುವ ಈ ವ್ರತದ ಹೆಸರೇನು?" ಎಂದು ಕೇಳಿದಳು. ಅದಕ್ಕೆ ಅವರು,

"ಇದು ಅನಂತದೇವನ 'ಅನಂತ ಚತುರ್ದಶಿಯ ವ್ರತ'ಕ್ಕೆ ಸಂಬಂಧಪಟ್ಟುದ್ದಾಗಿದೆ. ಇಂದು ಅನಂತ ಚತುರ್ದಶಿ. ಅದರಿಂದ ನಾನು ಈ ವ್ರತವನ್ನು ಆಚರಿಸುತ್ತಿದ್ದೇವೆ."

"ಈ ವ್ರತವನ್ನು ಹೇಗೆ ಆಚರಿಸುವುದು? ನನಗೂ ತಿಳಿಯಹೇಳಿ. ನಾನೂನು ಮಾಡಬೇಕೆಂದಿರುವೆನು" ಎಂದು ಶೀಲಾಳು ವಿನಯಪೂರ್ವಕವಾಗಿ ಕೇಳಿದಳು.

ಅವರಲ್ಲಿ ಓರ್ವ ಸ್ತ್ರೀಯು ಹೀಗೆಂದು ವಿವರಿಸಿದಳು,

'ರಘುಸುತ'

"ಸೋದರಿ! ಒಂದು ತಪತಿ ಅನ್ನವನ್ನು ಮೊದಲು ಸಿದ್ಧಪಡಿಸಬೇಕು. ಅದರಿಂದ ಯಾವುದೇ ಪರಿವರ್ತನ ತಿಂಡಿಯನ್ನು ಮಾಡಬೇಕಾದರೂ ಅದಕ್ಕೆ ಪುರುಷವಾಚಕ ಹೆಸರಿನದೇ ಆಗಬೇಕು. ನಂತರ ಅದನ್ನು ಓರ್ವ ಬ್ರಾಹ್ಮಣನಿಗೆ ಲೋಭರಹಿತಳಾಗಿ, ದಕ್ಷಿಣೆ ಸಹಿತ ದಾನ ಮಾಡಬೇಕು. ಕುಶಗಳ ಕೊನೆಗಳಿಂದ ನಿರ್ಮಿಸಿದ ಬಿದಿರು ಪಾತ್ರೆಯ ನಡುವೆ ಅದನ್ನು ಇಡಬೇಕು. ಸಚೇಲ ಸ್ನಾನಮಾಡಿ ಮಂಡಲದ ಮೇಲೆ ದೀಪ ಗಂಧಗಳಿಂದಲೂ, ಪುಷ್ಪ ಧೂಪಗಳು ಹಾಗೂ ಅನೇಕ ತರಹದ ಪಕ್ವಾನ್ನಗಳಿಂದ ಸಿದ್ಧಗೊಳಿಸಿದ ನೈವೇದ್ಯಗಳಿಂದ ಅನಂತ ಭಗವಾನನ ಪೂಜೆ ಮಾಡಬೇಕು. ಅದರ ಎದುರುಗಡೆ ಪ್ರತಿಯೊಂದೂ ಕುಂಕುಮ ಲೇಪಿತ ಹಾಗೂ ಹದಿನಾಲ್ಕು ಗಂಟುಗಳಿಂದ ಕೂಡಿದ ದಾರಗಳನ್ನಿಟ್ಟು ಪವಿತ್ರ ಗಂಧಾದಿಗಳಿಂದ ಪೂಜೆ ಮಾಡಬೇಕು. ಆ ನಂತರ ಪ್ರತಿಯೊಬ್ಬರೂ ಆ ದಾರಗಳನ್ನು ಧರಿಸಬೇಕು. ಗಂಡಸರು ಬಲಗೈಗೆ, ಹೆಂಗಸರು ಎಡಗೈಗೆ ಈ ದಾರವನ್ನು ಧರಿಸಬೇಕು. ನಂತರ ಅನಂತ ಪದ್ಮನಾಭನ ಕಥಾಶ್ರವಣ ಮಾಡಬೇಕು. ಅದನ್ನು ಆಲಿಸುವಾಗ ವಿಶ್ವರೂಪಿ ನಾರಾಯಣನ ನಾಮಸ್ಮರಣೆಯ ಧ್ಯಾನದಲ್ಲಿ ತಲ್ಲೀನನಾಗಿರಬೇಕು. ಈ ಪುಣ್ಯಮಯ ವ್ರತ ಹಾಗೂ ಕಥಾಶ್ರವಣದ

ತಿರುಮಲೆಯ ಯಾತ್ರಿಕರಿಗೆ ವಿಶೇಷ ಸೌಲಭ್ಯಗಳು.

* ಎಲ್ಲ ವರ್ಗಗಳವರಿಗೂ ಉಚಿತವಾಗಿ ದೊರೆಯುವ ಪರಿಶುದ್ಧ ಸತ್ರಗಳು ಅಥವಾ ಸುಲಭ ದರದಲ್ಲಿ ದೊರೆಯುವ ಬೀಡುಗಳ ವಸತಿ ಸೌಕರ್ಯ.

* ವೆಂಕಟೇಶ್ವರಸ್ವಾಮಿ ದರ್ಶನದ ಯಾತ್ರಿಕರ ಕಾಯುವ ಕೋಣೆಗಳಲ್ಲಿ(ವೈಕುಂಠ)ಗಾಳಿ ಬೆಳಕುಗಳ ವ್ಯಾಪಕ ಏರ್ಪಾಡು

* ಸರತಿಯ ಸಾಲಿನ ಕೋಣೆಗಳಲ್ಲಿ ಅಲ್ಪಾಹಾರ ಸೌಲಭ್ಯ.

* ಸುಲಭದರದ ಆಹಾರದ ಪೊಟ್ಟಣಗಳ ಮಾರಾಟ.

* ಸರತಿಯ ಸಾಲಿನ ಕೋಣೆಗಳಿಂದ ಹೊರಹೋಗಬೇಕಾದ ಅಗತ್ಯವಿಲ್ಲದಂತೆ ಶೌಚ ಗೃಹಗಳು

* ಆಂಧ್ರಪ್ರದೇಶ್ ಹಯನೋತ್ಪಾದನಾವಿತರಣೆ ಇಲಾಖೆಯವರಿಂದ ಶುದ್ಧ ಹಾಲಿನ ಮಾರಾಟ.

* ಯಾತ್ರಿಕರ ವಾಚನಾಭಿರುಚಿಯನ್ನು ಹೆಚ್ಚಿಸುವ ತಿ.ತಿ.ದೇ. ಪ್ರಕಟಣೆಗಳಾದ ಪುಸ್ತಕಗಳು, ದೈವಚಿತ್ರಗಳ ಮಾರಾಟ

* ಸರತಿಯ ಸಾಲಿನ ಯಾತ್ರಿಕರಿಗೆ ಉಲ್ಲಾಸಕರವಾದ ಟೆಲಿವಿಷನ್ ಪ್ರದರ್ಶನ, ಭಕ್ತಿ ಸಂಗೀತ

* ಸರತಿಯ ಸಾಲು ಹಾಗೂ ತಿರುಮಲೆಯ ಕಾಲುಹಾದಿಯ 7-ನೇ ಮೈಲಿಯ ಬಳಿ ವೈದ್ಯಸೌಲಭ್ಯ, ಉಪಹಾರ ಸೌಲಭ್ಯ. ಗೋವಿಂದ ಪ್ರಸಾದ ಕ್ಯಾಂಟೀನ್,

* ಯಾತ್ರಿಕರ ವಸ್ತುಗಳು, ಪಾದರಕ್ಷೆಗಳ ರಕ್ಷಣೆಗಾಗಿ ಪ್ರತ್ಯೇಕ ಸೌಲಭ್ಯ.

* ತಿರುಮಲೆಯ ಸ್ವಾಗತ ಕಚೇರಿಯಿಂದ ವಿವಿಧ ಸ್ಥಳಗಳಿಗೆ ಆಟೋ ಸೌಕರ್ಯ. ಹಾಗೂ ಉಚಿತ ಬಸ್ ಸೌಕರ್ಯ.

* ತಿರುಮಲೆಗೆ ನಡೆದು ಹೋಗುವವರ ವಸ್ತುಗಳನ್ನು ಸುರಕ್ಷಿತವಾಗಿ ತಿರುಮಲೆಗೆ ಸೇರಿಸುವ ಅನುಕೂಲ.

* ಪಂಡಾಗಳು, ವಂಚಕರಿಂದ ಯಾತ್ರಿಕರನ್ನು ತಪ್ಪಿಸಲು ಪೇಷ್ಕಾರ್ ಪದವಿಯ ಅಧಿಕಾರಿಯನ್ನು ಮಹಾದ್ವಾರದಲ್ಲಿ ನೇಮಿಸುವಿಕೆ.

* ಸರತಿಯ ಸಾಲಿನ ಕೋಣೆಗಳ ಯಾತ್ರಿಕರ ದೂರುಗಳ ವಿಚಾರಣೆಗಾಗಿ, ಅನುಕೂಲಗಳ ಏರ್ಪಾಡಿಗಾಗಿ ಪೇಷ್ಕಾರ್ ಪದವಿಯ ಮತ್ತೊಬ್ಬ ಅಧಿಕಾರಿ ಮತ್ತು ಸಿಬ್ಬಂದಿ.

ದೇವಸ್ಥಾನದ ಪ್ರಯತ್ನಗಳಲ್ಲಿ ಇವು ಕೆಲವು ಮಾತ್ರವೇ.

ಗಮನಿಕೆ : ತಿರುಮಲೆಯಲ್ಲಿ ಅಂಚೆ ಕಚೇರಿಯು ರಾತ್ರಿ 8-30 ಗಂಟೆಯವರೆಗೆ ಕೆಲಸಮಾಡುತ್ತದೆ. ಜೊತೆಗೆ ಪ್ರಧಾನ ಅಂಚೆ ಕಚೇರಿಯು ರಾತ್ರಿ 10—30 ರಿಂದ 1—00 ಗಂಟೆಯವರೆಗೆ ಕೆಲಸಮಾಡುತ್ತದೆ.

ಪ್ರಭಾವದಿಂದ ಮಾನವನು ಸರ್ವಪಾಪಗಳಿಂದ ದೂರನಾಗಿ, ಪರಮಾತ್ಮನ ಪರಮ ಪದವನ್ನು ಪಡೆಯುವನು."

ಆ ಸ್ತ್ರೀಯರಿಂದ ಪ್ರೇಮಪೂರಿತ ದನಿಯಲ್ಲಿ ಅನಂತ ಪದ್ಮನಾಭನ ಮಹಿಮೆಯನ್ನು ಆಲಿಸಿದ ಶೀಲಳು ಗದ್ಗದಳಾದಳು. ಭಾವ ಪರವಶಳಾಗಿ, ಪೂಜೆಮಾಡಿದ ಅನಂತನ ದಾರವನ್ನು ಪಡೆದು ತನ್ನ ಎಡಗೈಗೆ ಕಟ್ಟಿಕೊಂಡಳು. ತನ್ನೊಂದಿಗೆ ತಂದಿದ್ದ ಭೋಜನದಲ್ಲಿ ಅರ್ಧವನ್ನು ಬ್ರಾಹ್ಮಣರಿಗೆ ಹಾಗೂ ದೀನಪಲಿತರಿಗೆ ದಾನಮಾಡಿ, ಉಳಿದರ್ಧವನ್ನು ತಾನು ಊಟಮಾಡಿದಳು.

ನಂತರ ರಥದಲ್ಲಿ ಕುಳಿತು, ಪತಿಯೊಂದಿಗೆ ಪ್ರಯಾಣವನ್ನು ಮುಂದುವರಿಸಿದಳು. ಅವಳಿಗೆ ಈ ಅನಂತನ ವ್ರತದಲ್ಲಿ ದೃಢ ವಿಶ್ವಾಸ ಉಂಟಾಯಿತು.

ಈ ಅನಂತವ್ರತದ ಪ್ರಭಾವದಿಂದ ಕೌಂಡಿನ್ಯ ಋಷಿಯ ಮನೆಯಲ್ಲಿ ಬೃಹತ್ ಗೋಧನವು ಸಂಗ್ರಹಿತವಾಯಿತು. ಧನ–ಧಾನ್ಯಗಳೊಂದಿಗೆ ಮನೆಯಲ್ಲಿ ಲಕ್ಷ್ಮಿಯು ತುಂಬಿ ಬಿಟ್ಟಿದ್ದಳು. ಅತಿಥಿ ಸತ್ಕಾರ ಹಾಗೂ ಪೂಜೆಗಳಿಗಾಗಿ ಸದಾ ಕಾತರಳಾಗಿದ್ದಳು. ದೇವಾಂಗನೆಯರಂತೆ ಸಂಪನ್ನಳಾಗಿಯೂ, ಸತಿ ಸಾವಿತ್ರಿಯಂತೆ ಸುಶೋಭಿತಳಾಗಿಯೂ ಸದಾ ಕಾಲದಲ್ಲಿ ಪತಿ ಪರಾಯಣೆಯಾಗಿ ಆನಂದ ತುಂದಿಳಾಗುತ್ತಿದ್ದಳು.

ಅದೊಂದು ದಿನ ಕೌಂಡಿನ್ಯನು ತನ್ನ ಪತ್ನಿಯ ಕೈನಲ್ಲಿದ್ದ ದಾರವನ್ನು ಗಮನಿಸಿದನು ಅವನಲ್ಲಿ ಸಂಶಯ ಸುಳಿಯಿತು. ಬುದ್ಧಿಗೆ ಅಂಧಕಾರವು ಮುಸುಗಿತ್ತು.

ನನ್ನನ್ನು ವಶಪಡಿಸಿ ಕೊಳ್ಳಲು ಇದೆಂತಹ ಮಾಟ ಮಂತ್ರದ ದಾರವನ್ನು ಕಟ್ಟಿಕೊಂಡಿದ್ದಿ?

ಎಂದು ಕೋಪದಿಂದ ಹೇಳಿದವನೆ, ದಾರವನ್ನು ಕಿತ್ತು, ಉರಿಯುತ್ತಿರುವ ಅಗ್ನಿಯಲ್ಲಿ ಹಾಕಿದನು. ಶೀಲಾಳು ಜಡಪಡಿಸಿದಳು. ಕೂಡಲೆ ಉರಿಯುತ್ತಿರುವ ಬೆಂಕಿಯಿಂದ ಆ ದಾರವನ್ನು ಹೊರ ತೆಗೆದು, ಹಾಲಿನಲ್ಲಿ ಹಾಕಿ, ತಣ್ಣಗೆ ಮಾಡಿದಳು. ನಂತರ ಅದುವರೆವಿಗೂ ನಡೆದುದೆಲ್ಲವನ್ನೂ ನೆನೆದು ಬಹಳವಾಗಿ ದುಃಖಿಸಿದಳು. ಮುಂದೇನು ಆಗುವುದೋ ಎಂಬ ಭಯದಿಂದ ತತ್ತರಿಸಿದಳು.

ಇದರ ಪ್ರಭಾವವೋ ಎನ್ನುವಂತೆ ಕೌಂಡಿನ್ಯನು ಕೆಲವೇ ದಿನಗಳಲ್ಲಿ ದರಿದ್ರನಾದನು. ಎಲ್ಲಿಂದ, ಯಾವ ಮೂಲಗಳಿಂದ ಹಣ ಬಂದಿತ್ತೊ, ಅದೇ ಮೂಲದಿಂದ ಆ ಧನವೆಲ್ಲವೂ ಹೊರಟು ಹೋಯಿತು ಅವನ ಬಳಿ ಏನೂ ಉಳಿಯಲಿಲ್ಲ. ಇದರೊಂದಿಗೆ ಅವನು ಅನೇಕ ಜನರ ದ್ವೇಷವನ್ನು ಕಟ್ಟಿ ಕೊಳ್ಳಬೇಕಾಯಿತು.

ಕೌಂಡಿನ್ಯನಿಗೆ ಈಗ ತನ್ನ ತಪ್ಪಿನ ಅರಿವಾಯಿತು. ಇದರಿಂದ ಬಹಳವಾಗಿ ದುಃಖಗೊಂಡ. ಇದಕ್ಕೆ ಕಾರಣವನ್ನು ತನ್ನ ತಪೋಮಯಿ ಶೀಲಾಳ ಬಳಿ ಕೇಳಿದ ಅದುವರೆವಿಗಿನ, ಅವನ ತಪಃ ಪ್ರಭಾವವೆಲ್ಲವೂ ನಷ್ಟವಾಗಿರುವುದನ್ನು ಕಂಡ ಶೀಲಾಳು ಹೇಳಿದಳು.

"ಸ್ವಾಮಿ! ಈ ದರಿದ್ರತೆಗೆ ಕಾರಣವನ್ನು ನಾನು ಬಹಳ ಚನ್ನಾಗಿ ಬಲ್ಲೆ. ನನ್ನ ಕೈನಲ್ಲಿನ ಅನಂತನ ದಾರವನ್ನು ಕಿತ್ತು ನೀವು ಅನಂತ ಪದ್ಮನಾಭನ ಕೋಪಕ್ಕೆ ಗುರಿಯಾಗಿರುವಿರಿ. ಇದರಿಂದಲೇ ನಿಮಗೆ ಇಂತಹ ದುರ್ದಶೆ. ಆದುದರಿಂದ ನೀವು ಶುದ್ಧ ಮನಸ್ಸಿನಿಂದ ಇದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಿ. ಆ ಭಗವಂತನ ಪ್ರಾಪ್ತಿಗಾಗಿ ತಪಸ್ಸನ್ನು ಆಚರಿಸಿ. ಇದೇ ನಿಮ್ಮಲ್ಲಿ ನನ್ನ ಸವಿನಯ ಪ್ರಾರ್ಥನೆ. ಭಗವಂತ ಕೃಪೆ ಉಂಟಾದಲ್ಲಿ ಸಂಪತ್ತೇ ಏನು ಪರಲೋಕದ ಸುಖ ಸೌಭಾಗ್ಯವೂ ಅನಾಯಾಸವಾಗಿ ನಮಗೆ ಪ್ರಾಪ್ತವಾಗುತ್ತದೆ ....ನಾನಂತೂ ಆ ಪರಮಾತ್ಮ ನನ್ನ ಶುದ್ಧ ಮನಸ್ಸಿನಿಂದ ಪ್ರಾರ್ಥಿಸುತ್ತೇನೆ...''

ಪತ್ನಿಯಿಂದ ಇಂತಹ ಮಾತುಗಳನ್ನು ಆಲಿಸಿದ ಕೂಡಲೆ ಕೌಂಡಿನ್ಯ ಋಷಿಯ ಹೃದಯವು ಪತ್ನಿಯ ಬಗೆಗೆ ಪ್ರೇಮ ವಿಹ್ವಲಗೊಂಡನು. ಅವನು ಯೋಚಿಸತೊಡಗಿದನು.

"ನನ್ನ ಪತ್ನಿಯ ರೂಪದಲ್ಲಿ ಯಾರೋ ದೇವಿಯು ನನಗೆದಾರಿ ತೋರಿಸಲು ಬಂದಿರುವಳು, ಈ ಭವಸಾಗರದಿಂದ ನನ್ನನ್ನು ಮೇತಿತ್ತಲು ಬಂದಿರುವ ಓರ್ವ ಮಹಾ ಮಹಿಮಳು ಇವಳು''

ಎಂದು ಕೊಂಡವನೆ, ಆಕೆ ತಿಳಿಸಿದಂತೆ ಅನಂತ ದೇವನ ತಪಸ್ಸಿನಲ್ಲಿ ತೊಡಗಿದನು. ಆ ದೇವರ ಬಗ್ಗೆ ಉನ್ಮತ್ತನಂತಾದನು. ಸದಾ ಕಾಲದಲ್ಲೂ ಭಗವಂತನ ಧ್ಯಾನವೇನೆ ಅದರ ವಿನಹ ಬೇರೆ ಮಾತೇ ಹೊರ ಬರುತ್ತಿರಲಿಲ್ಲ. ತಪಸ್ಸಿನಲ್ಲಿ ಲೀನನಾಗಿ ಭಗವಂತರ ದರ್ಶನ ಪಡೆಯಲು ಕಾತುರಗೊಂಡ ಹಗಲಿರುಳು ಅವನ ನಾಮದ ಜಪವೆ!

ಕೌಂಡಿನ್ಯನ ಮಾನಸಿಕ ಸ್ಥಿತಿಯು ವಿಚಿತ್ರ ರೂಪವನ್ನು ಪಡೆಯಿತು. ಮರಗಿಡಗಳು, ಗೋವು ವೃಷಭಗಳು, ಸರೋವರ ತಟಾಕಗಳು, ಬೆಟ್ಟಗಳು, ಪುಷ್ಪಗಳು–ಎಲ್ಲವನ್ನೂ ಆ ದೇವದೇವನು ದೊರೆಯುವ ಸ್ಥಳವನ್ನು ತೋರಿಸಿ ಎಂದು ಬೇಡಿಕೊಳ್ಳ ತೊಡಗಿದ. ಯಾರೂ ಅವನ ಇರುವಿಕೆಯನ್ನು ತೋರಲಿಲ್ಲ. ಇದರಿಂದ ಉದ್ವೇಗಗೊಂಡ ಆ ಮುನಿಯು ಪರಮಾತ್ಮನ ದರ್ಶನಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದನು.

ಇದರಿಂದ ಪ್ರಭಾವಿತಗೊಂಡ ಭಗವಾನನು ವೃದ್ಧ ಬ್ರಾಹ್ಮಣನ ವೇಷ ಧರಿಸಿ, ಕೌಂಡಿನ್ಯನ ಆತ್ಮ ಹತ್ಯೆಯನ್ನು ತಪ್ಪಿಸಿ ಅವನ ಕೈ ಹಿಡಿದು ಕೊಂಡು ಗುಹೆಯೊಂದರಲ್ಲಿ ಕರೆದೊಯ್ದನು. ಅಲ್ಲಿ ಆ ಋಷಿಗೆ ತನ್ನ ಮಂಗಳ ಮಯ ರೂಪದ ದರ್ಶನ ನೀಡಿ, ತನ್ನ ವಿಭೂತಿತತ್ತ್ವವನ್ನು ಪ್ರದರ್ಶಿಸಿದನು.

ಕೌಂಡಿನ್ಯನು ಧನ್ಯನಾದೆನೆಂದುಕೊಂಡನು. ಆ ದೇವದೇವನನ್ನು ಅಮಿತ ಪ್ರಾರ್ಥನೆಗಳಿಂದ ಕೊಂಡಾಡಿದನು. ಭಗವಂತನು ಅಂತರ್ಧಾನವಾದ ಮೇಲೆ ಕೌಂಡಿನ್ಯನು ತನ್ನ ಆಶ್ರಮಕ್ಕೆ ಹಿಂತಿರುಗಿದನು.

ಆಶ್ರಮಕ್ಕೆ ಬಂದ ಕೂಡಲೆ ಶೀಲಾಳು ಅವನು ಪಾದಗಳ ಮೇಲೆ ಬಿದ್ದು ಕಣ್ಣೀರ್ಗ

(ಮುಂದಿನ ಪುಟ ನೋಡಿ)

(14 ನೇ ಪುಟದಿಂದ)

ವೇದಗಳಲ್ಲಿ ಮರ್ಯೆಯನ್ನು ತೋರಿಸಿ, ಅದರ ನಿವೃತ್ತಿಗೆ ಕೈಗೊಳ್ಳಬೇಕಾದ ಕೆಲಸವು ಇಬ್ಬಗೆಯಾಗಿ ವರ್ಣಿತವಾಗಿದೆ. ಮೊದಲಾಗಿ ಚೇತನನಿಗೆ ಕೇವಲ ಉಪದೇಶಮಾಡಿ ಅನುಷ್ಠಾನದ ಹೊಣೆಯನ್ನು ಅವನ ಪಾಲಿಗೇ ಬಿಡುವುದು. ಆ ಅನುಷ್ಠಾನದ ಫಲವಾಗಿ ಪರಮೇಶ್ವರನನ್ನು ಸಾಕ್ಷಾತ್ಕರಿಸುವುದು. ಇದು ಮಹರ್ಷಿಗಳ ಪಾಲಿಗೆ ಸೇರಿದ ಕ್ರಮ. ಎರಡನೇ ವಿಧದಲ್ಲಿ ಪರಮಾತ್ಮನು ತನ್ನನ್ನು ತಾನೇ ತೋರಿಸಿಕೊಂಡು ಚೇತನನಿಗೆ ತಡೆಯಾಗಿರುವ ಕಷ್ಟಗಳನ್ನೆಲ್ಲಾ ದರ್ಶನದಾನದಿಂದ ತಾನೇ ನೀಗಿಸುವುದು, ಆಳ್ವಾರುಗಳೆಂಬ ದಿವ್ಯಸೂರಿಗಳ ಅನುಭವಕ್ಕೆ ಸೇರಿದುದಾಗಿದೆ.

ಮೇಲೆ ತಿಳಿಸಿದ ಎರಡೂಬಗೆಯಾಗಿ ತೋರುವ ಶಾಸ್ತ್ರಕ್ಕೆ ಕಾರಣವುಂಟು ಪ್ರಪಂಚದಲ್ಲಿ ಅಚಿತ್ ವರ್ಗದೊಡನೆ ಸೇರಿಕೊಂಡು ದುಃಖಸಾಗರದಲ್ಲಿ ಮುಳುಗಿ ಜಿಗುಪ್ಸೆ ಹುಟ್ಟಿ, ಅದರೊಡನೆ ಸಂಸರ್ಗವನ್ನು ಪೂರ್ಣವಾಗಿ ಬಿಡಿಸಿಕೊಳ್ಳಬೇಕೆಂಬ ವಿರಕ್ತಿ ಭಾವನೆ ಏರ್ಪಡುವುದು. ಅದಕ್ಕೆ ವೇದೋಕ್ತವಾದ ರೀತಿಯಲ್ಲಿ ಅತಿವಿಧೇಯತೆಯಿಂದ ಅನುಸರಿಸುವುದು. ಪ್ರತಿಫಲವಾಗಿ ಪೂರ್ಣ ಸುಖವನ್ನು ಸದಾ ಅನುಭವಿಸಲು ಹಕ್ಕಿರುವುದಿಲ್ಲವೆಂಬ ಮನೋಭಾವನೆ ಇರುವುದರಿಂದ ಈ ಮಾರ್ಗಕ್ಕೆ ಆವಶ್ಯಕವಾಗಿ ಬಳಸಬೇಕಾದುದು ಜ್ಞಾನ ಮತ್ತು ವೈರಾಗ್ಯ. ಜ್ಞಾನವು ವನಿತೆಯ ಕಂಠದಲ್ಲಿನ ಮಾಂಗಲ್ಯದಂತೆ, ವೈರಾಗ್ಯವು ಸತಿಯ ಪಾದದ ಕಾಲುಂಗುರದಂತೆ.

ಮತ್ತೊಂದು ಬಗೆಯಲ್ಲಿ ಚೇತನನಿಗೂ ಪರಮಾತ್ಮನಿಗೂ ಸಹಜವಾಗಿರುವ ಸಂಬಂಧಜ್ಞಾನ. ಆ ಸಂಬಂಧ ಜ್ಞಾನವೇ ಶರೀರಾತ್ಮ ಭಾವನಿಬಂಧನ. ಇದು ಜೀವಾತ್ಮನವಿಷಯದಲ್ಲಿ ಅದಕ್ಕೆ ಸೇರಿದ ಶರೀರವು ಇರುವ ರೀತಿಯಲ್ಲ; ಪರಮಾತ್ಮನ ವಿಷಯದಲ್ಲಿ ಚೇತನನು ನಡೆದುಕೊಳ್ಳಬೇಕೆಂಬ ಅರಿವು. ಈ ತಿಳುವಳಿಕೆಯು ಚೇತನನಿಗೆ ಸದಾ ಇರಬೇಕಾದುದೇ ಸಹಜವಾದ ಸಂಬಂಧ. ಈ ಸಂಬಂಧದ ಅರಿವನ್ನು ಉಳಿಸಿಕೊಳ್ಳಲು ಅಸಮರ್ಥನಾದ ಚೇತನನು ಪರಮಾತ್ಮನನ್ನೇ ಮೊರೆಯಿಡಬೇಕು. ಚೇತನನು ಭಗವಂತನ ಶರೀರವೆಂಬ ಭಾವನೆಯಿಂದ ಈಶ್ವರನ ದಿವ್ಯಶರೀರವಾಗಿ, ಅದರ ಪರಿಣಾಮದಿಂದ ಪರಮಾತ್ಮನೇ ಆತ್ಮನಾಗಿ ಚೇತನನು ಅವನಿಗೆ ಶರೀರವಾಗಿಯೇ ಉಳಿಯಬೇಕೆಂಬ ನಿಲುವನ್ನು ಎಂದಿಗೂ ಮರೆಯದಿರುವ ಸ್ಥಿತಿ. ಹೀಗೆ ವೇದಾಂತದಲ್ಲಿ ದೃಷ್ಟಿ ಭೇದದಿಂದ ಮರ್ಯೆಬೇಧಗಳು ಏರ್ಪಟ್ಟವು.

ದುಃಖ ಜನಕವಾದ ಪ್ರಪಂಚ ವೈರಾಗ್ಯವನ್ನುಂಟುಮಾಡುತ್ತದೆ. ಸಾಂಸಾರಿಕ ಜೀವನದ ಬೇಸರಿಕೆಗೆ ಪರಿಹಾರ ತ್ಯಾಗ, ಸನ್ಯಾಸ, ಅಸಂಸರ್ಗ. ಮತ್ತೊಂದು ದೃಷ್ಟಿಯಿಂದ ಈಶ್ವರನಿಗೆ ಜೀವಾತ್ಮನು ಶರೀರವೆಂಬ ಭಾವನೆಯಿಂದ ಕೂಡಿದರೆ ಆಗ ದಿವ್ಯಸೂರಿಯಾಗಿ, ಅದು ನಿರಂತರ ಉಳಿದುಕೊಂಡರೆ; ನಿತ್ಯಸೂರಿಗೆ ಸಮನಾದ ಮುಕ್ತ ಎಂಬ ಉನ್ನತ ಸ್ಥಾನವನ್ನು ಪಡೆಯುತ್ತಾನೆ. ಈ ಭಾವನೆ ಈಶ್ವರ ಸಂಬಂಧ ಜ್ಞಾನದಲ್ಲಿ ಏರ್ಪಡುತ್ತದೆ.

ಮೇಲೆ ಹೇಳಿದ ದಿವ್ಯತ್ವ ಪರಿಪಾಲನೆಯ ಕ್ರಮವನ್ನು ಪ್ರತಿಪಾದಿಸುವ ದ್ರಾವಿಡವೇದಭಾಗ ಪ್ರಪನ್ನಜನಕೂಟಸ್ಥರಾದ ಶಠಕೋಪರ ಮೂಲಕವಾಗಿ ಹರಿಯುವ ಜಲದ ಸ್ವಭಾವತಾಳಿ ದ್ರಾವಿಡ ಭಾಷೆಯಲ್ಲಿ ರಚಿತವಾಗಿರುವುದರಿಂದ, ಪರಮೇಶ್ವರನ ಸಹಜವಾದ ವ್ಯಾಪಾರವನ್ನು ಪ್ರತಿಪಾದಿಸಿ ತನ್ಮೂಲಕ ಚೇತನರ ಉದ್ಧಾರಕ್ಕೆ ಏರ್ಪಟ್ಟಿರುವ ಸಿದ್ಧೋಪಾಯ ಕ್ರಮದ ರೀತಿಯ ಗೂಢತಮವಾದ ತತ್ತ್ವಸರಣಿಯನ್ನು ಶ್ರೀವಚನ ಭೂಷಣಂ ಗ್ರಂಥದಲ್ಲಿ ಪಿಳ್ಳೈಲೋಕಾಚಾರ್ಯರು ವರ್ಣಿಸಿರುತ್ತಾರೆ. ಆದ್ದರಿಂದ ಈ ಗ್ರಂಥಕ್ಕೆ 'ದಿವ್ಯಶಾಸ್ತ್ರ' ಎಂದು ಅತಿವಿಲಕ್ಷಣ ಹೆಸರನ್ನು ಕೊಡಲಾಗಿದೆ.

ಕೊನೆಯದಾಗಿ ಶ್ರೀವಚನಭೂಷಣದಲ್ಲಿ ಅರಿಸಿಕೊಂಡಿರುವ ವಿಷಯಗಳು ಪುರುಷಕಾರ, ಸಾಧನ, ಅಧಿಕಾರಿ, ಗುರುಸೇವೆ, ಹಂದಯೆ ಮತ್ತು ಗುರುವನ್ನು ಉಪಾಯವನ್ನಾಗಿ ಕಾಣಬೇಕಾದ ಅವಶ್ಯಕತೆ, ಈ ಆರು ಅಂಶಗಳೂ ಸುಸ್ಪಷ್ಟವಾಗಿ ವೇದ್ಯವಾಗುತ್ತವೆ. ಇವು ತತ್ತ್ವತ್ರಯ, ಅರ್ಥಪಂಚ ಮುಂತಾದ ತತ್ತ್ವ ಸಂಶೋಧಕರಿಗೆ ಅತಿಮುಖವಾದುದು. ಹಾಗೂ ಅಧ್ಯಾತ್ಮವೇತ್ತರ ಅತಾದರಣೆಗೆ ಪಾತ್ರವಾದ ವಿಷಯವಾಗಿ ಸ್ವಯಂನೂಗಳಾದವರಿಂದ ಮಾತ್ರ ತಿಳಿಯಬಹುದಾಗಿದೆ.

ವೇದದ ಉಪನಿಷತ್ ಭಾಗದಲ್ಲಿ ಚೇತನ ಚೇತನ ಪ್ರಪಂಚ ಪರಬ್ರಹ್ಮನಿಗೆ ಅನನ್ಯವಾದುದ ಮತ್ತು ಯಾವಾಗಲೂ ಪೃಥಕ್ ಆಗಿ ಇರಲಾರ ಸ್ವಭಾವವುಳ್ಳದ್ದು; ಎಂಬ ಅಂಶವನ್ನು ಕಾ ಬಹುದು. ತದನುಗುಣವಾಗಿ ಸೃಷ್ಟಿ ಪ್ರಸಂಗದ ಕಾರ್ಯವೂ, ಕಾರಣವೂ ಭಗವಂತನೇ ಎಂ ಹೇಳಿರುವುದರಿಂದ, ಎರಡು ಅವಸ್ಥೆಗಳಲ್ಲಿಯ ಭಗವಂತನೊಡನೆ ನೇರವಾಗಿ ಸೇರಿಕೊಂಡಿರು ಸಮಸ್ತ ವಸ್ತುಗಳೂ ಬೇರೆಯಾಗಿ ಇರಲಾರ ಎಂದಿಗೂ ತದಧೀನವಾದ ವಿನಿಯೋಗಕ್ಕೆ ಅ ವಾಗಿ ಪರತಂತ್ರರೂಪವಾದ ವಸ್ತು ಎಂಬುದನ ಶಾರೀರಕ ಮೀಮಾಂಸೆಯಲ್ಲಿ ವಿಷ್ಣುರೂಪಿಯಾ ಬಾದರಾಯಣರು 'ಆರಂಭಣಾಧಿಕರಣ'ದಲ್ಲಿ ಸ್ಪ ಪಡಿಸಿರುತ್ತಾರೆ ಇದರ ಪ್ರಕಾರ ಕಾರಣಾವ ಯಲ್ಲಿ ಈಶ್ವರಧರ್ಮವಾದ ಚೇತನನು ಅವ್ಯ ನಾಗಿರುತ್ತಾನೆ. ಕಾರ್ಯಾವಸ್ಥೆಯಲ್ಲಿ ಈಶ್ವರ ಅಂತರ್ಯಾಮಿಯಾಗಿ ಉಳಿದುಕೊಂಡು ಚೇತನ ವ್ಯಕ್ತವಾಗಿ ಕಾಣುತ್ತಾನೆ. ಮೋಕ್ಷಾವಸ್ಥೆಯ ವಿಶೇಷಣ ವಿಶೇಷ್ಯರೂಪವಾದ ಜೀವೇಶ್ವರರಿಬ್ಬರ ವ್ಯಕ್ತವಾಗಿ ಕಾಣುತ್ತಾರೆ. ಈ ಅಂಶಗಳ ತಿಳಿದರೆ ಕ್ಲೇಶಪರಿಹಾರಕ್ಕೆ ಅವಕಾಶ ಏರ್ಪ ತ್ತದೆ. ಈ ಪರಿಹಾರ ಕ್ರಮವನ್ನು ತಿಳಿಯಪಡಿ ವುದೇ ಶ್ರೀವಚನಭೂಷಣದಲ್ಲಿ ಕಾಣುವಕ್ರಮ.

ಶ್ರೀಮತೇ ರಾಮಾನುಜಾಯನಮಃ

(ಹಿಂದಿನ ಪುಟದಿಂದ)

ರೆದಳು. ಅವಳನ್ನು ಎಬ್ಬಿಸಿ, ಗದ್ಗದ ಕಂಠದಿಂದ ಕೌಂಡಿನ್ಯನು ಹೇಳಿದನು.

"ದೇವಿ! ನಿನ್ನದೇ ಆದ ಪ್ರಭಾವ, ಪ್ರಸಾದಗಳಿಂದ ನನಗೆ ಭಗವಂತನ ಅಪರೂಪವಾದ ದರ್ಶನ ಭಾಗ್ಯ ಪ್ರಾಪ್ತವಾಯಿತು. ನಾನು ಧನ್ಯನಾದೆ!"

ಕೌಂಡಿನ್ಯನ ಧನ-ವೈಭವಗಳು ಮೊದಲಿನಂತೆ ಪ್ರಾಪ್ತವಾಯಿತು, ಈಗ ಶೀಲಾಳ ಜೊತೆಯಲ್ಲಿಯೇ ಆತನೂ ಕೂಡ ಪ್ರತಿವರ್ಷ ಭಗವಾನ್ ಅನಂತನ ಪೂಜೆಯನ್ನು ವಿಧಿವಿಧಾನಗಳಿಂದ ಮಾಡತೊಡಗಿದನು.

ಈ ರೀತಿಯಲ್ಲಿ ಪರಿವರ್ತನೆಗೊಂಡ ಆತ 'ಕೌಂಡಿನ್ಯಗೋತ್ರ' ಎನ್ನುವುದರ ಗೋತ್ರ ಪ್ರವರ್ತಕನಾದನು. ನಂತರ ಕಾಲಾನುಕಾಲದಲ್ಲಿ ಈ ಮಹಾಯುಗದ ಪರ್ಯಾಯದಲ್ಲಿ ವ್ಯಾಸರಾದ ಕೃಷ್ಣ ದ್ವೈಪಾಯನನ ಪಟ್ಟಶಿಷ್ಯನಾದ, ತನ್ನ ಮಾವ ಸುಮುಸ್ತುವಿನ ನೇರ ಶಿಷ್ಯನಾದ. ಆತನ ಅನುಗ್ರಹದಿಂದ ಹಾಗೂ ಶೀಲಾಳ ಉಪದೇಶದಿಂದ ಉಪದೇಶ ಪಡೆದ. ಅಥರ್ವಣವೇದವನ್ನು ಪರಿಗ್ರಹಿಸಿ, ಮುಂದೆ ಅದರ ಪ್ರಚಾರ ಕಾರ್ಯವನ್ನು ಕೈಗೊಳ್ಳಲು ಕೌಂಡಿನ್ಯನು ಸಿದ್ಧನಾದ.

★ (ಆಧಾರಗಳಿಂದ)

(11ನೇ ಪುಟದಿಂದ)

ಹಿಂದೂಗಳ ಮತೀಯ ಚರಿತ್ರೆಯಲ್ಲಿ ದೇವಸ್ಥಾನಗಳು ಮತ್ತು ತೀರ್ಥಕ್ಷೇತ್ರಗಳು ಮುಖ್ಯಪಾತ್ರ ವಹಿಸಿವೆ. ಎಲ್ಲಾ ಮಠಾಚಾರ್ಯರೂ ಧರ್ಮ ದಿಗ್ವಿಜಯ ಯಾತ್ರೆಯನ್ನು ಮಾಡಿ ಪ್ರಾಚೀನ ದೇವಾಲಯಗಳ ಜೀರ್ಣೋದ್ಧಾರ ಮತ್ತು ಇನ್ನೂ ಅನೇಕ ದೇವತಾಕಾರ್ಯಗಳನ್ನೂ ಮಾಡಿ ಉಪಕರಿಸಿದ್ದಾರೆ. ಶಂಕರರು ಬದರೀನಾಥನನ್ನು ಪುನಃ ಪ್ರತಿಷ್ಠಾಪಿಸಿದರು. ಪೂಜಾಕ್ರಮಗಳಲ್ಲಿ ಬರುವ ತಪ್ಪುಗಳನ್ನು ಸರಿಮಾಡಿದರು. ಉಗ್ರಸ್ವರೂಪ ದೇವತೆಗಳನ್ನು ಸೌಮ್ಯಸ್ವರೂಪ ದೇವತೆಗಳನ್ನಾಗಿ ಮಾಡಿದರು. ರಾಮಾನುಜರು 'ಬೋಧಾಯನ ವೃತ್ತಿ' ಗ್ರಂಥದ ಅವಶ್ಯಕತೆಯ ಸಲುವಾಗಿ ಕಾಶ್ಮೀರಕ್ಕೆ ತೆರಳಿದರು. ಮೇಲುಕೋಟೆಯಲ್ಲಿ ತಿರುನಾರಾಯಣ ಮೂರ್ತಿಯನ್ನು ಪ್ರತಿಷ್ಠೆ ಮಾಡಿದರು. ಬಾದಶಹನ ಮಗಳು ಆಟಿಕ್ಕೆಂದು ಇಟ್ಟುಕೊಂಡಿದ್ದ 'ಶೆಲ್ವ ಪಿಳ್ಳೆಯನ್ನು' ಮೇಲುಕೋಟೆಗೆ ಮರಳಿ ತಂದರು. ವಿಷ್ಣುವರ್ಧನನ ನೆರವಿನಿಂದ ಬೇಲೂರು ತೊಂಡನೂರು ದೇವಾಲಯಗಳ ಜೀರ್ಣೋದ್ಧಾರವನ್ನೂ ಮಾಡಿದರು.

ರಾಜಾಸ್ಥಾನ

ಆಳರಸರ ಬೀಡಾದ ಭಾರತದಲ್ಲಿ ರಾಜ್ಯಗಳ ಸ್ಥಾಪನೆ, ಸಂಘಟನೆ ಪರಸ್ಪರ ಸ್ನೇಹ ಸೌಹಾರ್ದ ಶಾಂತಿಸ್ಥಾಪನೆ ಮತ್ತು ರಾಜರುಗಳಿಗೆ ಗುರುವಾಗಿ ಉಪಕರಿಸುವುದು ಆಚಾರ್ಯರ ಪಾತ್ರವಾಗಿತ್ತು. ಉದಾ: ವಿಜಯನಗರದ ಸಾಮ್ರಾಜ್ಯಸ್ಥಾಪನೆಯಲ್ಲಿ ಬುಕ್ಕರಾಯನ ಮಂತ್ರಿಯಾಗಿದ್ದ ವಿದ್ಯಾರಣ್ಯರು ಬಹಳ ಶ್ರಮಿಸಿದ್ದಾರೆ. 'ಕ ರ್ನಾ ಟ ಕ ಸಿಂಹಾಸನ ಸ್ಥಾಪನಾಚಾರ್ಯ' ಎಂಬ ಬಿರುದನ್ನು ನರಪತಿ ಇವರಿಗೆ ಕೊಟ್ಟು ಗೌರವಿಸಿದನು. ಇವರು 1377 ರಲ್ಲಿ ಶೃಂಗೇರಿ ಪೀಠಸ್ಥರಾದರು. ಶಿವಾಜಿ – ಸಮರ್ಥ ರಾಮದಾಸರು ಮತ್ತು ಸಾಮ್ರಾಟ್ ಅಳಿಯ ರಾಮರಾಯ – ಗುರುವಿಜಯೀಂದ್ರರು ಇತರ ಉದಾಹರಣೆಗಳು.

ಧರ್ಮಪ್ರಚಾರ ಎಲ್ಲಾಮತಗಳ ಮುಖ್ಯ ಕರ್ತವ್ಯವಾಗಿತ್ತು. ಆಚಾರ್ಯರು ತಮ್ಮ ಜೀವಿತ ಕಾಲವನ್ನು ಇದಕ್ಕೆ ಮುಡುಪಾಗಿಟ್ಟಿದ್ದಾರೆ. ಶಂಕರರು ನಾಲ್ಕು ಮಠಗಳನ್ನು ಸ್ಥಾಪನೆಮಾಡಿ ಅದ್ವೈತ ಸಿದ್ಧಾಂತ ಪ್ರಚಾರ ಮತ್ತು ವೇದಾಂತ ಶಾಸ್ತ್ರ ಪ್ರಸಾರಕ್ಕೆ ಶಾಶ್ವತವಾದ ವ್ಯವಸ್ಥೆಯನ್ನು ಮಾಡಿದರು. ಯತಿವರ್ಯರು ಅನೇಕ ಪ್ರಾಂತ್ಯಗಳಿಗೆ ಭೇಟಿ ಕೊಟ್ಟಾಗ ರಾಜನು ಸಕಲ ಮರ್ಯಾದೆಗಳೊಂದಿಗೆ ಎದುರುಗೊಂಡು ಆಸ್ಥಾನಕ್ಕೆ ಬರಮಾಡಿಕೊಂಡು ಸತ್ಕರಿಸುತ್ತಿದ್ದನು. ತರುವಾಯ ವಾದಸರಣಿ ಆರಂಭವಾಗುತ್ತಿತ್ತು. ಬೇರೆ ಮತಗಳ ದೋಷವನ್ನು ಎತ್ತಿ ಹಿಡಿದು ಸ್ವಮತ ನಿರೂಪಣೆ ಮಾಡಿ ತತ್ತ್ವದ ಹಿರಿಮೆಯನ್ನು ತೋರುವುದೇ ಈ ವಾದಗಳ ಮುಖ್ಯ ಗುರಿಯಾಗಿತ್ತು. ಉದಾ: ಅವೈದಿಕ ಮತಗಳು ತಲೆ ಎತ್ತದಂತೆ ಶಂಕರರು ಪ್ರಸ್ಥಾನತ್ರಯವನ್ನು ಉಪಯೋಗಿಸಿ ಭಾಷ್ಯವನ್ನು ರಚಿಸಿದರು. ಪ್ರತಿಸ್ಪರ್ಧಿಗಳು ಕ್ರಮೇಣ ಆಚಾರ್ಯರ ಶಿಷ್ಯರಾಗಿ ಉಳಿಯುತ್ತಿದ್ದರು. ಪದ್ಮಪಾದರು, ಮಂಡನ ಮಿಶ್ರರೂ (ಸುರೇಶ್ವರಾಚಾರ್ಯ) ಶಂಕರರ ಪ್ರಥಮ ಶಿಷ್ಯರಾದರು. ಶೋಭನ ಭಟ್ಟರು ಪದ್ಮನಾಭತೀರ್ಥರಾದರು. "ತಸ್ಯಯಥಾ ಕಪ್ಯಾಸಂ ಪುಂಡರೀಕಮೇವ ಮಕ್ಷಿಣೀ"–ಇದರ ವಾಕ್ಯಾರ್ಥದ ಮೇಲೆ ಗುರು ಶಿಷ್ಯರಲ್ಲಿ ವಾದವುಂಟಾಗಿ ಯಾದವ ಪ್ರಕಾಶರಿಗೆ ಸೋಲುಂಟಾಗಿ, ರಾಮಾನುಜರ ಜೀವನದಲ್ಲಿ ಹೊಸ ಅಧ್ಯಾಯ ಆರಂಭವಾಯಿತು. ಯಾದವ ಪ್ರಕಾಶರು ತಮ್ಮ ವೃದ್ಧಾಪ್ಯದಲ್ಲಿ "ಗೋವಿಂದ ಜೀಯರ್"ಎಂಬ ಹೆಸರಿನಲ್ಲಿ ರಾಮಾನುಜರ ಶಿಷ್ಯರಾದರು. ಗುರುಶಿಷ್ಯರ ಇಂತಹ ಪುನರ್ಮಿಲನ ಚರಿತ್ರೆಯಲ್ಲಿ ವಿರಳ. ವಿಜಯನಗರದ ಅರಸರ ಕಾಲದಲ್ಲಿ ದ್ವೈತಾದ್ವೈತಿಗಳ ವಾದದಲ್ಲಿ ತೀರ್ಪುಕೊಡಲು ವಿದ್ಯಾರಣ್ಯರು ದೇಶಿಕರಿಗೆ ಆಹ್ವಾನ ಕಳುಹಿಸಿದ್ದರು. ವಾದಗಳಲ್ಲಿ ಗೆದ್ದ ಆಚಾರ್ಯರಿಗೆ ರಾಜನು ಬಿರುದಾವಳಿಗಳನ್ನೂ ಪ್ರಶಸ್ತಿಗಳನ್ನೂ ಕೊಟ್ಟು ಗೌರವಿಸುತ್ತಿದ್ದನು. ಉದಾ: ತಂಜಾವೂರಿನ ನಾಯಕರು ಅಪ್ಪಯ್ಯ ದೀಕ್ಷಿತರಿಗೆ 'ವಾದಜಗಜಟ್ಟಿ' 'ಪ್ರಕಾಂಡ ಪಂಡಿತ' ಎಂಬ ಬಿರುದುಗಳನ್ನು ನೀಡಿದರು.

ಆಚಾರ್ಯರುಗಳ ಚರಿತ್ರೆಯಲ್ಲಿ ಅದ್ಭುತ ಪವಾಡಗಳು ಮಹಿಮಾ ಪ್ರದರ್ಶನಗಳು ಸಹಜವಾಗಿಯೇ ಇವೆ. ತಂಜಾವೂರಿನ ಚಿನ್ನಪ್ಪನಾಯಕನು ಇವುಗಳನ್ನು ಕುರಿತು ಪ್ರಶ್ನಿಸಿದಾಗ, ವಿಜಯೀಂದ್ರರು "ಇಂತಹ ಪವಾಡಗಳು ಜನರ ಮನಸ್ಸನ್ನು ಭಗವಂತನ ಕಡೆಗೆ ಪ್ರವಹಿಸುವುದಕ್ಕಾಗಿಯೇ ಹೊರತು ಬೇರೆನೂ ಅಲ್ಲ" ಎಂದು ಉತ್ತರ ಕೊಟ್ಟರು. ಶಂಕರರು ಮಂಡನಮಿಶ್ರರ ಪತ್ನಿಯ ಸವಾಲನ್ನು ಎದುರಿಸಿದ್ದು ಒಂದು ಪವಾಡವೇ. ಗುರುರಾಯರು ಆದವಾನಿ ನವಾಬನ ಮುಂದೆ ಮಾಡಿದ ಪವಾಡ ಮತ್ತೊಂದು ಉದಾಹರಣೆ.

ಈ ಮಹಾನ್ವ್ಯಕ್ತಿಗಳ ವ್ಯಕ್ತಿತ್ವಗಳು ಹಿಮಾಲಯ ಶಿಖರದಂತೆ ಇವೆ. ಅವರ ಕೃಪೆ ಕಟಾಕ್ಷ ಅಳತೆಗೆ ಮೀರಿದ್ದು. ರಾಮಾನುಜರು ತಮ್ಮ ಹೃದಯ ವೈಶಾಲ್ಯದಿಂದ ಗುರುವಾಜ್ಞೆಯನ್ನು ಪಾಲಿಸದೆ ತಮಗೆ ಬರುವ ಕೇಡುಕನ್ನೂ ಲೆಕ್ಕಿಸದೆ ತಿರುಮಂತ್ರವನ್ನು ಸಾರಿದುದನ್ನು ಗೋಷ್ಠೀಪುರದ ವೃತ್ತಾಂತದಿಂದ ತಿಳಿಯಬಹುದು. ಸರ್ವತಂತ್ರ ಸ್ವತಂತ್ರರಾದ ದೇಶಿಕರು ಎಲ್ಲರೀತಿಯ ವಿರೋಧಿಗಳನ್ನು ಎದುರಿಸಿದ್ದಾರೆ. ಮಲ್ಲಿಕ್‌ಕಾಫರನ ಧಾಳಿಯಲ್ಲಿ ರಂಗನಾಥಸ್ವಾಮಿಯನ್ನು ಸ್ಥಳಾಂತರಿಸಿ ಗರ್ಭಗುಡಿಗೆ ಗೋಡೆಯನ್ನು ಕಟ್ಟಿ 'ಶ್ರುತಪ್ರಕಾಶಿಕಾ' ಗ್ರಂಥವನ್ನು ರಕ್ಷಿಸಿ ಮಹದುಪಕಾರ ಮಾಡಿದ್ದಾರೆ.

ಮೈಸೂರು ಅರಸರು ಆಚಾರ್ಯರು

ಕನ್ನಡ ನಾಡು ತ್ರಿಮತಸ್ಥರಿಗೂ ಆಶ್ರಯವಿತ್ತ ಪುಣ್ಯಭೂಮಿ. ಕಪ್ಪೆಯು ಹಾವಿನ ಆಶ್ರಯದಲ್ಲಿದ್ದುದನ್ನು ಕಂಡು "ಇದು ಪವಿತ್ರಸ್ಥಳ" ಎಂದು ಶಂಕರರು ಶೃಂಗೇರಿಯನ್ನು ಶಾರದಾಪೀಠಕ್ಕೆ ಆಯ್ಕೆ ಮಾಡಿಕೊಂಡರು. ಬ್ರಿಟಿಷರು ಮತ್ತು ಮೊಗಲರು ಮುಟ್ಟದ ಕ್ಷೇತ್ರ ಶೃಂಗೇರಿ. ರಾಮಾನುಜರು 12 ವರ್ಷಗಳ ಕಾಲ ಮೇಲುಕೋಟೆಯಲ್ಲಿ ನೆಲೆಸಿದ್ದು ಶ್ರೀವೈಷ್ಣವ ಧರ್ಮವನ್ನು ಪ್ರಚಾರ ಮಾಡಿದರು. ಮ್ಲೇಚರ ಹಾವಳಿಯಿಂದ ಪಾರಾಗಿ ದೇಶಿಕರು ಕರ್ನಾಟಕಕ್ಕೆ ಕಾಲಿಟ್ಟರು. ದೇಶಿಕರ ಶಿಷ್ಯರಾದ ಒಂದನೇ ಬ್ರಹ್ಮತಂತ್ರ ಸ್ವಾಮಿಗಳು ತಿರುಪತಿಯಲ್ಲಿ ಶ್ರೀಮಠವನ್ನು ಮೈಸೂರು ರಾಜವಂಶದ ಗುರುಮನೆಯಾಗಿಯೂ ಮತ್ತು ಯದುರಾಯರನ್ನು ಶಿಷ್ಯನನ್ನಾಗಿ ಅಂಗೀಕರಿಸಿ ನಿಕಟ ಸಂಪರ್ಕವನ್ನುಂಟುಮಾಡಿ ಒಂದು ಭವ್ಯ ಇತಿಹಾಸವನ್ನೇ ಪ್ರಾರಂಭಮಾಡಿದರು. "ಆಚಾರಃ ಪ್ರಥಮೋ ಧರ್ಮಃ" ಎಂಬ ಸತ್ಸಂಪ್ರದಾಯದಂತೆ ಪಟ್ಟಾಭಿಷೇಕ, ವರ್ಧಂತಿ, ದಸರ ಮತ್ತು ಇತರ ಶುಭ ಕಾರ್ಯಗಳಿಗೆ ಮುಂಚಿತವಾಗಿ ಅರಸರು ಶ್ರೀಪಾದಪೂಜೆಯನ್ನು ನೆರವೇರಿಸಿ ಫಲಮಂತ್ರಾಕ್ಷತೆ, ಮತ್ತು ಆಶೀರ್ವಾದವನ್ನು ಪಡೆಯುತ್ತಿದ್ದರು. ಪಟ್ಟಾಭಿಷೇಕವು ಶ್ರೀ ಶ್ರೀಗಳ ಸಮಕ್ಷಮದಲ್ಲೇ ನೆರವೇರುತ್ತಿತ್ತು. ಶ್ರೀಮಠಕ್ಕೆ ಅರಸರೇ ಸ್ವಾಮಿಗಳನ್ನು ನೇಮಕಮಾಡುತ್ತಿದ್ದರು. ಗುರುಗಳ ಅಭೀಷ್ಟದಂತೆ ಧಾರ್ಮಿಕ ಕಾರ್ಯಗಳನ್ನು ಅರಸರು ಶಿರಸಾವಹಿಸಿ ಮಾಡುತ್ತಿದ್ದರು ಉದಾ: "ರಾಜಪರಿವಾರದವರೆಲ್ಲರೂ ಶ್ರೀಮಠದ ಶಿಷ್ಯರಾಗಬೇಕೆಂದು" ವೀರ ನರಪತಿ ಚಿಕ್ಕದೇವರಾಜ ಒಡೆಯರು ಆಜ್ಞೆಮಾಡಿದರು. ಮೇಲುಕೋಟೆಯಲ್ಲಿ ಕಲ್ಯಾಣಿ ಕೊಳ ಮತ್ತು ಭುವನೇಶ್ವರಿ ಮಂಟಪವನ್ನು ನಿರ್ಮಾಣ ಮಾಡಿದರು. ಘಂಟಾವತಾರ ಸ್ವಾಮಿಗಳ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ದೇವಸ್ಥಾನಗಳ ಜೀರ್ಣೋದ್ಧಾರ ಪೂಜಾವಿಧಿಗಳು ಮತ್ತು ಇನ್ನೂ ಅನೇಕ ಸುಧಾರಣೆಗಳನ್ನು ಜಾರಿಗೆ ತಂದರು. ಬ್ರಿಟಿಷರಿಗೆ ಮತ್ತು ಮೊಗಲರಿಗೆ ಮೈಸೂರು ಅರಸರ ಬಗ್ಗೆ ಒಳ್ಳೆಯ ಅಭಿಪ್ರಾಯವಿತ್ತು, ಪರೀಪರಕಾಲ ಸ್ವಾಮಿಗಳು ತಮ್ಮ ಉತ್ತರ ಭಾರತ ಪ್ರವಾಸದಲ್ಲಿ ಆಕಸ್ಮಾತ್ತಾಗಿ ಔರಂಗ್

ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯ

ಮಂಗಾಪುರ.

ಶ್ರೀ ವೆಂಕಟೇಶ್ವರಸ್ವಾಮಿ ಪದ್ಮಾವತಿಯನ್ನು ವಿವಾಹವಾದ ಬಳಿಕ ತಿರುಮಲೆಗೆ ಆಗಮಿಸುವ ಮುನ್ನ ಆರುತಿಂಗಳಕಾಲ ತಂಗಿದ್ದ ಸ್ಥಳ. ತಿರುಮಲೆಯಲ್ಲಿನ ಧ್ರುವಮೂರ್ತಿಗಿಂತ 2 ಅಡಿ ಹೆಚ್ಚು ಎತ್ತರದ ಧ್ರುವಮೂರ್ತಿ ಇಲ್ಲಿದ್ದು, ಈ ಗುಡಿಯನ್ನು ಹಾದು ತಿರುಮಲೆಗೆ ಮೆಟ್ಟಿಲ ಮೂಲಕ ಏರಬಹುದು. ತಿರುಪತಿ-ಮದನಪಲ್ಲಿ ರಸ್ತೆಯಲ್ಲಿ ತಿರುಪತಿಯಿಂದ ಆರು ಮೈಲಿದೂರದ ಶ್ರೀನಿವಾಸ ಮಂಗಾಪುರಕ್ಕೆ ಚಂದ್ರಗಿರಿ ಹಾಗೂ ತಿರುಪತಿಗಳಿಂದ ಬಸ್ ಸೌಕರ್ಯವಿದೆ.

ದರ್ಶನ ಹಾಗೂ ಸೇವಾ ವಿವರಗಳು

	ಭಾನು, ಸೋಮ, ಮಂಗಳ, ಬುಧ, ಗುರು ಹಾಗೂ ಶನಿವಾರಗಳ ಕಾರ್ಯಕ್ರಮ.		ಶುಕ್ರವಾರಗಳಲ್ಲಿ	
ಸುಪ್ರಭಾತ	ಪ್ರಾ 5–00	ಪ್ರಾ 5–30	ಪ್ರಾ 5–00	ಪ್ರಾ 5–30
ವಿಶ್ವರೂಪ ಸರ್ವದರ್ಶನ	ಪ್ರಾ 5–30	ಪ್ರಾ 6–00	ಪ್ರಾ 5–30	ಪ್ರಾ 6–00
ತೋಮಾಲ, ಕೊಲುವು ಪಂಚಾಂಗಶ್ರವಣ	ಪ್ರಾ 6–00	ಪ್ರಾ 6–30	ಪ್ರಾ 6–00	ಪ್ರಾ 6–30
ಸಹಸ್ರನಾಮಾರ್ಚನೆ	ಪ್ರಾ 6–30	ಪ್ರಾ 7–00	ಪ್ರಾ 6–30	ಪ್ರಾ 7–00
ಮೊದಲನೇ ಗಂಟೆ	ಪ್ರಾ 7–00	ಪ್ರಾ 7–30	ಪ್ರಾ 7–00	ಪ್ರಾ 7–30
ಸರ್ವದರ್ಶನ	ಪ್ರಾ 7–30	ಪ್ರಾ 10–00	*ಅಭಿಷೇಕ ಪ್ರಾ 7–30	ಪ್ರಾ 8–30
			ಸಮರ್ಪಣ ಪ್ರಾ 8–30	ಪ್ರಾ 9–30
2ನೇ ಅರ್ಚನೆ				
2ನೇ ಗಂಟೆ	ಪ್ರಾ 10–00	ಪ್ರಾ 10–30	ಪ್ರಾ 9–30	ಪ್ರಾ 10–30
*ಆರ್ಜಿತ ಕಲ್ಯಾಣೋತ್ಸವ			ಪ್ರಾ 10–30	ಮ 12–00
ಸರ್ವದರ್ಶನ	ಪ್ರಾ 10–30	ಸಂ 6–30	ಪ್ರಾ 10–30	ಸಂ 6–30
ರಾತ್ರಿ ಕೈಂಕರ್ಯ				
ರಾತ್ರಿ ಗಂಟೆ	ಸಂ 6–30	ರಾ 7–00	ಸಂ 6–30	ರಾ 7–00
ಸರ್ವದರ್ಶನ	ರಾ 7–00	ರಾ 8–45	ರಾ 7–00	ರಾ 8–45
ಏಕಾಂತ ಸೇವೆ	ರಾ 8–45	ರಾ 9–00	ರಾ 8–45	ರಾ 9–00

*ಆರ್ಜಿತ ಕಲ್ಯಾಣೋತ್ಸವ ಶುಲ್ಕ	ರೂ – 150=00
*ಅಭಿಷೇಕ (ಶುಕ್ರವಾರಗಳಲ್ಲಿ) ಶುಲ್ಕ	ರೂ – 100=00
ಅರ್ಚನೆ	ರೂ – 3=00
ಆರತಿ	ರೂ – 1=00
ತೆಂಗಿನಕಾಯಿ ವರ್ತನೆ	ರೂ – 0=50
ಅಭಿಷೇಕಾನಂತರ ದರ್ಶನ	ರೂ – 3=00

ಜೀವನ ಗಮನವನ್ನು ಸೆಳೆದರು. ಇವರ ತೇಜಸ್ಸು ಪಾಂಡಿತ್ಯ ಮತ್ತು ವಾಕ್ಚಾತುರ್ಯಗಳಿಗೆ ಮೆಚ್ಚಿ ಅವರ ಇಷ್ಟದಂತೆ ದಕ್ಷಿಣದೇಶದ ವಿಷ್ಣು ದೇವಾಲಯಗಳ ಅಭಿವೃದ್ಧಿಗೆ ಸಹಾಯ ಮಾಡಲು ಒಪ್ಪಿ ಶ್ರೀಮಠಕ್ಕೆ 'ನೌಬತ್' ನಗಾರಿಯನ್ನು ಬಳುವಳಿಯಾಗಿ ಕೊಟ್ಟನು. ಈ ಸ್ವಾಮಿಗಳಿಂದಲೇ ಶ್ರೀ ಮಠಕ್ಕೆ 'ಪರಕಾಲ' ಎಂದು ಹೆಸರು ಬಂತು.

ಈಗೇನು

ನಮ್ಮದು ಧರ್ಮದೇಶ. ಆದರೆ, ಧರ್ಮಸ್ವರೂಪವು ಸಂಕುಚಿತ ಗೊಂಡಿದೆ. 'ಧರ್ಮ' ಎಂಬ ಪದಕ್ಕೆ ಇನ್ನೂ ವಿಶಾಲಾತ್ಮಕವಾದ ವಿವರಣೆ ಕಂಡು ಬರಬೇಕಾಗಿದೆ. ಅನೇಕ ಧರ್ಮಾಚಾರ್ಯರುಗಳ ಸದ್ಬೋಧನೆ ಇದ್ದರೂ ನಮ್ಮ ದೇಶ ಜಾತಿ ಕೋಮುವಾರು ಸಮಸ್ಯೆಗಳಿಂದ ನರಳುತ್ತಲೇ ಇದೆ. ಜೀವನದ ಮೌಲ್ಯದ ಬಗ್ಗೆ ಗಮನವಿಲ್ಲದಿರುವುದೇ ನಮ್ಮ ಸಂಕಷ್ಟಗಳಿಗೆ ಕಾರಣ. ಧಾರ್ಮಿಕ ಮೌಲ್ಯವನ್ನು ಒಪ್ಪದ ಸಮಾಜ ಕ್ರಮೇಣ ಭ್ರಷ್ಟತನಕ್ಕೆ ಇಳಿಯುವುದು. ಇದರಿಂದ ಅರಾಜಕತೆ ತಲೆಎತ್ತಿ ಜನರು ಬಲಾಢ್ಯರ ಗುಂಪುಗುಳಿತನಕ್ಕೆ ಬಲಿಯಾಗುವರು. ಆದ್ದರಿಂದ ಭಕ್ತಿಯುತವಾದ ಆದರ್ಶ ಗುಣಗಳನ್ನು ಬೆಳೆಸಿಕೊಳ್ಳಬೇಕೆನ್ನುವುದೇ ಧರ್ಮ ಗುರುಗಳ ಸದ್ಬೋಧನೆಯಾಗಿದೆ. ಭಕ್ತಿ ದೊಡ್ಡದೇ ಹೊರತು ಜಾತಿ, ಮತ, ಆಶ್ರಮ ಮಠ ದೊಡ್ಡದಲ್ಲ ಇದನ್ನು ಎಲ್ಲರೂ ಒಪ್ಪುವರು. ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶಾವಕಾಶವನ್ನು ಮಾಡಿ ಸಕಲ ಜಾತಿಗಳನ್ನು ಹಿಂದೂ ಧರ್ಮದಡಿಯಲ್ಲಿ ಸೇರಿಸಿಲು ರಾಮಾನುಜರು ಶ್ರಮಿಸಲಿಲ್ಲವೇ! ಸಂಪ್ರದಾಯಗಳ ವಿರುದ್ಧ ಹೋರಾಡಿದ ಭಕ್ತಿ ಭಂಡಾರಿ ಬಸವಣ್ಣನವರ ಆದರ್ಶಗಳನ್ನು ಇಂದಿನ ಪರಿಸ್ಥಿತಿಗೆ ಸಮರ್ಪಕವಾಗಿ ಅನ್ವಯಿಸಿಕೊಳ್ಳಬಹುದು. ಯುವಜನಾಂಗಕ್ಕೆ ಸ್ವಾಮಿ ವಿವೇಕಾನಂದರ 'ಶಕ್ತಿವೇಂದಾಂತವು' ಎಂದೆಂದೂ ಸ್ಫೂರ್ತಿದಾಯಕವಾಗಿದೆ. ಆದ್ದರಿಂದ ಈ ಎಲ್ಲ ಧುರೀಣರ ಸದ್ಬೋದನೆಗಳನ್ನು ತಳಹದಿಯಾಗಿಟ್ಟುಕೊಂಡು ಸ್ವೈಜಜ್ಞಾನವನ್ನು ಹೊಂದಿ ಸದ್ವಿದ್ಯೆಯನ್ನೇ ಕಲಿತು ಮಾನವೀಯತೆಯನ್ನು ಮರೆಯದೆ 'ಸರ್ವೇಜನಾಃ ಸುಖಿನೋಭವಂತು' ಎಂಬ ವಿವೇಕಯುತವಾದ ಹಾದಿಯಲ್ಲಿ ನಾವು ಮುಂದುವರಿಯ ಬೇಕು.

ಇಂತಹ ಮಹಾನುಭಾವರು ಮಾನವ ಜನಾಂಗದಲ್ಲಿ ಜನ್ಮವೆತ್ತಿರುವುದು ನಮ್ಮೆಲ್ಲರ ಪುಣ್ಯ. ಸಂಸ್ಕೃತಿಯ ಉಳಿವಿಕೆಗಾಗಿ ಜನತೆಯ ಆಧ್ಯಾತ್ಮಿಕ ಧಾರ್ಮಿಕ ಹಾಗೂ ಸಾಮಾಜಿಕ ಉನ್ನತಿಗಾಗಿ ಈ ಮಹಾಪುರುಷರು ಸರ್ವತ್ಯಾಗ ಮಾಡಿ ಇತಿಹಾಸದಲ್ಲಿ ಶಾಶ್ವತವಾಗಿರುತ್ತಾರೆ.



ಭಾಗವತಾಮೃತದ ಒಂದು ಹನಿ

ಶ್ರೀಮದ್ಭಾಗವತ ಮಹಾಪುರಾಣ ಭಕ್ತಿಯಗಣಿ; ಜ್ಞಾನಾಮೃತದ ತಿಳಿಗೊಳ. ಇಲ್ಲಿ ನಿರೂಪಿತವಾಗಿರುವ ಭಕ್ತಿಭಾವ ಆಳವಾದದ್ದು. ಭಗವಂತನ ಧ್ಯಾನವೇ ಬದುಕಿನ ಪರಮಗುರಿ; ಹೊಟ್ಟೆಪಾಡಿಗಾಗಿ ಯಾವ ಕೆಲಸ ಮಾಡಿದರೂ ಇದನ್ನೇ ದೇವಪೂಜೆ ಎಂದು ಆದರಿಸುವುದೂ, ಪರಮಾತ್ಮ ಕೊಟ್ಟಿದ್ದನ್ನು ತೃಪ್ತಿಯಿಂದ ಅನುಭವಿಸುವುದೂ ಒಂದು ಕಲೆ.

ಭಾಗವತದ ಶ್ಲೋಕಗಳು ನುಡಿಮುತ್ತುಗಳು. ಅನುಭವದ ಅಮೃತ ಬಿಂದುಗಳು. ಭಗವಂತ ಒಲಿಯುವುದು ಎಂತಹವರಿಗೆ? ಏನೇ ಮಾಡಲಿ ಅದನ್ನು ಅವನಿಗೆ ಅದನ್ನರ್ಪಿಸುವ ದೃಢನಂಬಿಕೆ ಇರುವವರಿಗೆ. ಉಳಿದೆಲ್ಲಾ ಈ ನಂಬಿಕೆಗಾಗಿ ಪೂರ್ವಸಿದ್ಧತೆಗಳಷ್ಟೇ ಆಗಿದೆ. ದ್ವಿತೀಯಸ್ಕಂಧದ ಇದನ್ನು ನೋಡಿ.

ತಪಸ್ವಿನೋ ದಾನಪರಾ ಯಶಸ್ವಿನೋ
ಮನಸ್ವಿನೋ ಮಂತ್ರವಿದಃ
ಸುಮಂಗಲಾಃ
ಕ್ಷೇಮಂ ನವಿಂದಂತಿ ವಿನಾ ಯದರ್ಪಣಂ
ತಸ್ಮೈ ಸುಭದ್ರಶ್ರವಸೇ ನಮೋ ನಮಃ

(ತಪವಗೈದರು ದಾನ ಮಾಡಿದರು ಕೂಡ
ಕೀರ್ತಿಗಳಿಸಿ ಮಂತ್ರಾರ್ಥ
ಅರಿತರೂ ಕೂಡ
ಸಜ್ಜನಿಕೆ ಇದ್ದರೂ ಯಾರಿಗರ್ಪಿಸದೇ
ಕ್ಷೇಮ ಸಿಗುವುದಸಾಧ್ಯವೋ ಅಂಥ
ಮಂಗಳಾತ್ಮಕ ದೇವನವನಿಗೆ ನಮನ)

ಇಂತಹ ಅರ್ಪಣಾ ಮನೋಭಾವವೇ ಭಕ್ತಿಯ ಪರಾಕಾಷ್ಠೆ. ಇಲ್ಲಿ 'ನನ್ನದು' ಎನ್ನುವದು ಏನೂ ಇಲ್ಲ. ಎಲ್ಲರೊಳಗೆ ನಿಂತುಮಾಡಿ ಮಾಡಿಸುವ ಆ ಭಗವಂತನ ಧ್ಯಾನ ಸುಲಭಸಾಧ್ಯವೂ ಅಲ್ಲ. ಅದು ಮೊದಲು ಭಗವಂತನ ಪರಮಸುಂದರ ವಿಗ್ರಹವನ್ನು ಮನದಲ್ಲಿಯೇ ನಿಲ್ಲಿಸಿಕೊಳ್ಳುವುದರಿಂದ ಪ್ರಾರಂಭವಾಗುತ್ತದೆ. ಪರಮಾತ್ಮ ಎಲ್ಲ ಉತ್ತಮಗುಣಗಳ ಸಾರ; ಅವನದೆಲ್ಲವೂ ಸುಂದರ. ಅದರ ನೆನಪೇ ಮನದ ಕತ್ತಲೆಯನ್ನು ಹೊಡೆದೋಡಿಸುವ ಹೊಂಬೆಳಕು.

ಭಾಗವತದಲ್ಲಿ ಒಂದು ಧ್ಯಾನಶ್ಲೋಕವಿದೆ, ತೃತೀಯಸ್ಕಂಧದಲ್ಲಿ:-

ಸಂಚಿಂತಯೇದ್ ಭಗವತಃ
ಚರಣಾರವಿಂದಂ
ವಜ್ರಾಂಕುಶಧ್ವಜ
ಸರೋರುಹಲಾಂಛನಾಢ್ಯಂ
ಉತ್ತುಂಗ ರಕ್ತವಿಲಸನ್ನಖಚಕ್ರವಾಲ-
ಜ್ಯೋತ್ಸ್ನಾಭಿರಾಹತ ಮಹತ್
ಹೃದಯಾಂಧಕಾರಮ್ ॥

(ಭಗವಂತನಡಿದಾವರೆಯ
ಸ್ಮರಿಸುತಿರಬೇಕು
ವಜ್ರ-ಧ್ವಜ-ಅಂಕುಶ-ಕಮಲ
ಚಿನ್ಹದಿ ಲಸಿತ
ಎತ್ತರದ ಕಡುಗೆಂಪಿನುಗುರುಗಳ ಕಾಂತಿ
ಮನದ ಕಡುಗತ್ತಲೆಯ ಹೊಡೆ-
ದೋಡಿಸುವ ಚಂದ್ರಕಾಂತಿ ॥

ಭಗವಂತನ ಪಾದಗಳು ತಾವರೆಯಂತೆ ಕೋಮಲ. ಅದರ ಉಗುರುಗಳ ಕಾಂತಿಯನ್ನು ನೆನೆಸಿಕೊಂಡರೆ ಸಾಕು; ಮನದೊಳಗೆ ಮೂಲೆ ಮೂಲೆಗಳಲ್ಲಿ ಅಡಗಿ ಕುಳಿತಿರುವ ಕತ್ತಲೆಯನ್ನು ಅದು ಹೊಡೆದಟ್ಟುತ್ತದೆ. ಈ ಬೆಳದಿಂಗಳಲ್ಲಿ ಅಜ್ಞಾನಕ್ಕೆ ಅವಕಾಶವೇ ಇಲ್ಲ. ಪರಮಾತ್ಮನ ಪ್ರತಿಯೊಂದು ಅವಯವವೂ- ಒಂದು ಉಗುರಿನ ಕೊನೆಯೂ ಪರಿಪೂರ್ಣ; ಸಕ್ಕರೆಯ ಬೊಂಬೆಯ ಹಾಗೆ, ಸಂಪೂರ್ಣ ಮಧುರ.

ಭಗವಂತನನ್ನೊಲಿಸುವುದು ಏಕೆ? ಸಣ್ಣ-ಪುಟ್ಟ ಐಹಿಕ ಸುಖ ಭೋಗಗಳನ್ನು ಪಡೆಯುವದಕ್ಕಾಗಿಯೆ? ಈ ಸಂಸಾರದ ಹೊನ್ನ ಸಂಕೋಲೆಯಲ್ಲಿ ಮತ್ತೆ ಮತ್ತೆ ಸಿಲುಕಿ ಬಳಲಿ ದುಃಖಪಡೆಯುವುದಕ್ಕಾಗಿಯೇ? ಆ ಪರಮಾತ್ಮನಿಗೆ ಯಾರಿಗೆ

ಶ್ರೀ ಟಿ. ಎಸ್. ಪದ್ಮನಾಭರಾವ್

ಪ್ರಾಣಿ ಪಕ್ಷಿ ಬಲಿಯ ನಿಷೇಧ ಕಾನೂನು

ಆಂಧ್ರಪ್ರದೇಶದ 1950 ರ ಪ್ರಾಣಿ ಪಕ್ಷಿ ಬಲಿ ನಿಷೇಧ ಕಾನೂನಿನ [illegible]ನೇ ಕಲಮಿನನ್ವಯ ಯಾವುದೇ ವ್ಯಕ್ತಿಯೂ ಸಾರ್ವಜನಿಕ ಆರಾಧನೆಯ ಸ್ಥಳಗಳಲ್ಲಿ, ಧಾರ್ಮಿಕ ಆರಾಧನೆಯ ಸ್ಥಳಗಳಲ್ಲಿ ಅಥವಾ ಯಾವುದೇ ಧಾರ್ಮಿಕ ಮೇಳ ಮೆರವಣಿಗೆಗಳಲ್ಲಿ ಯಾಗಲೀ ಪ್ರಾಣಿ ಪಕ್ಷಿಗಳನ್ನು ಬಲಿ ನೀಡುವುದನ್ನು ನಿಷೇಧಿಸಲಾಗಿದ್ದು, ಅದೇ ಕಾನೂನಿನ 6 ನೇ ಕಲಮಿನನ್ವಯ ಈ ನಿಯಮವನ್ನುಲ್ಲಂಘಿಸಿದವರಿಗೆ ಮೂರು ತಿಂಗಳಿನಿಂದ ಐದು ತಿಂಗಳ ಸಾದಾಸಜೆ ಅಥವಾ ಮುನ್ನೂರು ರೂಗಳ ದಂಡ ಅಥವಾ ಎರಡನ್ನೂ ವಿಧಿಸಲಾಗುವುದು. ಹಾಗಾಗಿ ಪ್ರಾಣಿ ಪಕ್ಷಿ ಬಲಿಯನ್ನು ಕೋಳಿಜಗಳಗಳನ್ನು ತಡೆಯಲು ಕೈಗೊಳ್ಳತಕ್ಕದ್ದು.

ಜಿಲ್ಲಾಧಿಕಾರಿಗಳು ಹಬ್ಬ, ಉತ್ಸವಗಳಿಗೆ ಮೊದಲು ಅಧಿಕಾರಿ ಹಾಗೂ ಸಾರ್ವಜನಿಕರ ಸಭೆಗಳನ್ನು ಏರ್ಪಡಿಸಿ, ಪ್ರಾಣಿ ಪಕ್ಷಿ ಬಲಿಗಳನ್ನು ತಡೆಯಲು ಕ್ರಮಗಳನ್ನು ಕೈಗೊಳ್ಳಬೇಕೆಂದು ಬೇಡಲಾಗಿದೆ.

ಹನುಮಂತರಾವ್
ಸರ್ಕಾರದ ಉಪಕಾರ್ಯದರ್ಶಿ, ಆಂಧ್ರಪ್ರದೇಶ.

ಯಾವಾಗ ಏನು ಫಲ ಕೊಡಬೇಕೆಂದು ಗೊತ್ತಿದೆ. ಅವನ ವ್ಯವಸ್ಥೆಯೆಲ್ಲವೂ ಪೂರ್ವನಿಯೋಜಿತ.

ತಸ್ಮಿನ್ ಪ್ರಸನ್ನೇ ಸಕಲಾಶಿಷಾಂ ಪತೌ
ಕಿಂ ದುರ್ಲಭಂ ತಾಭಿರಲಂ
ಲವಾತ್ಮಭಿಃ
ಅನನ್ಯ ಭಕ್ತ್ಯಾ ಭಜತಾಂ ಗುಹಾಶಯಃ
ಸ್ವಯಂ ವಿಧತ್ತೇ ಸ್ವಗತಿಂ ಪರಃ
ಪರಾಮ್॥

(ಎಲ್ಲ ಹಿಳಿತುಗಳೊಡೆಯು ಆತನೊಲಿದಿರಲು
ಸಣ್ಣವರ ಮಾತೇಕೆ ಸಿಗದಿದ್ದುದಿನ್ನೇನು
ಎಲ್ಲರೊಳಗಿರುವವನ ಭಕ್ತಿಯಿಂ
ಭಜಿಸಲು
ತನಗೆ ತಾನೇ ಕೊಡುವ ಮುಕುತಿಪದವ)
(ಭಾ. ತೃತೀಯಸ್ಕಂಧ)

ಆ ಪರಮಾತ್ಮನ ಕೃಪೆಯ ಕಡೆಗಣ್ಣೋಟ ನಮ್ಮ ಕಡೆ ಬಿದ್ದರೆ ಸಾಕು, ಇನ್ನೇನು ಬೇಕಾಗಿದೆ? ಸಣ್ಣ-ಪುಟ್ಟ ಶಕ್ತಿಯುಳ್ಳವರನ್ನು ಆಶ್ರಯಿಸಿದರೇನು ಪ್ರಯೋಜನ? ಇದಕ್ಕಾಗಿ ಎಲ್ಲೂ ಹೊರಗೆ ಅಲೆಯಬೇಕಾಗಿಲ್ಲ. ಎಲ್ಲರೊಳಗೂ ಹೃದಯ ಗುಹೆಯಲ್ಲಿ ನೆಲೆಸಿರುವ ಆ ಭಗವಂತನನ್ನು ಎಡಬಿಡದೆ ಧ್ಯಾನಿಸಿದರೆ ಸಾಕು; ತನ್ನನ್ನೇ ಕೊಟ್ಟು ಬಿಡುವ ಪರಮಕರುಣಾಶಾಲಿ ಅವನು.

ದ್ವಿತೀಯಸ್ಕಂಧದ ಇನ್ನೊಂದು ಸಾ[illegible] ರೂಪ ಶ್ಲೋಕ:

ಯೇಷಾಂ ಸ ಏವ ಭಗವಾನ್
ದಯಯೇದನಂತಃ
ಸರ್ವಾತ್ಮನಾ ಶ್ರಿತಧಿಯೋ
ಯದಿ ನಿರ್ವ್ಯಲೀಕ[illegible]
ಯೇವೈ ವಿದಂತ್ಯತಿ ತರಂತಿ ಚ
ದೈವ ಮಾಯಾ[illegible]
ನೈಷಾ ಮಮಾಹಮಿತಿ ಧೀಃ
ಶ್ವಶೃಗಾಲಭಕ್ಷ್ಯೇ[illegible]

(ಎಣೆಯಿಲ್ಲದಾತನು ಒಲಿಯುವನು ತಾನ
ಎಡಬಿಡದೆ ನಿರ್ವ್ಯಾಜಪ್ರೇಮವಿರುವವರಿ[illegible]
ಆ ದೈವಮಾಯೆಯಾ ಆಳವನು
ತಿಳಿದು ದಾ[illegible]
ನಾಯಿ ನರಿ ತಿನ್ನುವೀದೇಹ ನನದಲ್ಲ-
ನಾನಿದ[illegible]
ಎಂದು ತಿಳಿದವರಿಗೆ ಸಂದೇಹವಿಲ್ಲದೆ)

ಸಂಸಾರ ಕ್ಲೇಶಗಳಿಂದ ಬಳಲಿದ ಬೆಂ[illegible] ಮನಗಳಿಗೆ ತಂಪೆರೆಯುವ ಈ ನುಡಿಗಳೆಷ್ಟೊ ಆಹ್ಲಾದಕರ; ಆದ್ದರಿಂದಲೇ-

ನಿಗಮಕಲ್ಪತರೋರ್ಗಳಿತಂ ಫಲಂ
ಶುಕಮುಖಾದಮೃತದ್ರವ ಸಂಯುತಂ
ಪಿಬತ ಭಾಗವತಂ ರಸಮಾಲಯಂ
ಮುಹುರಹೋ ರಸಿಕಾ ಭುವಿ ಭಾವುಕಾ[illegible]

(ಈ ಭುವಿಯ ಭಾವುಕರೆ, ರಸಿಕರೆ
ಭಾಗವತವೆಂಬಮೃತ ಕುಡಿಯಿರಿ ನೀವು
ವೇದವೆಂಬ ಕಲ್ಪವೃಕ್ಷದಿಂದುದುರಿ
ಶುಕರ ಬಾಯಿಂದಮೃತಪೂರಿತವಾದ
ಈ ರಸವ ಕುಡಿಯಿರಿ ಮತ್ತೆ ಮತ್ತೆ)

ಎಂದು ಹೇಳುತ್ತಾರೆ ಭಾಗವತ ಮೊದಲಲ್ಲೇ.

ದರ್ಶನ - ಜೀವನ

ದರ್ಶನವನ್ನು ಜೀವನದಿಂದ ಬೇರೆಯಾಗಿ ಹಾಗೂ ದಾರ್ಶನಿಕರನ್ನು ಕಲ್ಪನಾ ಲೋಕದಲ್ಲಿರುವ ಮತ್ತು ಅವ್ಯವಹಾರಿಕರೆಂದು ತಿಳಿಯುವ ಭ್ರಮೆಯೂ ಒಂದುಂಟು.

ಜೀವನದಲ್ಲಿ ನಮ್ಮ ನಿರ್ಣಯಗಳು ಕೇವಲ ಹಸಿವು, ಬಾಯಾರಿಕೆ ಅಥವಾ ಶಾರೀರಿಕ ಸ್ಥಿತಿಗಳು, ಹಳೆಯ ಅಭ್ಯಾಸಗಳು ಹಾಗೂ ಬಾಹ್ಯ ವಾತಾವರಣದ ಉತ್ತೇಜನಗಳಿಂದಲೇ ಪ್ರೇರಿತವಾಗದೆ ನಮ್ಮ ದಾರ್ಶನಿಕ ದೃಷ್ಟಿಕೋನದಿಂದಲೂ ಪ್ರೇರಿತವಾಗುತ್ತವೆ. ಜ್ಞಾತ ಅಥವಾ ಅಜ್ಞಾತ ರೂಪದಿಂದ ನಮ್ಮ ಶುಭ ಅಶುಭ, ಪಾಪ-ಪುಣ್ಯ ಸಂಬಂಧವಾದ ವಿಚಾರ ಹಾಗೂ ನಂಬಿಕೆಗಳೂ ನಮ್ಮನ್ನು ಪ್ರಭಾವಿತಗೊಳಿಸುತ್ತವೆ. ಈ ರೀತಿ ಮನುಷ್ಯನ ಸಭ್ಯತೆ ಮತ್ತು ಸಂಸ್ಕೃತಿಯ ದರ್ಶನದಿಂದ ಘನಿಷ್ಠ ಸಂಬಂಧವಿರುತ್ತದೆ. ಅಂದರೆ ಯಾವುದೇ ದೇಶ ಅಥವಾ ಜಾತಿಯ ದರ್ಶನ ಅದರ ಸಭ್ಯತೆ ಮತ್ತು ಸಂಸ್ಕೃತಿಯ ದರ್ಪಣವೆಂದೇ ಹೇಳೋಣ. ದರ್ಶನದ ಹಲವು ಪರಂಪರಾಗತ ವಿಷಯಗಳು ನಮ್ಮ ಜೀವನದ ತಾತ್ಕಾಲಿಕ ಸಮಸ್ಯೆಗಳಿಗೆ ಬಹಳ ದೂರದ ಸಂಬಂಧವಿರಬಹುದೆಂದು ಅಥವಾ ಇಲ್ಲದಿರಬಹುದೆಂಬುದೂ ನಿಜ. ಆದರೆ ದರ್ಶನ, ಜಗತ್ತು ಮತ್ತು ಜೀವನವನ್ನು ತಿಳಿಸುವ ವಿರಾಟ್ ಬೌದ್ಧಿಕ ಕ್ರಿಯೆ ಎಂದು ತಿಳಿಯಲ್ಪಟ್ಟಾಗ ಮತ್ತೆ ನಾವು ದರ್ಶನವನ್ನು ಜೀವನದಿಂದ ಹೇಗೆ ಬೇರ್ಪಡಿಸಬಲ್ಲೆವು...?

ನಿಜವಾದ ದರ್ಶನವಾದರೋ ವಾಸ್ತವವಾಗಿ ಜೀವನ ದರ್ಶನ ಅಥವಾ ಜೀವನ-ಕಲೆ. ಆದ್ದರಿಂದ ದರ್ಶನ ಜಗತ್-ಸನ್ಯಾಸವೂ ಅಲ್ಲ, ಜೀವನ ವಿಮುಖತೆಯೂ ಅಲ್ಲ. ಇದರಿಂದಲೇ ಸೆನೆಕಾ ಮತ್ತು ಪ್ಲುಟಾರ್ಕರು ದರ್ಶನವನ್ನು ಜೀವನ ಕಲೆ ಎಂದು ಒಪ್ಪಿದ್ದಾರೆ.

ದರ್ಶನ ಪ್ರಯೋಗಶಾಲೆಗಳ ಅಥವಾ ಪ್ರತ್ಯಕ್ಷ ವಿಷಯವಲ್ಲವೆಂಬುದೂ ನಿಜ. ಅದು ಹಾಗಾಗಿದ್ದರೆ ವಿಜ್ಞಾನವಾಗುತ್ತಿತ್ತು. ಜೀವನಕ್ಕೆ ತನ್ನದೇ ಆದ ಎಲ್ಲೆಗಳಿವೆ. ಅದು ಕೆಲವು ವಿಷಯಗಳನ್ನು ಸತ್ಯವೆಂದು ಒಪ್ಪಿ (ಅವುಗಳ) ಆ ಮಾನ್ಯತೆಗಳ ಆಧಾರದ ಮೇಲೆ ಮುಂದುವರಿಯುತ್ತದೆ. ಆದರೆ ದರ್ಶನ ಆ ಮಾನ್ಯತೆಗಳನ್ನು ಸಹ ಸಮೀಕ್ಷೆ ಮಾಡುತ್ತದೆ. ಮತ್ತೆ ಎರಡು ವಿಜ್ಞಾನಗಳ ಮಧ್ಯೆ ಇರುವ ಅಜ್ಞಾತ ನೆಲೆಯ ಮೇಲೂ ದರ್ಶನವೇ ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ. ವಿಜ್ಞಾನದಲ್ಲಿ ಮಾನ್ಯತೆಗಳಲ್ಲದೆ ತರ್ಕ ಅಥವಾ ಪ್ರಮಾಣಪೂರ್ವಕವಾಗಿ ಬಂದಿರುವ ವಿಷಯಗಳನ್ನೂ ದರ್ಶನ ಸಮೀಕ್ಷಿಸುತ್ತದೆ. ಮತ್ತೆ ವಿಜ್ಞಾನವಾದರೋ ವಿಶ್ವದ ಯಾವುದೇ ಭಾಗವನ್ನು ಅಧ್ಯಯನ ಮಾಡಬಲ್ಲದು, ಆದರೆ ದರ್ಶನ ಸಮಸ್ತ ಬ್ರಹ್ಮಾಂಡದ ಮೇಲೆ ಸಮದೃಷ್ಟಿಯಿಂದ ವಿಚಾರ ಮಾಡುತ್ತದೆ. ವಿಜ್ಞಾನದಲ್ಲಿ ಮೌಲ್ಯಗಳ ಉಲ್ಲೇಖವಿಲ್ಲವಾದರೂ ದರ್ಶನದಲ್ಲಿ ಜೀವದ ಮೌಲ್ಯಗಳ ಮೇಲೆ ವಿಚಾರ ಮಾಡುತ್ತಾರೆ. (ನಡೆಯುತ್ತದೆ). ವಿಜ್ಞಾನ ಕೇವಲ ಇಂದ್ರಿಯ ಜನ್ಯ ಅನುಭೂತಿಗಳವರೆವಿಗೇ ಸೀಮಿತವಾಗಿದ್ದರೆ ದರ್ಶನ ನೈತಿಕ, ಧಾರ್ಮಿಕ, ಕಲಾತ್ಮಕ ಹಾಗೂ ಋಷಿ ಮುನಿಗಳ ಅಪರೋಕ್ಷಾನುಭೂತಿಯನ್ನೂ ಸ್ವೀಕರಿಸುತ್ತದೆ. ಇದನ್ನು ಸ್ವೀಕರಿಸುವುದು ಜ್ಞಾನ ವಿರುದ್ಧವಲ್ಲ, ಬುದ್ಧಿ ವಿರುದ್ಧವಲ್ಲ, ಆದರೆ ಅದರಲ್ಲಿ ಜ್ಞಾನ-ವಿಜ್ಞಾನಗಳೆಲ್ಲದರ ಸಮಾವೇಶವಿದೆ - "ಜ್ಞಾನಂ ವಿಜ್ಞಾನ ಸಹಿತಂ" ನಾವು ವ್ಯಾಪಕ ದೃಷ್ಟಿಯಿಂದ ನೋಡಿದ್ದೇ ಆದರೆ ವೈಜ್ಞಾನಿಕ ವಿಧಿಯ ಮಹತ್ವಪೂರ್ಣ ಅಂಗ ಪ್ರಾಕ್ ಕಲ್ಪನಾ ನಿರ್ಧಾರಣೆಯಲ್ಲಿ ಈ ರೀತಿಯ ಅಂತರ್ದೃಷ್ಟಿ ಅವಶ್ಯಕ. ವಿಜ್ಞಾನದ ಈ ನಿರಾಶೆಯ ಎಲ್ಲೆಗಳನ್ನು ಸ್ವೀಕರಿಸುವುದು ದರ್ಶನದ ಅಭೀಷ್ಟವಲ್ಲ.

ದರ್ಶನ ಕೇವಲ ಜಗತ್ತಿನ ವ್ಯಾಖ್ಯೆಯನ್ನಷ್ಟೆ ಮಾಡುವುದಿಲ್ಲ, ಇದು ಮಾನವ ಜೀವನದ ಅಂತರಾಳದ ಅಧ್ಯಯನ ಮಾಡುತ್ತದೆ. ಇಂದು ಬೇರೆ ಬೇರೆ ವಿಜ್ಞಾನ ಭಾಗಗಳಾಗಿವೆ. ಆದರೆ ಈವರೆಗೆ ಮಾನವನಿಗೆ ಸುಖ ಶಾಂತಿ ಕೊಡುವ ವಿಜ್ಞಾನ ಬಂದಿಲ್ಲ, ಇದೇ ಕಾರಣದಿಂದಲೇ ನಾರದನಂತಹ ಮುನಿಯು ಸಹ ಸನತ್‌ಕುಮಾರನ ಬಳಿಯಲ್ಲಿ ಅದೇ ಮಾನವ ವಿಜ್ಞಾನದ ಶಿಕ್ಷಣಕ್ಕಾಗಿ ಪ್ರಾರ್ಥಿಸಿದ್ದು. "ಭಗವೋ ಅಧೀಹ" ಶಂಕರಾಚಾರ್ಯರು ನಾರದನ ನಿರೀಹತೆಯ ಮೇಲೆ ಭಾಷ್ಯಮಾಡುತ್ತಾ -"ಸರ್ವವಿಜ್ಞಾನ ಸಾಧನ ಶಕ್ತಿಸಂಪನ್ನಸ್ಯಪಿ ನಾರದಸ್ಯ ದೇವರ್ಷೇ ಶ್ರೇಯೋ ನ ಭೂವ" ಅಂದರೆ ಇಷ್ಟಾದರೂ ನಾರದನಿಗೆ ಶ್ರೇಯಸ್ಸು ಸಿಗಲಿಲ್ಲ. ಈ ಶ್ರೇಯಸ್ಸೇನು, ಅದಕ್ಕೂ ಪ್ರೇಮಕ್ಕೂ ಏನು ಅಂತರವಿದೆ. ಇದನ್ನು ತಿಳಿಸಲೆಂದೇ ನಚಿಕೇತನು ಯಮರಾಜನ ಭೌತಿಕ ಹಾಗೂ ಸಾಂಸಾರಿಕ ಪ್ರಲೋಭನೆಗಳೆಲ್ಲಕ್ಕೂ ತಿಲಾಂಜಲಿ ಇತ್ತ. ನಿಜವಾಗಿ ಅವನಿಗೆ ಶಾಶ್ವತ ಮತ್ತು ವ್ಯಾಪಕ ಸುಖ ಬೇಕಾಗಿತ್ತೇ ಹೊರತು ಕ್ಷುದ್ರ ಹಾಗೂ ಕ್ಷಣಿಕವಾದುದಲ್ಲ - "ಯೋ ವೈ ಭೂಮಾ ತತ್ಸುಖಾ ನಾಲ್ಪೇ ಸುಖಮಸ್ತಿ". ಮೃತ್ಯುವಿನ ರಹಸ್ಯ ತಿಳಿಯಲು ನಚಿಕೇತನು ಎಷ್ಟು ದುಃಖವನ್ನು ಸಹಿಸಿದ, ಆದರೆ ಸಾಧನೆಯೂ ಅದೇ ಅನುಪಾತದಲ್ಲಿ ಪೂರ್ಣವಾಗುತ್ತಿತ್ತು, ನಂತರ ಅದಕ್ಕೆ "ಭೂಮಾ" ಜ್ಞಾನ ಸಿಕ್ಕಿತು. ಸುಖ ವೃತ್ತಿಜನ್ಯವಾದದ್ದು: ವೃತ್ತಿರೂಪ ಸಂಕಲ್ಪವಾಗಿ ಪರಿವರ್ತಿತವಾದಮೇಲೆ ಸುಖದ ಅಭಾವ ನಿಶ್ಚಯ, ಮತ್ತೆ ಅದರ ಭೋಗ ಕಾಲದಲ್ಲಿ ಅನೇಕ ಅಸಹನೀಯ ದುಃಖಗಳ ಆವಿರ್ಭಾವವಾಗಿದ್ದವು.

ಶ್ರೀಮೂರ್ತಿ ರಾಮನಾಥಪುರ

ಯೇಹಿ ಸಂಸ್ಪರ್ಶಜಾ ಭೋಗಾ ।
ದುಃಖಯೋನಯ ಏವತೇ ।
ಆದ್ಯಂತವಂತಃ ಕೌಂತೇಯ,
ನ ತೇಷು ರಮತೇ ಬುಧಃ ॥

ಮೈತ್ರೇಯಿ ಈ ಸತ್ಯವನ್ನು ತಿಳಿದಾಗ ಋಷಿ ಯಾಜ್ಞವಲ್ಕ್ಯರಿಗೆ ಆತ ಹೇಳಿದ್ದ - "ಏನಾಹಾ ನಾಮೃತಾಸ್ಯಂ ಕಿಮಹಂ ತೇನ ಕುರ್ಯಾಂ?" ಪರಮಸುಖ ಸಿಗದಿರುವುದನ್ನು ತೆಗೆದುಕೊಂಡು ಏನು ಮಾಡುವುದು? ನಿಜವಾಗಿ ನಮ್ಮ ಚಿಂತನೆ ಹಾಗೂ ಜೀವನದ ಮೌಲ್ಯ ಸಂಕುಚಿತವಾದಾಗ ಕಾಂಚನ, ಕಾಮಿನಿ, ಕೀರ್ತಿ ಈ ಮೂರೂ ನಮ್ಮ ಆದರ್ಶಗಳಾಗುತ್ತದೆ. ಆದರೆ ಒಂದು ವೇಳೆ ಇದೇ ಸತ್ಯವಾಗಿದ್ದರೆ ಬುದ್ಧ ಅಥವಾ ಮಹಾವೀರರಂತಹ ರಾಜಪುರುಷರಿಗೆ ವೈರಾಗ್ಯದ ಪ್ರೇರಣೆ ಏಕಾಗುತ್ತಿತ್ತು? ಪ್ರಿಯದರ್ಶಿ ಅಶೋಕ ಏಕೆ ಬುದ್ಧನ ಶರಣಾಗುತ್ತಿದ್ದನು. ಇದೇ ಮಾನವ ವಿಜ್ಞಾನದ ಜನ್ಮಸ್ಥಳ. ಈ ಜೀವನ ಜ್ಯೋತಿಯನ್ನು ಯಾರೆಷ್ಟು ನಿರಾದರಗೊಳಿಸಿದರೋ ಅವರೆಷ್ಟೇ ದಿಗ್ಭ್ರಮಿತ, ಉದಾಸ ಹಾಗೂ ಅಶಾಂತರಾದರು.

ದರ್ಶನ, ಶೂನ್ಯದಿಂದ ಉದ್ಭವಿಸುವುದಿಲ್ಲ. ಇದು ನಮ್ಮ ಜೀವನ ಮತ್ತು ಅದರ ಮೌಲಿಕ ಸಮಸ್ಯೆಗಳಿಂದ ಉತ್ಪನ್ನವಾಗುತ್ತದೆ. ದರ್ಶನ ನಮ್ಮನ್ನು ಪಶು ಸಂಸ್ಕೃತಿಯಿಂದ ವಿಚಾರದ ಸಂಸ್ಕೃತಿಯಲ್ಲಿ ಪ್ರತಿಷ್ಠಿತಗೊಳಿಸುತ್ತದೆ. 'ಈ ಜೀವನ ಏನು? ಇದರ ಪ್ರಯೋಜನವೇನು? ವಿಶ್ವದಲ್ಲಿ ಮಾನವನ ಸ್ಥಾನವೇನು? ಮಾನವ ಜೀವನದ ಕೊನೆಯ ಗುರಿ ಏನು?' ಇತ್ಯಾದಿ ಅನೇಕ ಪ್ರಶ್ನೆಗಳು ಉಂಟಾಗಿ ನಮಗೆ ದರ್ಶನ ಬೇಕೆ ಅಥವಾ ಬೇಡವೆ ಎಂಬುದು ಪ್ರಶ್ನೆಯಲ್ಲ. ಯಾವ ರೀತಿಯ ದರ್ಶನ ಬೇಕೆಂಬುದಷ್ಟೆ. ನಮ್ಮ ಪ್ರಶ್ನೆ

ವಿಚಾರದ ರಥ ನಿಲ್ಲುವಲ್ಲಿ ಸಭ್ಯತೆ, ಸಂಸ್ಕೃತಿ, ಶಿಕ್ಷಣದ ಪ್ರಗತಿ ಕುಂಠಿತವಾಗುತ್ತದೆ.

ಮಾನವ ಜೀವನದಲ್ಲಿ ವಿಚಾರಕ್ಕೆ ಸರ್ವಾಧಿಕ ಮಹತ್ವವಿದೆ. ಒಂದು ವಿಚಾರದಲ್ಲಿರುವ ಶಕ್ತಿ ಇಡೀ ವಿಶ್ವದ ಸಮಸ್ತ ಡೈನಮೈಟ್‌ನ ಶಕ್ತಿಯಲ್ಲಿಯೂ ಉಪಲಬ್ಧವಿರುವುದಿಲ್ಲ. ಅದು ಮನುಷ್ಯನ ಮನಸ್ಸನ್ನು ಸ್ವಾಭಾವಿಕ ರೂಪದಿಂದ ಕೆದಕುತ್ತಿರುತ್ತವೆ ಮತ್ತು ಅವುಗಳ ಉತ್ತರದಿಂದ ಅದು ಗುರ್ತಿಸಲ್ಪಡುತ್ತದೆ. ಇದೇ ದಾರ್ಶನಿಕ ಕ್ರಿಯೆ. ಆದ್ದರಿಂದ ದರ್ಶನ ಆಕಸ್ಮಿಕವೂ ಅಲ್ಲ, ಪಾರಲೌಕಿಕವೂ ಅಲ್ಲ. ವಸ್ತುತಃ ಇದು ಮಾನವನ ಸಾಮಾನ್ಯ ಹಾಗೂ ಸ್ವಾಭಾವಿಕ ಅನಿವಾರ್ಯ ಕ್ರಿಯೆ.

ಮಾನವ ಜೀವನದ ಪ್ರಯೋಜನ ಹಾಗೂ ನಂತರದ ಅನುಭೂತಿ ಕೇವಲ ದಾರ್ಶನಿಕರಿಗೆ ಮಾತ್ರವೇ ಆಗುವುದಿಲ್ಲ. ಆದರೆ ಸಾಮಾನ್ಯ ಜನರಲ್ಲಿಯೂ ಆಕರ್ಷಕ ರೀತಿಯಿಂದ ಪರಂಪರಾಗತ ನಂಬಿಕೆ ಅಥವಾ ಪೌರಾಣಿಕ ಆಖ್ಯಾಯನಗಳ ಮೂಲಕ ಸ್ವೀಕರಿಸಲ್ಪಡುತ್ತಿವೆ. ಅದೆಷ್ಟೇ ಅಸಂತೋಷ ಜನಕ ಹಾಗೂ ಅಪರ್ಯಾಪ್ತವಾಗಿರಲಿ ಪ್ರತಿ ವ್ಯಕ್ತಿಯಲ್ಲಿ ಯಾವುದಾದೊಂದು ರೀತಿಯ ದರ್ಶನ ಇದ್ದೇ ಇರುತ್ತದೆ. ವಾಸ್ತವವಾಗಿ ಭಾವನೆಯೇ ದುರ್ಗೆ, ವಿಚಾರವೇ ಪರಮೇಶ್ವರ, ವಿಚಾರ ಸೂರ್ಯ ಇಲ್ಲವೆ ಒಂದು ಕಿರಣದಿಂದ ಮಾನವ ದೇವತ್ವದ ಕಡೆ ಅಭಿಮುಖವಾಗುತ್ತಾನಲ್ಲದೆ ಸಮಾಜದ ಬರ್ಬರತೆಯಿಂದ ಸಭ್ಯತೆಯ ಯುಗದಲ್ಲಿ ಪ್ರವೇಶಿಸುತ್ತಾನೆ.

ಇಂದು ಅಣು ಮತ್ತು ಅಹಿಂಸೆಯು ಮುಖ್ಯ ಆಯ್ಕೆ ಮಾಡಬೇಕಾಗಿದೆ. ಹೇಳುವುದಾದರೆ ಆಯ್ಕೆ ಮಾಡಿದೆ. ಆದ್ದರಿಂದ ನಿಶ್ಯಸ್ತ್ರೀಕರಣದ ಬೇಡಿಕೆ ಏನೂ ಕುರುಡು ನಂಬಿಕೆಯಲ್ಲ. ಅದು ಯುಗದ ಅನಿವಾರ್ಯತೆ, ಇಂದು ಪ್ರಪಂಚದಲ್ಲಿ ಇರುವ ಅತ್ಯಧಿಕ ಸಾರ್ಥಕ್ಯವೆಂದರೆ ಅದು ಅಹಿಂಸಾ ದರ್ಶನವೆ.

ಆಧುನಿಕ ವಿಜ್ಞಾನಿಗಳು ನಚಿಕೇತನಂತೆ ಆತ್ಮ ವಾದದಿಂದ ಸಂತೋಷಗೊಳ್ಳಲಿಲ್ಲ ಅವರು 'ಆತ್ಮಾನಂ ರಥಿನಂ ವಿದ್ಧಿ' ಎನ್ನುವ ಕಲ್ಪನೆಯನ್ನು ಕೋಟೆ, ಭ್ರಮೆ ಎಂದು ತಿಳಿಯುತ್ತಾರೆ. ರಥದ ಒಳಗೆ ರಥಿ, ಪಂಜರದೊಳಗೆ ಪಕ್ಷಿ ಅಥವಾ ಮಂತ್ರದೊಳಗಿನ ಭೂತದ ಕಲ್ಪನೆಯನ್ನೆ ಅವರು ತಪ್ಪೆಂದು ತಿಳಿಯುತ್ತಾರೆ. ಒಂದು ವೇಳೆ ಆತ್ಮವೇ ಇಲ್ಲವಾದರೆ "ವಾಸಾಂಸಿ ಜೀರ್ಣಾನಿ ಯಥಾ ವಿಹಾಯ"ದ ಉಪಮೆ ವ್ಯರ್ಥವಾಗುತ್ತದೆ "ಜಾತಸ್ಯ ಹಿ ಧ್ರುವೋ ಮೃತ್ಯುಃ" ಎನ್ನುವುದು ಪ್ರತ್ಯಕ್ಷ ಸಿದ್ಧವಾಗಿದೆ. ಆದರೆ "ಧ್ರುವಂ ಜನ್ಮ ಮೃತಸ್ಯ ಚ" ವನ್ನು ಸ್ವಯಂ ಸಿದ್ಧವೆಂದು ಹೇ[illegible] ಒಪ್ಪುವುದು ? ಗೌತಮ ನ್ಯಾಯಸೂತ್ರದ ಪು[illegible] ರ್ಜನ್ಮ ವಿಷಯವಾದ ಯುಕ್ತಿಗಳು ಅಂದರೆ ನ[illegible] ಜಾತಶಿಶುವಿನ ಸ್ತನ್ಯ ಪಾನ ಜನ್ಮಾಂತರ[illegible] ಅಭ್ಯಾಸದ ಪರಿಣಾಮವಾಗಿದೆ ಎನ್ನುವುದು ಇಂದಿನ ವೈಜ್ಞಾನಿಕ ಬುದ್ಧಿಗೆ ಆಶ್ವಸ್ತಗೊಳಿ[illegible] ಲಾಗುವುದಿಲ್ಲ. ಸುಖ ದುಃಖದ ಅಸಮಾ[illegible] ವಿತರಣಕ್ಕೆ ವರ್ತಮಾನದ ಅನ್ಯಾಯ ಪೂರ್ಣ[illegible] ಸಾಮಾಜಿಕ ಆರ್ಥಿಕ ನೆಲೆಗಟ್ಟು ಕಾರಣವೆ ಹೊರತು ಸಂಯೋಗವಲ್ಲ.

ಕಷ್ಟಗಳನ್ನು ಪೂರ್ವಜನ್ಮಾರ್ಜಿತ ಕರ್ಮ ಫ[illegible] ಗಳೆಂದು ಒಪ್ಪುದರಿಂದ ಅವು ಅಷ್ಟು ದುಸ್ಸಾಧ[illegible] ವೆಂದು ಪ್ರತೀತವಾಗುವುದಿಲ್ಲ. ಇಷ್ಟೇ ಅ[illegible] ಪುನರ್ಜನ್ಮದಲ್ಲಿ ಈ ಜನ್ಮದ ಪುಣ್ಯ ಕಾರ್ಯ[illegible] ಸುಫಲವನ್ನು ಅನುಭವಿಸುವ ಆಶೆ ನಮಗೆ ವ[illegible] ಮಾನದ ಅಸಂತೋಷದಿಂದ ಮೇಲೆತ್ತಿ ಈಗ[illegible] ಸತ್ಕರ್ಮ ಮಾಡುವ ಪ್ರೇರಣೆ ಕೊಡುತ್ತದೆ.

ಪ್ರತಿ ನೈತಿಕ ಆದರ್ಶದ ಸ್ಥಾಪನೆಯ ಹಿಂ[illegible] ವಿಶ್ವಕಲ್ಯಾಣದ ಪವಿತ್ರ ಭಾವನೆ ಇರುತ್ತ[illegible] ಆದ್ದರಿಂದ ವಿಶ್ವ ಕಲ್ಯಾಣ ನಿಃಶ್ರೇಯಸ್ಸಿ[illegible] ಮೆಟ್ಟಲು ಅಂತಲೂ ತಿಳಿಯಲ್ಪಟ್ಟಿದೆ. ಈ ದೃ[illegible] ಯಿಂದ ಬಹುಶಃ ನಾವು ಮೌಲ್ಯಾಂ[illegible] ಮಾಡಿದ್ದೇ ಆದರೆ ಭಾರತೀಯ ಜೀವನ ದರ್ಶನದ[illegible] ಒಂದು ವಿಲಕ್ಷಣ ವ್ಯಾವಹಾರಿಕ ದೂರದರ್ಶಿತ್ವ[illegible] ಸಮಾವೇಶ ಸಿಗುತ್ತದೆ.

ಐತಿಹಾಸಿಕ ಕಾದಂಬರಿಗಳಲ್ಲಿ

ಸಮಕಾಲೀನತೆ

ಇತಿಹಾಸ ಪ್ರಪಂಚವೆಂಬುದೊಂದು ಮಾಯಾಲೋಕವೇನಲ್ಲ. ಅದು ಕಾಲಗರ್ಭದಲ್ಲಡಕವಾದ ಅನೇಕ ಘಟನೆಗಳ ಹಾಸುಹೊಕ್ಕಾಗಿಯೇ ಬೆಳೆದುಬಂದಿದೆ. ಈ ಮಾತನ್ನೇ ನಮ್ಮ ರಾಷ್ಟ್ರಪತಿಗಳಾಗಿದ್ದ ಡಾ|| ರಾಧಾಕೃಷ್ಣನವರು ಇತಿಹಾಸವೆಂಬುದು ಕೆಲವು ಘಟನೆಗಳ ವಿಭಕ್ತ ಪ್ರಕರಣಗಳಾಗಿರದೆ ಅದು ಜೀವನದಲ್ಲಿಯ ನಿರುಪಾಧಿಕ ಶಕ್ತಿಯಾಗಿ ಪರಿಣಮಿಸುವುದೆಂಬ ಮಾತನ್ನು ಸ್ಪಷ್ಟಪಡಿಸಿದ್ದಾರೆ. ಐತಿಹಾಸಿಕ ಗ್ರಂಥರಚನಾ ಕಾರ್ಯದಲ್ಲಿ ನಿರತರಾದವರು ರಾಧಾಕೃಷ್ಣನ್ ಅವರ ಈ ಮಾತನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕಾದುದು ಬಹು ಅಗತ್ಯ.

ಐತಿಹಾಸಿಕ ಗ್ರಂಥಗಳ ರಚನೆಯಲ್ಲಿ ತೊಡಗಿದವರು ತಮ್ಮ ಬುದ್ಧಿಶಕ್ತಿಯೊಂದಿಗೆ ಲಭ್ಯವಾದ ಸ್ವಾತಂತ್ರ್ಯದ ಅವಕಾಶವನ್ನು ಕುರಿತಾಗಿ ಸಾಕಷ್ಟು ಯೋಚಿಸಬೇಕಾದುದು ಬಹು ಅಗತ್ಯ. ಯಾಕೆಂದರೆ ಕೆಲವೊಂದು ಸಂದರ್ಭದಲ್ಲಿ ತಾವು ಪಡೆದುಕೊಂಡ ಸ್ವಾತಂತ್ರ್ಯವೂ ಕೂಡ ನಿರರ್ಥಕ ಎಂದೆನಿಸಬಹುದಾದ ಸಂದರ್ಭಗಳನ್ನು ನಾವು ಎದುರಿಸಬೇಕಾಗುವುದು. ಲೇಖಕನಾದವನು ಒಂದು ಕಾಲದಲ್ಲಿ ನಡೆದುಹೋದ ಘಟನೆಗಳಿಗೆ ಕಾರಣವೆನಿಸಬಹುದಾದ ಸಂದರ್ಭಗಳನ್ನು ಸರಿಯಾದ ರೀತಿಯಲ್ಲಿ ತೂಗಿ ನೋಡಬೇಕಾದುದು ಬಹು ಮುಖ್ಯ. ಇಂಥ ಸಂದರ್ಭಗಳಲ್ಲಿ ಸ್ವಲ್ಪ ವ್ಯತ್ಯಾಸವಾದರೆ ಸಾಕು ಅದರಿಂದ ಇತಿಹಾಸಕ್ಕೆ ನಮ್ಮಿಂದ ಬಹು ದೊಡ್ಡ ಅಪಚಾರವಾಗಬಹುದು. ಈ ಕಾರಣಗಳಿಂದ ಲೇಖಕನಾದವನು ತನ್ನ ಅಂತಃಪ್ರೇರಣೆಗಳ ಸ್ವಪ್ರಭಾವದಿಂದ, ಪ್ರಯತ್ನದಿಂದ, ಸತ್ಯನಿಷ್ಠವಾದ ನಿಲುವನ್ನು ತಾಳಿದಲ್ಲಿ ಆತನಿಂದ ರಚಿತವಾಗುವ ಕೃತಿಗಳು ಮುಂದಿನ ಸಮಾಜಕ್ಕೆ ಬೋಧಪ್ರದವಾದ ಹಾಗೂ ಚೇತೋಹಾರಿಯಾದ ಕೃತಿಗಳೆಂದು ಕರೆಸಿಕೊಳ್ಳಲು ಕಾರಣವಾಗುತ್ತವೆ. ಈ ಕಾರಣದಿಂದಲೇ ಲೇಖಕನು ಅತ್ಯಂತ ಜಾಗರೂಕತೆಯಿಂದ ಮೈಯೆಲ್ಲ ಕಣ್ಣಾಗಿ ಕೃತಿರಚನೆಯಲ್ಲಿ ತೊಡಗಬೇಕಾಗುತ್ತದೆ.

ಈ ವಿಷಯದಲ್ಲಿ ಇನ್ನಷ್ಟು ಪ್ರವೇಶ ಮಾಡಬಯಸಿದಲ್ಲಿ ಅಂಥವರಿಗಾಗಿ ಮಧ್ಯಯುಗೀನ ಭಾರತದ ಇತಿಹಾಸದ ಘಟನೆಗಳನ್ನೂ ನಾವು ಉದಾಹರಣೆಗಳಾಗಿ ತೆಗೆದುಕೊಳ್ಳಬಹುದು. ಅಂದಿನ ಕಾಲದಲ್ಲಿ ನಡೆದುಹೋದ ಘಟನೆಗಳೆಲ್ಲ ಸಾಮಾನ್ಯವಾದ ಘಟನೆಗಳೆಂದು ಅಲ್ಲಗಳೆಯುವಂತಿಲ್ಲ. ಅಂದಿನ ಕಾಲದ ಪ್ರಯತ್ನವಾದಿಗಳು ಪಡೆದುಕೊಂಡ ವಿಜಯ ಪ್ರಾಪ್ತಿಯು, ವಿಶಾಲಭಾರತದ ಸಂಸ್ಕೃತಿ ಹಾಗೂ ಸುಭದ್ರವಾದ ಅರ್ಥವ್ಯವಸ್ಥೆ ಮತ್ತೂ ಸುಧಾರಿಸಿದ ಶಸ್ತ್ರಾಸ್ತ್ರಗಳು-ಇವೇ ಮೊದಲಾದವುಗಳನ್ನು ಅರಿಯದ ಪರಿಸ್ಥಿತಿಯಲ್ಲಿದ್ದ ಸಮಾಜದ ಮೇಲೆ ಗಳಿಸಿದ ಜಯವೆಂದು ಹೇಳಲು ಬರುವಂತಿಲ್ಲ. ಇತಿಹಾಸದ ಅಭ್ಯಾಸಿಯಾದವನು ಅಂದಿನ ಘಟನೆಗಳನ್ನೆಲ್ಲ ಸರಿಯಾದ ದೃಷ್ಟಿಯಲ್ಲಿ ಅಭ್ಯಾಸಮಾಡಿದಾಗ ಅತೃಪ್ತಭಾವನೆ ಹಾಗೂ ಉದಾಸೀನತೆಯ ಪ್ರವೃತ್ತಿಯು ಮೇಲೆ ಯುದ್ಧ ವಿಶಾರದರಾದ ಸಾಹಸೀ ಜನಾಂಗದಿಂದಾದ ಆಕ್ರಮಣವೇ ಅವರ ಈ ವಿಜಯಕ್ಕೆ ಕಾರಣ ಎಂಬ ಮಾತು ಸ್ಪಷ್ಟವಾಗಿ ತಿಳಿದುಬರುವುದು. ಅಲ್ಲದೆ ಅವರ ವಿಜಯಕ್ಕೆ ಅನಾದಿಕಾಲದಿಂದ ಬೇರೂರಿಕೊಂಡು ಬಂದ ಕೆಲವು ಮೂಢನಂಬಿಕೆಗಳೂ ಸಹ ಸಹಕಾರಿಯಾದವೆಂಬ ವಿಷಯವು ನಿಚ್ಚಳವಾಗಿ ನಮ್ಮ ಕಣ್ಮುಂದೆ ಬಂದು ನಿಲ್ಲುವುದು.

ಅಂದು ಮಹಾವೀರಾಧಿವೀರರೆಂದೆನಿಸಿಕೊಳ್ಳುತ್ತಿದ್ದ ರಜಪೂತರಿಂದಾದ ಆತ್ಮಾಹುತಿಗಳು ಹಾಗೂ ಅದೇ ಕಾಲದಲ್ಲಿ ಜನ್ಮವೆತ್ತಿದ ಮರೆಯಲಾಗದ ಮಹಾ ಸಾಮ್ರಾಜ್ಯದ ನಿರ್ಮಾಣ ಈ ಎರಡೂ ಕೃತಿಗಳು ಅಥವಾ ಘಟನೆಗಳು ಮಧ್ಯಯುಗೀನ ಭಾರತದ ಕೊಡುಗೆಗಳಾಗಿಯೇ ನಮಗೆ ಕಾಣಸಿಗುವುದು. ಇಷ್ಟಾದರೂ ಸಹ ಪ್ರಚಂಡವಾಗಿ ಹರಿದು ಬರುತ್ತಿದ್ದ ಆ ಮಹಾಶಕ್ತಿಯನ್ನೆದುರಿಸುವ ಆತ್ಮವಿಶ್ವಾಸವನ್ನು ಭಾರತಾದ್ಯಂತ ಬೆಳಸಲು ಯಾವುದೇ ತರಹದ ಸಾಮೂಹಿಕ ಪ್ರಯತ್ನಗಳು ನಡೆಯದಿರುವುದನ್ನು ಗಮನಿಸಿದಾಗ ಅಂದು ನಡೆದುಹೋದ ಅನಾಹುತಗಳಿಗೆಲ್ಲ ನಾವೇ ಕಾರಣರೆಂಬ ಭಾವನೆಯು ಮೂಡಿಬರುವುದು.

ಇಂದು ನಾವು ಯಾವುದೇ ರೀತಿಯ ಐತಿಹಾಸಿಕ ಕೃತಿಗಳನ್ನು ರಚಿಸಲು ಪ್ರಯತ್ನಿಸಿದಲ್ಲಿ ಅದರ ಬುನಾದಿಯ ಬಗ್ಗೆ ಸರಿಯಾದ ರೀತಿಯಲ್ಲಿ ಮೊದಲೇ ಯೋಜನೆ ಮಾಡಿ ಕಾರ್ಯಪ್ರವೃತ್ತರಾಗಬೇಕಾಗುತ್ತದೆ. ಯಾಕೆಂದರೆ ಚರಿತ್ರಕಾರನು ಒಂದು ಕಾಲದ ಘಟನೆಗಳಿಗೆ ಸ್ವತಃ ಬಂಧಿತನಾಗಿರುತ್ತಾನೆ. ಆತನ ಗಮನವೆಲ್ಲ ಅಂದಿನ ಅಧಿಕಾರ ಸೂತ್ರವನ್ನು ಹಿಡಿದುಕೊಂಡವರ ಸುತ್ತಮುತ್ತಲೂ ವ್ಯಾಪಿಸಿಕೊಂಡಿರುತ್ತದೆ. ಕೆಲವು ಸಂದರ್ಭಗಳಲ್ಲಿ ಚರಿತ್ರಕಾರನಿಂದ ಉಲ್ಲೇಖಿತವಾದ ಘಟನೆಗಳು ಮುಂದಿನವರಿಗೆ ಸಾಂಕೇತಿಕ ಸಂದರ್ಭಗಳಾಗಿ ತೋರಿಬರುವುದುಂಟು. ಆದುದರಿಂದ ಇಂದಿನ ಲೇಖಕನು ಸಮಭಾವನೆಗಳಿಂದ ಚಿಂತಿಸಬೇಕಾಗುತ್ತದೆ. ಒಂದೇ ಘಟನೆಗಳನ್ನು ಹೇಳುವಾಗ ಅವರಲ್ಲಿಯೇ ವ್ಯತ್ಯಾಸಗಳು ಇರುವುದನ್ನು ನಾವು ಕಾಣುತ್ತೇವೆ. ಅವುಗಳನ್ನೆಲ್ಲ ಅಭ್ಯಾಸಮಾಡಿದಾಗ ಲೇಖಕನಿಗೆ ಅಲ್ಲಿಯ ಘಟನೆಗಳು ನಾಮುಂದು ತಾಮುಂದು ಎಂದು ಆಹ್ವಾನವನ್ನೀಯುವಂತಹ ಅನುಭವವನ್ನು ನಾವು ಹೊಂದುತ್ತೇವೆ.

ಕೆಲವು ಸಂದರ್ಭಗಳಲ್ಲಿ ಕಲ್ಪನೆ ಎಂಬುದು ವಸ್ತುನಿಷ್ಠ ವಿಷಯಗಳಿಂದ ಲೇಖಕರನ್ನು ದೂರ ಸರಿಸುವಂತಹ ಸಂದರ್ಭಗಳಿರುತ್ತವೆ. ಹಾಗಾದಲ್ಲಿ ಲೇಖಕನು ಇತಿಹಾಸದ ಸತ್ಯ

ಶ್ರೀ ಆದ್ಯರಾಮಾಚಾರ್ಯ

ಸಪ್ತಗಿರಿ

ಬರಹಗಾರರಿಗೆ ಸೂಚನೆ:

ಸಪ್ತಗಿರಿ ಕನ್ನಡ ಮಾಸಪತ್ರಿಕೆ ಆಧ್ಯಾತ್ಮಿಕ. ಸಾಂಸ್ಕೃತಿಕ ಪ್ರಸಾರದ ಉದ್ದೇಶ ಹೊಂದಿ ಹೊರಬರುತ್ತಿರುವ ಪತ್ರಿಕೆ. ಈ ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು, ಕವನ, ಕೀರ್ತನೆ, ಭಾವ, ಛಾಯಾ ಚಿತ್ರಗಳನ್ನು ಕಳುಹಿಸಬಯಸುವವರು ಕೆಳಗಣ ಸೂಚನೆಗಳನ್ನು ಗಮನಿಸಬೇಕು.

1) ಲೇಖನಗಳು ಆರು ಫುಲ್‌ಸ್ಕೇಪ್ ಹಾಳೆಗಳ ಮಿತಿಯಲ್ಲಿ ಹಾಳೆಯ ಒಂದೇ ಕಡೆ ಬರೆಯಲಾಗಿರಬೇಕು. ಟೈಪ್‌ಮಾಡಿದ ಲೇಖನಗಳು ಅಪೇಕ್ಷಣೀಯ.

2) ದೇವಸ್ಥಾನ ಮೊದಲಾದ ಪ್ರಾಚ್ಯ ಅರ್ವಾಚೀನ ಸಾಂಸ್ಕೃತಿಕ ವಸ್ತು ವಿಷಯಗಳ ಬರಹಗಳು ತತ್ಸಂಬಂಧಿ ಫೋಟೋಗಳನ್ನೂ ಒಳಗೊಂಡಿದ್ದರೆ ಅನುಕೂಲಕರ.

3) ಚಿತ್ರಗಳನ್ನು ಇಂಡಿಯನ್ ಇಂಕಿನಲ್ಲೇ ಬರೆಯಬೇಕು.

4) ಕೇವಲ ಫೋಟೋಗಳನ್ನು ಮಾತ್ರವೇ ಕಳುಹಿಸುವವರು, ಸ್ಪಷ್ಟವಾದವುಗಳನ್ನು ಪೂರ್ತಿ ವಿವರಗಳೊಂದಿಗೆ ಕಳುಹಿಸಬೇಕು.

5) ಸಪ್ತಗಿರಿಯ ತೆಲುಗು, ತಮಿಳು, ಹಿಂದಿ, ಆಂಗ್ಲ ಭಾಷಾ ಪತ್ರಿಕೆಗಳಿಂದ ಅನುವಾದ ಲೇಖನಗಳು ಅಗತ್ಯವಿಲ್ಲ.

6) ಗೃಹಲಕ್ಷ್ಮಿ, ಕಿಶೋರಜಗತ್ ಮೊದಲಾದ ಶೀರ್ಷಿಕೆಗಳಿಗೆ ತಕ್ಕಂತಹ ಕಥೆ, ಪ್ರಬಂಧಗಳನ್ನೂ ಕಳುಹಿಸಬಹುದು.

7) ಪ್ರಕಟವಾದ ಲೇಖನಗಳಿಗೆ ಸೂಕ್ತ ಸಂಭಾವನೆ ಉಂಟು.

ಮಿಕ್ಕ ವಿವರಗಳಿಗೆ:

ಸಂಪಾದಕರು
ಸಪ್ತಗಿರಿ
ತಿ. ತಿ. ದೇವಸ್ಥಾನ, ತಿರುಪತಿ-517507
ಚಿತ್ತೂರು ಜಿಲ್ಲೆ, ಆಂ. ಪ್ರ.

ವನ್ನು ತನ್ನ ಕಾಲದ ಘಟನೆಗಳ ಸತ್ಯತೆಯೊಂದಿಗೆ ಹೊಂದುಗೂಡಿಸುವುದುಂಟು. ಹಾಗೆ ಮಾಡಿದಲ್ಲಿ ಬಹು ದೊಡ್ಡ ತಪ್ಪನ್ನು ನಾವು ಮಾಡಿದಂತಾಗುತ್ತದೆ. ಯಾಕೆಂದರೆ ಇತಿಹಾಸದಲ್ಲಿ ಕಾಣಸಿಗುವ ವ್ಯಕ್ತಿ ಹಾಗೂ ವ್ಯಕ್ತಿತ್ವ ಮತ್ತು ಆತನ ಪ್ರವೃತ್ತಿ. ಅಂದಿನ ಸಮಾಜರಚನೆ, ಸಂಸ್ಕೃತಿಯ ಪ್ರವಾಹ, ಶ್ರದ್ಧೆ ಹೀಗೆ ಒಂದಲ್ಲ ಹತ್ತಾರು ಬಗೆಯಿಂದ ನಾವು ಅಭ್ಯಾಸ ಮಾಡಿದಾಗ ಮಾತ್ರ ನಮ್ಮ ಕಲ್ಪನೆಗೂ ಸಹ ಒಂದು ತರಹದ ಮೆರಗು ಮೂಡಿಬರುತ್ತದೆ. ಅಂದಿನ ಘಟನೆಗಳು ಸಮಷ್ಟಿ ರೂಪವನ್ನು ತಾಳಲು ಈ ಅಭ್ಯಾಸವು ಪೂರಕವೆನಿಸುತ್ತದೆ.

ಇತಿಹಾಸದಲ್ಲಿ ಸರ್ವಸಾಮಾನ್ಯ ಮಾನವ, ಅಸಾಮಾನ್ಯ ಹಾಗೂ ಮಹಾಮಾನ್ಯ ಎಂಬ ಮೂರು ಬಗೆಯ ವರನ್ನು ನಾವು ಗುರುತಿಸಬಹುದು. ಅಸಾಮಾನ್ಯ ಹಾಗೂ ಮಹಾಮಾನ್ಯ ಎಂದೆನಿಸಿಕೊಳ್ಳುವವರು ಸರ್ವಸಾಮಾನ್ಯ ಮಾನವರೊಂದಿಗೆ ಒಟ್ಟಾಗಿಯೇ ಬೆಳೆದು ಬರುತ್ತಾರೆ. ಆದರೂ ಕೂಡ ಅವರ ನಡೆ ನುಡಿ, ರೀತಿ – ನೀತಿ ಮೊದಲಾದವುಗಳು ಸರ್ವಸಾಮಾನ್ಯರಿಗಿಂತ ತೀರ ಭಿನ್ನವಾಗಿರುತ್ತದೆ. ಇಂಥ ಅಸಾಮಾನ್ಯರ ಮಾಲಿಕೆಯಲ್ಲಿ ರಾಣಾ ಪ್ರತಾಪ ಅಥವಾ ಛತ್ರಪತಿ ಶಿವಾಜಿ ಇಂಥವರ ಹೆಸರುಗಳನ್ನು ನಾವು ಸೂಚಿಸಬಹುದು. ಇನ್ನು ಮಹಾಮಾನ್ಯ ಎಂದೆನಿಸಿಕೊಳ್ಳುವವರು ವಿದ್ಯಾರಣ್ಯರಂತೆ, ರಾಮದಾಸರಂತೆ ಅಥವ ಇತ್ತೀಚಿನವರಾದ ವಿವೇಕಾನಂದರಂತೆ ಇಲ್ಲವೇ ಗಾಂಧೀಜಿಯವರಂತೆ ತೋರಿಬರುತ್ತಾರೆ.

ಅಂದು ಶಿವಾಜಿಯು ತನ್ನದೇ ಆದ ರಾಜ್ಯವನ್ನು ಸ್ಥಾಪಿಸಿಕೊಂಡಂತೆ ಬಾಬರನೂ ಸಹ ಒಂದು ರಾಜ್ಯವನ್ನು ಸ್ಥಾಪನೆ ಮಾಡಿದ. ಆದರೆ ಶಿವಾಜಿಯ ಭಕ್ತರು ಆತನನ್ನು ಅತಿಮಾನವ ಸಂಭೂತನನ್ನಾಗಿ ಕಂಡು ಆತನಲ್ಲಿ ದೇವತ್ವವನ್ನು ಕಾಣಲು ಪ್ರಯತ್ನಿಸಿದರು. ಅದೇ ಕಾಲದಲ್ಲಿ ಇನ್ನೂ ಕೆಲವರಿಗೆ ಅದೇ ಶಿವಾಜಿಯು ಸೈತಾನನಾಗಿ ತೋರಿದ. ಹೀಗೆ ಒಬ್ಬನ ವಿಚಾರದಲ್ಲಿ ದ್ವಂದ್ವ ದೃಷ್ಟಿ ಬೆಳೆದುಬಂದುದನ್ನೂ ಸಹಾ ನಾವು ಅಭ್ಯಾಸ ಮಾಡಬೇಕಾಗುವುದು. ಇಷ್ಟಾದರೂ ಕೂಡ ಈ ಎರಡೂ ಗುಂಪಿನವರಲ್ಲೂ ಆತನೊಬ್ಬ ಸಾಮಾನ್ಯ ಮಾನವನಾಗಿಯೇ ನಮ್ಮೊಂದಿಗೆ ಎಲ್ಲರಂತೆ ಜನಿಸಿದ ಎಂಬ ಮಾತಿನಲ್ಲಿ ಒಮ್ಮತವಿದ್ದುದನ್ನು ಮಾತ್ರ ಇಡೆ ನಾವು ಗಮನಿಸಬೇಕಾದುದು ಬಹು ಮುಖ್ಯ.

ಕನ್ನಡ ನಾಡಿನಲ್ಲಿ ಹಿಂದಿನ ಕಾಲದ ಇತಿಹಾಸದ ಘಟನೆಗಳನ್ನಾಯ್ದುಕೊಂಡು ಅವುಗಳನ್ನು ಜನಸಾಮಾನ್ಯರ ಕೈಗೊಪ್ಪಿಸುವ ಕಾರ್ಯವನ್ನು ಆರಂಭಿಸಿದವರಲ್ಲಿ ಬಿ. ವೆಂಕಟಾಚಾರ್ಯ ಹಾಗೂ ಗಳಗನಾಥರ ಪ್ರಯತ್ನವನ್ನು ನಾವು ಮರೆಯುವಂತಿಲ್ಲ. ಅವರ ಕೃತಿಗಳು ಅನುವಾದಿತ ಕೃತಿಗಳಾ ಗಿದ್ದರೂ ಸಹ ಜನಸಾಮಾನ್ಯರ ಅಭಿರುಚಿಯನ್ನು ಇತಿಹಾಸದತ್ತ ಹರಿಯುವಂತೆ ಮಾಡಿದವು. ಅನಂತರ ಕೆರೂರ ವಾಸುದೇವಾಚಾರ್ಯರು ಸ್ವತಂತ್ರ ಕೃತಿರಚನೆಗೆ ಕೈ ಹಾಕಿದರು. ಅವರಿಂದ ರಚಿತವಾದ ಯದುರಾಯ ಕಾದಂಬರಿಯಂತೂ ನಮ್ಮ ನಾಡಿನ ಏಕೀಕರಣ ಪ್ರಯತ್ನಕ್ಕೆ ನಾಂದಿ ಪೂಜೆಯನ್ನು ಮಾಡಿತು.

ಅವರ ನಂತರ ವೀರಕೇಸರಿ ಸೀತಾರಾಮ ಶಾಸ್ತ್ರಿಗಳು, ಅ. ನ. ಕೃಷ್ಣರಾಯರು ಬಸವರಾಜ ಕಟ್ಟೀಮನಿಯವರು, ತ. ರಾ. ಸುಬ್ಬರಾಯರು, ಕೊರಟಿ ಶ್ರೀನಿವಾಸ ರಾಯರು, ಪುಟ್ಟಸ್ವಾಮಿಗಳೇ ಮೊದಲಾದವರು ನಾನಾ ರೀತಿಯ ಐತಿಹಾಸಿಕ ಕೃತಿಗಳನ್ನಿತ್ತು ವಾಚಕರ ಮನವು ಗತ ಇತಿಹಾಸವನ್ನು ಕುರಿತು ಚಿಂತಿಸುವಂತೆ ಮಾಡಿದರು.

ಇಷ್ಟಾದರೂ ಸಹ ನೆರೆನಾಡಿನ ಬಂಗಾಳಿ ಸಾಹಿತ್ಯ, ಮರಾಠೀ ಸಾಹಿತ್ಯಗಳಲ್ಲಿ ಹೊರಬರುತ್ತಿರುವ ಐತಿಹಾಸಿಕ ಕೃತಿಗಳನ್ನು ಅಭ್ಯಾಸ ಮಾಡಿದಾಗ ನಾವು ತುಂಬ ಹಿಂದುಳಿದಿದ್ದೇವೆ ಎಂದು ನಮಗನಿಸದಿರದು. ಆದುದರಿಂದ ಇನ್ನೂ ಹೆಚ್ಚಿನ ಸಂಖ್ಯೆಯ ಇತಿಹಾಸಿಕ ಕೃತಿಗಳು ಹೊರಬರುವಂತಾಗಲೆಂದು ಅಪೇಕ್ಷಿಸುತ್ತೇನೆ.

ವಾರ್ತಾಲಹರಿ

ಗೋಕುಲಾಷ್ಟಮಿ

ಆಗಸ್ಟ್ 16 ರಂದು ಭಾನುವಾರ ಗೋಕುಲಾಷ್ಟಮಿ ಸಂದರ್ಭದಲ್ಲಿ ಶ್ರೀ ವೆಂಕಟೇಶ್ವರ ಡೈರಿ ಫಾರಂನಲ್ಲಿ ಗೋಪೂಜೆ ನಡೆಯಿತು. ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ಎಚ್. ವೆಂಕಟಪತಿರಾಜು ಅವರು ಪೂಜೆಯನ್ನು ನಿರ್ವಹಿಸಿದರು. ಅನಂತರ ಅನ್ನಮಾಚಾರ್ಯ ಪ್ರಾಜೆಕ್ಟ್ ಕಲಾವಿದರಿಂದ ಸಂಗೀತ ಸಭೆ ಏರ್ಪಾಡಾಗಿದ್ದಿತು.

ತಿರುಮಲೆಯಲ್ಲಿ ಪ್ರಮುಖರು

ಶ್ರೀ ಶ್ರೀ ವಿದ್ಯಾಪಯೋನಿಧಿ ತೀರ್ಥರು:–

ಕರ್ನಾಟಕದ ವ್ಯಾಸರಾಯಮಠದ ಶ್ರೀ ಶ್ರೀ ವಿದ್ಯಾಪಯೋನಿಧಿ ತೀರ್ಥ ಶ್ರೀಪಾದಂಗಳವರು ಜುಲೈ 21 ರಂದು ತಿರುಮಲೆಗೆ ಆಗಮಿಸಿ ಸ್ವಾಮಿಯನ್ನು ಆರಾಧಿಸಿದರು. ಆಲಯ ಮರ್ಯಾದೆಗಳೊಡನೆ ಸ್ವಾಮಿಜೀಯವರಿಗೆ ಆಲಯ ಪೇಷ್ಕಾರ್ ಅವರು ಸ್ವಾಗತವನ್ನು ಬಯಸಿದರು.

ಆಂಧ್ರಪ್ರದೇಶ ಸಹಕಾರ ಶಾಖಾಮಂತ್ರಿ :

ಆಂಧ್ರಪ್ರದೇಶದ ಸಹಕಾರ ಶಾಖಾಮಂತ್ರಿ ಶ್ರೀ ಯತಿರಾಜಾರಾವ್ ಅವರು ತಮ್ಮ ಕುಟುಂಬ ಸಮೇತರಾಗಿ ಜುಲೈ 26 ರಂದು ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಸಂದರ್ಶಿಸಿ, ಸ್ವಾಮಿಯ ಕಲ್ಯಾಣೋತ್ಸವದಲ್ಲಿ ಪಾಲುಗೊಂಡಿದ್ದರು.

ಡಿ. ಐ. ಜಿ. :

ಅನಂತಪುರಂ ರೇಂಜ್ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಶ್ರೀ ಎಸ್. ಲಕ್ಷ್ಮಣಯಾದವ್ ಅವರು ಜುಲೈ 25 ರಂದು ಸ್ವಾಮಿಯನ್ನು ಸಂದರ್ಶಿಸಿದರು. ಅವರು ಕಾಲುನಡಿಗೆಯಲ್ಲಿ ತಿರುಮಲೆಯನ್ನು ಸೇರಿದರು.

ನಾಣ್ಯಗಳ ಎಣಿಕೆಯ ಸುಲಭೀಕರಣ

ತಿ. ತಿ. ದೇ. ಗಳ ಸಾರಿಗೆ ವಿಭಾಗದವರು ಕಂಡುಹಿಡಿದ ವಿವಿಧ ಆಕಾರಗಳ ನಾಣ್ಯಗಳನ್ನು ಜರಡಿ ಹಿಡಿಯುವ ಯಂತ್ರದಿಂದಾಗಿ ನಾಣ್ಯಗಳ ಎಣಿಕೆಯನ್ನು ಸುಲಭಗೊಳಿಸಲಾಗಿದೆ. ತಿರುಮಲೆಯ ಸ್ವಾಮಿ ಹುಂಡಿಯಲ್ಲಿ ಬೀಳುವ ನಾಣ್ಯಗಳನ್ನು ಮೌಲ್ಯದ ಪ್ರಕಾರ ಬೇರ್ಪಡಿಸಿ ಎಣಿಸುವುದು ಈವರೆಗೆ ಹೆಚ್ಚಿನ ಕಾಲವನ್ನು ತೆಗೆದುಕೊಳ್ಳುತ್ತಿದ್ದು, ಈಗ ವಿದ್ಯುತ್ ಸಹಾಯದಿಂದ ಜರಡಿ ಹಿಡಿಯುವ ಈ ಯಂತ್ರದಿಂದಾಗಿ ಕಾಲವನ್ನೂ, ಶ್ರಮವನ್ನೂ ಉಳಿಸಬಹುದಾಗಿದೆ. ಈ ಯಂತ್ರವನ್ನು ತಿ. ತಿ. ದೇ. ಸಾರಿಗೆ ವಿಭಾಗದವರು ಸ್ಕ್ರಾಪ್‌ನಿಂದ ತಯಾರಿಸಿದ್ದಾರೆ.

ಉಚಿತ ವೃಕ್ಷ ಪ್ರಸಾದ

ತಿರುಮಲೆಯ ಯಾತ್ರಿಕರಿಗೆ ತಮ್ಮ ಮನೆ ಊರುಗಳಲ್ಲಿ ಬೆಳೆಸಲು ಉಚಿತವಾಗಿ ಸಸಿಗಳನ್ನು ನೀಡಲು ತಿ. ತಿ. ದೇ. ಒಪ್ಪಿದೆಯೆಂದು ಆಂಧ್ರಪ್ರದೇಶದ ಅರಣ್ಯ ಇಲಾಖಾಮಂತ್ರಿ ಶ್ರೀ ಗಾಲಿ ಮುದ್ದುಕೃಷ್ಣಮ ನಾಯುಡು ತಿಳಿಸಿದ್ದಾರೆ. ಈ ವೃಕ್ಷ ಪ್ರಸಾದಕ್ಕಾಗಿ ಸಸಿಗಳನ್ನು ಬೆಳೆಸಲು ಬೇಕಾದ ಬೀಜಗಳನ್ನು ಅರಣ್ಯ ಇಲಾಖೆ ನೀಡುವುದೆಂದು ಅವರು ತಿಳಿಸಿದರು. ಈ ಹಿಂದೆ ಒಂದು ರೂಪಾಯಿಗೆ ಒಂದು ಸಸಿಯನ್ನು ನೀಡಲಾಗುತ್ತಿತ್ತೆಂದೂ, ಈ ಯೋಜನೆಯನ್ನು ಮತ್ತಷ್ಟು ಫಲಪ್ರದಗೊಳಿಸಲು ಅರಣ್ಯ ಇಲಾಖೆಯೂ ಸಹಕರಿಸುವುದು ಎಂದು ತಿಳಿಸಿದಾಗ ತಿ. ತಿ. ದೇ. ಸಸಿಗಳನ್ನು ಉಚಿತವಾಗಿಯೇ ಭಕ್ತರಿಗೆ ನೀಡಲು ಅಂಗೀಕರಿಸಿದೆಯೆಂದೂ ಅವರು ತಿಳಿಸಿದರು.

ತಿರುಪತಿಯಲ್ಲಿ ಪ್ರಾಣಿಸಂಗ್ರಹಾಲಯ

ತಿರುಪತಿಯಲ್ಲಿ ಒಂದು ಪ್ರಾಣಿಸಂಗ್ರಹಾಲಯವನ್ನು ಆರಂಭಿಸಲಿರುವುದಾಗಿ ಆಂಧ್ರಪ್ರದೇಶ ಜುವಾಲಾಜಿಕಲ್ ಪಾರ್ಕ್ ನಿರ್ದೇಶಕ ಶ್ರೀ ಸಿ. ರಾಮಕೃಷ್ಣ ಅವರು ತಿಳಿಸಿದ್ದಾರೆ.

ಈ ಅಭಯಾರಣ್ಯ 1000 ಎಕರೆ ಪ್ರದೇಶದಲ್ಲಿ ಪ್ರಕೃತಿಸಿದ್ಧ ವಾತಾವರಣದಲ್ಲಿ ಏರ್ಪಾಡಾಗಲಿದ್ದು, ದೇಶದ ನಲವತ್ತೈದು ಪ್ರಾಣಿಸಂಗ್ರಹಾಲಯಗಳ ಹೆಚ್ಚಿನ ಪ್ರಾಣಿಗಳನ್ನು ಇಲ್ಲಿಗೆ ತರಲಾಗುವುದೆಂದೂ, ಮೈಸೂರಿನ ಜೂ ನಿಂದ ಸಿಂಹಗಳು, ಆನೆಗಳನ್ನು ನೀಡಲು ಕರ್ನಾಟಕ ರಾಜ್ಯ ಸರ್ಕಾರ ಒಪ್ಪಿದೆಯೆಂದೂ ಅವರು ತಿಳಿಸಿದ್ದಾರೆ.

ಆಂಧ್ರಪ್ರದೇಶದ ಧಾರ್ಮಿಕ ದತ್ತಿ ಇಲಾಖಾ ಮಂತ್ರಿಗಳಾಗಿ ಶ್ರೀ ಸಿಂಹಾದ್ರಿ ಸತ್ಯನಾರಾಯಣ

ತಿ.ತಿ.ದೇ. ಬೋರ್ಡ್‌ನ ಸದಸ್ಯರಾಗಿ ಯಶಸ್ವಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಸಿಂಹಾದ್ರಿ ಸತ್ಯನಾರಾಯಣ ಅವರು ಆಂಧ್ರಪ್ರದೇಶದ ಧಾರ್ಮಿಕ ದತ್ತಿ ಇಲಾಖೆಯ ಮಂತ್ರಿಗಳಾಗಿ ನೇಮಕ ಹೊಂದಿ ಅಧಿಕಾರವನ್ನು ಸ್ವೀಕರಿಸಿದ್ದಾರೆ. ಶ್ರೀಯುತರು ಧರ್ಮದ ಬಗ್ಗೆ ಉತ್ಸಾಹ, ಭಕ್ತಿಗಳನ್ನು ಹೊಂದಿದ್ದು ಮಂತ್ರಿಗಳಾದ ಮೇಲೆ ದೇವಾಲಯಗಳ ಆಡಳಿತದಲ್ಲಿ ಹಲವಾರು ಸುಧಾರಣೆಗಳನ್ನು ಉಂಟುಮಾಡುವ ಅಪೇಕ್ಷೆ ಹೊಂದಿರುವರು.

ದೇವಾಲಯಗಳ ಸುತ್ತಮುತ್ತ ಮದ್ಯಮಾರಾಟ ನಿಷೇಧ

ತಿರುಮಲೆಯಲ್ಲಿ ಜಾರಿಯಲ್ಲಿರುವ ಮದ್ಯ, ಮಾಂಸ ಮಾರಾಟ, ಸೇವನೆ, ಉತ್ಪಾದನೆಗಳ ನಿಷೇಧವನ್ನು ಆಂಧ್ರಪ್ರದೇಶದ ಇತರ ದೇವಾಲಯಗಳ ಕ್ಷೇತ್ರಗಳಿಗೂ ಶಾಸನದ ಮೂಲಕ ವಿಸ್ತರಿಸಲಾಗುವುದೆಂದು ಮುಜರಾಯಿ ಇಲಾಖಾ ಮಂತ್ರಿ ಶ್ರೀ ಸಿಂಹಾದ್ರಿ ಸತ್ಯನಾರಾಯಣ ಅವರು ತಿಳಿಸಿದ್ದಾರೆ.

ಹೊಸ ಶಾಸನದಂತೆ ದೇವಾಲಯ ಭೂಮಿಗಳ ಆಕ್ರಮಣ, ಶ್ರೀಮಂತರಿಗೆ ಗುತ್ತಿಗೆ ನೀಡುವಿಕೆಗಳನ್ನೂ ನಿಷೇಧಗೊಳಿಸಲಾಗುವುದೆಂದು ಅವರು ನುಡಿದರು.

ತಿ. ತಿ. ದೇ. ಬೋರ್ಡ್ ಸದಸ್ಯರಾಗಿ ಕೆಲಸ ನಿರ್ವಹಿಸಿದ ಶ್ರೀ ಸಿಂಹಾದ್ರಿ ಸತ್ಯನಾರಾಯಣ ಅವರು ಮುಜರಾಯಿ ಇಲಾಖಾ ಮಂತ್ರಿಗಳಾದ ಸಂದರ್ಭದಲ್ಲಿ ತಿರುಪತಿಯಲ್ಲಿ ಅವರನ್ನು ನಾಗರಿಕರು ಶ್ರೀ ಡಿ. ಸುಬ್ಬರಾಯುಲು ಅವರ ಅಧ್ಯಕ್ಷತೆಯಲ್ಲಿ ಸನ್ಮಾನಿಸಿದ ಸಭೆಯಲ್ಲಿ ಅವರು ಮಾತನಾಡುತ್ತ ಈ ವಿವರಣೆ ನೀಡಿದರು.

ತಿ. ತಿ. ದೇವಸ್ಥಾನಗಳು, ತಿರುಪತಿ.
ಪ್ರಕಟನ ಶಾಖೆ

ಮಾರಾಟಕ್ಕೆ ಸಿದ್ಧವಾಗಿರುವ ಅಮೂಲ್ಯ ಧಾರ್ಮಿಕ ಗ್ರಂಥ ರಾಶಿ

ಕನ್ನಡ :

ಶ್ರೀನಿವಾಸನ ಹಾಡುಗಳು–ಭಾಗ–2 (ಶ್ರೀಪಾದರಾಜರು, ವ್ಯಾಸರಾಯರು, ವಾದಿರಾಜರು, ಕನಕದಾಸರು)	4–50
ಸೃಷ್ಟಿಪ್ರಕರಣ (ದಾಸಸಾಹಿತ್ಯದಲ್ಲಿ ವಿವರಿಸಿದಂತೆ) –ವಿ. ಬಾದರಾಯಣ ಮೂರ್ತಿ	12–50
ಪುರಂದರೋಪನಿಷತ್ (ಪುರಂದರದಾಸರ ಏಳುಕೃತಿ ವಿವರಣೆ) –ಬನ್ನಂಜೆ ಗೋವಿಂದಾಚಾರ್ಯ	7–00
ಕೇಶವಾದಿ ರೂಪಗಳು (ಕನ್ನಡ, ತೆಲುಗು, ಆಂಗ್ಲ, ಹಿಂದಿ, ಚಿತ್ರವಿವರಣೆ) –ಸಂ. ಕೆ. ಅಪ್ಪಣ್ಣಾಚಾರ್ಯ	3–75
ಕರ್ನಾಟಕ ಹರಿದಾಸರು(ಕನ್ನಡ, ತೆಲುಗು, ಆಂಗ್ಲ, ಹಿಂದಿ, ಚಿತ್ರವಿವರಣೆ) –ಸಂ. ಕೆ. ಅಪ್ಪಣ್ಣಾಚಾರ್ಯ	2–25
ಗೀತಾಸಾರೋದ್ಧಾರ –ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳು	4–00
ಸ್ತೋತ್ರ ಕುಸುಮಮಾಲಾ –ಸಂ. ವೆಂಕಟಾಚಲ	3–00
ಶ್ರೀ ವೆಂಕಟೇಶ್ವರ ಸುಪ್ರಭಾತ, ತ್ರಿವರ್ಣಚಿತ್ರ ವಿವರಣೆ	10–00
ಆಚಾರಗಳು ಆಡಂಬರಗಳು ––ಕೆ. ಚಂದ್ರಮೌಳಿ	0–40
ಶ್ರೀ ವೆಂಕಟೇಶ್ವರ ಸುಪ್ರಭಾತ (ವಿವರಣೆ ತಾತ್ಪರ್ಯ)	0–50
" " (ಕನ್ನಡ ಲಿಪಿಯಲ್ಲಿ)	0–12

ಮಕ್ಕಳಿಗಾಗಿ :

ಶ್ರೀಪಾದರಾಜರು	–ಎಂ. ಎಸ್. ಗುಂಡೂರಾವ್	0–75
ಮಹಿಪತಿದಾಸರು	–ಶಾನಭಾಗ	0–85
ಪ್ರಸನ್ನ ವೆಂಕಟದಾಸರು	–ವಿ. ಬಾದರಾಯಣಮೂರ್ತಿ	0–80
ಗೋಪಾಲದಾಸರು	–ರುಕ್ಮಿಣಿಗಿರಿಮಾಜಿ	0–75

ಹಿಂದಿ :

ಶ್ರೀ ವೆಂಕಟೇಶ್ವರ ಜೀ ಕೆ ಸುಪ್ರಭಾತ್ ಸ್ತೋತ್ರ –ಡಾ॥ ಎಂ. ಸಂಗಮೇಶಂ	0–20
ಶ್ರೀ ವೆಂಕಟೇಶ್ವರ ಸುಪ್ರಭಾತ್ (ಸಚಿತ್ರ)	11–00
ತೀರ್ಥರಾಜ ತಿರುಪತಿ ಡಾ॥ ಎಂ. ಸಂಗಮೇಶಂ	1–50

ಸಂಸ್ಕೃತ :

ಶ್ರೀ ವೇಂಕಟೇಶ್ವರ ಸುಪ್ರಭಾತಂ	0–12
ಶ್ರೀ ವೇಂಕಟೇಶ್ವರ ಅಷ್ಟೋತ್ತರ ಸಹಸ್ರನಾಮ ಸ್ತೋತ್ರಾಣಿ	0–62
ಕಠೋಪನಿಷತ್ –ಡಾ॥ ಕೆ.ಸಿ. ವರದಾಚಾರಿ ಹಾಗೂ ಡಾ॥ ಡಿ. ತಾತಾಚಾರ್ಯ	15–00
ಮಾರ್ಕಂಡೇಯ ಸಂಹಿತಾ	18–00
ತತ್ತ್ವಸಂಖ್ಯಾನಂ –ಆರ್. ರಾಮಮೂರ್ತಿ ಶರ್ಮಾ	2–00
ಬ್ರಹ್ಮಸೂತ್ರ ಭಾಷ್ಯ (ಭಾಗ–1) –ಆರ್. ರಾಮಮೂರ್ತಿ ಶರ್ಮಾ	30–00
ಅಲಂಕಾರ ಸಂಗ್ರಹ ಸಂ–ಕೆ. ಭಾಸ್ಕರರಾವ್	16–00
ಸೀತಾರಾಮಾಂಜನೇಯಂ –ಡಾ॥ ಡಿ. ಅರ್ಕಸೋಮಯಾಜಿ	50–00
ಪ್ರಶ್ನೋಪನಿಷತ್	11–00
ಶ್ರೀಮತ್ ವೈಖಾನಸೇ ಭಗವಚ್ಛಾಸ್ತ್ರೇ ಕ್ರಿಯಾಧಿಕಾರಃ ಸಂ–ಡಾ॥ ಎಸ್.ಬಿ. ರಘುನಾಥಾಚಾರ್ಯ	25–00

1000 ರೂಗಳನ್ನು ಮೀರಿದ ಪುಸ್ತಕಗಳ ಕೊಳ್ಳುವಿಕೆಗೆ 30% ರಿಯಾಯಿತಿಯೂ, 500 ರೂಗಳಿಂದ1000 ರೂ॥ 25% ರಿಯಾಯಿತಿಯೂ 100 ರೂ ಗಳಿಂದ 500 ರೂ ವರೆಗೆ 15% ರಿಯಾಯಿತಿಯೂ ಉಂಟು. ಅಂಚೆವೆಚ್ಚ ಪ್ರತ್ಯೇಕ.

ಕೂಡಲೇ ಬರೆಯಿರಿ :

ಡೆಪ್ಯೂಟಿ ಎಕ್ಸಿಕ್ಯೂಟಿವ್ ಆಫೀಸರ್ (ಎಸ್)
ಸೇಲ್ಸ್ ವಿಂಗ್ ಆಫ್ ಪಬ್ಲಿಕೇಷನ್ಸ್,
ತಿ. ತಿ. ದೇ. ತಿರುಪತಿ.

ಕರ್ನಾಟಕದಲ್ಲಿ

ಹಂಪಿಯಲ್ಲಿ ಪುರಂದರೋತ್ಸವದ ಏರ್ಪಾಡು

ಹೊಸಪೇಟೆಯ ಬಳಿಯ ಹಂಪೆಯಲ್ಲಿ ಕರ್ನಾಟಕ ಆಂಧ್ರಪ್ರದೇಶಗಳ ವತಿಯಿಂದ ಸಂಯುಕ್ತವಾಗಿ ಪುರಂದರೋತ್ಸವವನ್ನು ಅಕ್ಟೋಬರ್ 9, 10 ರಂದು ಏರ್ಪಡಿಸಲು ಯೋಜಿಸಲಾಗಿದೆ ಎಂದು ಕರ್ನಾಟಕದ ಪ್ರವಾಸ ಉದ್ಯಮ ಇಲಾಖಾಮಂತ್ರಿ ಶ್ರೀ ಎಂ. ಪಿ. ಪ್ರಕಾಶ್ ತಿಳಿಸಿದ್ದಾರೆ.

ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಟಿ. ರಾಮರಾವ್ ಅವರನ್ನು, ಈ ಉತ್ಸವದ ಉದ್ಘಾಟನೆಗೆ ಆಗಮಿಸಲು ಕರ್ನಾಟಕ ಸರ್ಕಾರ ಆಹ್ವಾನವೀಯುವುದೆಂದೂ, ಎರಡೂ ಪ್ರಾಂತ್ಯಗಳ ಸಾಂಸ್ಕೃತಿಕ ಸಂಸ್ಥೆಗಳು ಹಲವಾರು ಕಾರ್ಯಕ್ರಮಗಳನ್ನು ನಡೆಸಿಕೊಡುವುವು ಎಂದೂ ವರದಿಯಾಗಿದೆ. ಪುರಂದರದಾಸ ಕನಕದಾಸರ ಬಗ್ಗೆ ವಿಚಾರಗೋಷ್ಠಿಗಳನ್ನು ಏರ್ಪಡಿಸಲಾಗುವುದು. ಶ್ರೀ ಗಿರೀಶಕಾರ್ನಾಡರ ಸಾಕ್ಷ್ಯಚಿತ್ರ 'ಪುರಂದರದಾಸ'ವನ್ನು ಈ ಸಮಯದಲ್ಲಿ ಬಿಡುಗಡೆ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಕರ್ನಾಟಕ ಈಗಾಗಲೇ ಕೇಳಿದೆಯೆಂದು ವರದಿಯಾಗಿದೆ.

ಸಂಸ್ಕೃತದಲ್ಲಿ ಅಷ್ಟಾವಧಾನ

ಆಗಸ್ಟ್, ತಿಂಗಳ 6 ರಂದು ತುಮಕೂರಿನ ಶ್ರೀ ಕೃಷ್ಣರಾಜೇಂದ್ರ ಪುರಭವನದಲ್ಲಿ ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ತಿನ ಸ್ಥಳೀಯ ಶಾಖೆಯ ಆಶ್ರಯದಲ್ಲಿ ವಿದ್ವಾನ್ ಮೋಡವರಂ ಮಲ್ಲಿಕಾರ್ಜುನ ಶರ್ಮ ಅವರು ಸಂಸ್ಕೃತದಲ್ಲಿ ಅಷ್ಟಾವಧಾನವನ್ನು ನಿರ್ವಹಿಸಿ ಯಶಸ್ವಿಯಾದರು. ಪೃಚ್ಛಕರಾಗಿ ವಿದ್ವಾಂಸರುಗಳಾದ ಸರ್ವಶ್ರೀ ಕೆ. ಎಸ್. ವಾಸುದೇವಮೂರ್ತಿ ಸೋಮಯಾಜಿ, ನರಸಿಂಹನ್, ಲಕ್ಷ್ಮೀನರಸಿಂಹಭಟ್ಟ, ವೆಂಕಟಾರಾಧ್ಯ, ವಿ. ವೆಂಕಟರಮಣ ಭಟ್ಟರುಗಳು ಕಾರ್ಯ ನಿರ್ವಹಿಸಿದರು.

ನಿವೃತ್ತ ಪ್ರಾಧ್ಯಾಪಕ ಶ್ರೀ ವಿಶ್ವನಾಥ ಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು. ಮಾಯಸಂದ್ರದ ಪದವಿಪೂರ್ವ ಕಾಲೇಜಿನ ಆಂಗ್ಲಭಾಷಾ ಪ್ರಾಧ್ಯಾಪಕ ಶ್ರೀ ಕೆ. ಆರ್. ವೆಂಕಟಾಚಾರ್ಯ ಮಲೆನಾಡು ತಾಂತ್ರಿಕ ಕಾಲೇಜಿನ ಪ್ರಾಧ್ಯಾಪಕ ಶ್ರೀ ವಿ. ಆರ್. ವರದರಾಜನ್ ಅವರುಗಳೂ ಪೃಚ್ಛಕರಾಗಿದ್ದುದೊಂದು ವಿಶೇಷ.

ಅಷ್ಟಾವಧಾನಿ ಶ್ರೀ ಶರ್ಮರು ಮಾತನಾಡುತ್ತ ಆಂಗ್ಲಭಾಷೆಯನ್ನು ಕಲಿಯದಿದ್ದರೆ ಸುಮಾರು 400 ವರ್ಷಗಳ ಜ್ಞಾನ ನಮಗೆ ದಕ್ಕದೆ ಹೋಗುವುದು. ಆದರೆ ಸಂಸ್ಕೃತವನ್ನು ಕಲಿಯದಿದ್ದಲ್ಲಿ 4000 ವರ್ಷಗಳ ಜ್ಞಾನ ಭಂಡಾರ ನಮಗೆ ದಕ್ಕದೆ ಹೋಗುವುದು ಎನ್ನುತ್ತ ಸಂಸ್ಕೃತ ಅಧ್ಯಯನದ ಅಗತ್ಯವನ್ನು ಅವಧಾರಿಸಿ ನುಡಿದರು.

ಸಂರಕ್ಷಣೆಗಾಗಿ ಹಂಪೆಯ ಆಯ್ಕೆ

ಜಗತ್ತಿನಲ್ಲಿ ಸುರಕ್ಷಿತವಾಗಿಸಿಕೊಳ್ಳಲು ಅರ್ಹವಾದ ಮಾನವೀಯ ಪರಂಪರೆಯೆಂದು ಹಂಪೆಯನ್ನು ಸಂರಕ್ಷಣೆಗಾಗಿ ಆಯ್ಕೆ ಮಾಡಿದೆ ವಿಶ್ವಸಂಸ್ಥೆಯ ಯುನೆಸ್ಕೊ.

ಯುನೆಸ್ಕೋದವರು ಪ್ರಪಂಚಾದ್ಯಂತ 247 ಕ್ಷೇತ್ರಗಳನ್ನು ಆಯ್ಕೆ ಮಾಡಿದ್ದು ಅವುಗಳಲ್ಲಿ 13 ಭಾರತದವಾಗಿದ್ದು, ಹಂಪೆಯೂ ಒಂದಾಗಿದೆ ಎಂದು ಕರ್ನಾಟಕದ ಪ್ರವಾಸೋದ್ಯಮ ಇಲಾಖಾ ಮಂತ್ರಿ ಶ್ರೀ ಎಂ. ಪಿ. ಪ್ರಕಾಶರು ತಿಳಿಸಿದ್ದಾರೆ.

ಮುಂದಿನ ಸಂಚಿಕೆಯಲ್ಲಿ ....

ಸಪ್ತಗಿರಿ. — ಅಕ್ಟೋಬರ್ 1987

ಉಪನಿಷತ್ತುಗಳ ಜೀವನದೃಷ್ಟಿ
— ಪ್ರೊ॥ ಕೆ. ಟಿ. ಪಾಂಡುರಂಗಿ

ಐರಾವತ ನೋಂಪಿ
— ಕೆ. ಜಗನ್ನಾಥಶಾಸ್ತ್ರಿ

ತ್ವಚ್ಚರಿತಂ ವಿಭೋ ವಿಚಿತ್ರಂ
— ವಿದ್ವಾನ್ ಬ. ನ. ಗುಂಡೂರಾವ್

ಶಂಖ ಹಾಗೂ ಪಾಂಚಜನ್ಯ
— ವಿದ್ವಾನ್ ಬಿ. ಬಾಲಗಣಪತಿ ಭಟ್ಟ

ಕೊಲ್ಲೂರು ಮೂಕಾಂಬಿಕೆ
— ಶ್ರೀನಿವಾಸತಂತ್ರಿ

ಜೊತೆಗೇ ಕಿಶೋರ ಜಗತ್, ಗೃಹಲಕ್ಷ್ಮಿ, ಇತ್ಯಾದಿ ಸ್ಥಿರ ಶೀರ್ಷಿಕೆಗಳು.

ನಿಮ್ಮ ಪ್ರತಿಯನ್ನು ಕಾಯ್ದಿರಿಸಿ. ಬೆಲೆ: ರೂ. 1–00 ಮಾತ್ರ

ವಿಶೇಷ ಸೂಚನೆ: ಹೊಸದಾಗಿ ಚಂದಾದಾರರಾಗಬಯಸುವವರು ಕನಿಷ್ಠ ಒಂದು ವರ್ಷದ ಚಂದಾ ಹಣವನ್ನು ಕಳುಹಿಸಬೇಕು. ಅದಕ್ಕಿಂತಲೂ ಕಡಿಮೆ ಮೊತ್ತವನ್ನು ಸ್ವೀಕರಿಸಲಾಗುವುದಿಲ್ಲ. ವಾರ್ಷಿಕ ಚಂದಾ ರೂ. 12–00 ಮಾತ್ರ. ಹಿಂದಿನ ಚಂದಾದಾರರು ತಮ್ಮ ಚಂದಾ ಕ್ರಮಸಂಖ್ಯೆಯನ್ನು ತಪ್ಪದೆ ಪ್ರತಿ ಕಾಗದಲ್ಲೂ ಬರೆಯಬೇಕು. ಬರೆಯಿರಿ — ಸಂಪಾದಕರು
ಸೇಲ್ಸ್‌ವಿಂಗ್. ತಿ.ತಿ.ದೇ. ತಿರುಪತಿ.

ತಿಂಗಳಿನ ಮುಖ್ಯದಿನಗಳು

ಅಕ್ಟೋಬರ್ 1987

1.	ಗುರುವಾರ	ಮಹಾನವಮಿ
2.	ಶುಕ್ರವಾರ	ವಿಜಯದಶಮಿ ತಿರುಮಲೆಯ ಬ್ರಹ್ಮೋತ್ಸವದ ರಥೋತ್ಸವ ಗಾಂಧಿಜಯಂತಿ
3.	ಶನಿವಾರ	ತಿರುಮಲೆಯಲ್ಲಿ ಬ್ರಹ್ಮೋತ್ಸವ ಸಮಾಪ್ತಿ
4.	ಭಾನುವಾರ	ತಿರುಮಲೆಯಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಯ ಪುಷ್ಪಯಾಗ
18.	ಭಾನುವಾರ	ಮಣವಾಳ ಮಾಮುನಿ ಉತ್ಸವಾರಂಭ
21.	ಬುಧವಾರ	ನರಕಚತುರ್ದಶಿ, ವೇದಾಂತ ದೇಶಿಕರ ಉತ್ಸವಾರಂಭ
22.	ಗುರುವಾರ	ದೀಪಾವಳಿ, ಧನಲಕ್ಷ್ಮಿಪೂಜಾ
26.	ಸೋಮವಾರ	ನಾಗರ ಚೌತಿ
27.	ಮಂಗಳವಾರ	ಮಣವಾಳ ಮಾಮುನಿ ಶಾತ್ತುಮೊರೆ

ಚಂದಾದಾರರಲ್ಲಿ ಒಂದು ಮನವಿ

ಕನ್ನಡ ಸಪ್ತಗಿರಿಯ ನೇರ ಚಂದಾದಾರರ ಅಕ್ಟೋಬರ್ 1987 ಕ್ಕೆ ಚಂದಾ ಅವಧಿ ಮು ಯುವ ಚಂದಾ ಕ್ರಮಸಂಖ್ಯೆಗಳನ್ನು ಕೆಳಗೆ ನೀ ಲಾಗಿದೆ. ಚಂದಾದಾದರು ದಯವಿಟ್ಟು ತಮ್ ಮುಂದಿನ ಚಂದಾ ಹಣವನ್ನು ಕೂಡಲೇ ಎಂ ಮಾಡಬೇಕೆಂದು ವಿನಂತಿ.

9; 62, 117, 118, 182, 194 199, 251, 268, 271, 272, 273 275, 277, 388, 413, 521, 528 529, 531, 532, 533, 534, 535 536, 538, 540, 1022, 1023, 1024 1025, 1026, 1028, 1029, 1030.

ಚಂದಾ ಹಣವನ್ನು ಕಳುಹಿಸುವ ಚಂದ ದಾರರು ತಮ್ಮ ಚಂದಾ ಸಂಖ್ಯೆಯನ್ನು ತಪ್ಪ ಸ್ಪಷ್ಟವಾಗಿ ಬರೆಯಬೇಕು. ವಿಳಾಸವನ್ನು ಬ ಯಾದ ದಪ್ಪ ಅಕ್ಷರಗಳಲ್ಲಿ ಬರೆಯಿರಿ. ವಿಳಾಸ ಬ ಲಾವಣೆಯನ್ನು ತಿಳಿಸುವಾಗ ಚಂದಾ ಕ್ರ ಸಂಖ್ಯೆಯನ್ನೂ, ಹೊಸವಿಳಾಸವನ್ನೂ ಸ್ಪಷ್ಟವಾ ಬರೆಯ ಬೇಕೆಂದು ವಿನಂತಿಸಲಾಗಿದೆ.


ಸಂಪಾದಕರು, ಸಪ್ತಗಿ
ತಿ. ತಿ. ದೇ. ತಿರುಪತಿ


ತಿ. ತಿ. ದೇ. ಕ್ಯಾಸೆಟ್ ಮಾರಾಟ


ತಿ. ತಿ. ದೇ. ಗಳ ಪರವಾಗಿ ಅವರ ಧಾರ್ಮಿ ಕ್ಯಾಸೆಟ್‌ಗಳನ್ನು ತಯಾರಿಸಿ ಮಾರಾಟ ಮಾಡು ಹಕ್ಕುಗಳನ್ನು ಒಂದು ವರ್ಷಕ್ಕಾಗಿ ಮದರಾಸ ಮಾಸ್ಟರ್ ರೆಕಾರ್ಡಿಂಗ್ ಕಂಪನಿಯವ (ಸಂಗೀತಾ) ನೀಡಲಾಗಿದೆಯೆಂದು ಈ ಮೂ ಸಂಬಂಧ ಪಟ್ಟವರಿಗೆ ತಿಳಿಸಲಾಗಿದೆ.


ಕಾರ್ಯನಿರ್ವಹಣಾಧಿಕಾರಿ ತಿ. ತಿ. ದೇ.

Edited and Published on behalf of the T. T. Devasthanams by K. Subba Rao, M.A., and Printed at T. T. D. Press by M. Vijayakumar Reddy, Manager, T. T. D. Press, Tirupati – 517501.




NAVARATRI





Regd. No. H / TRP / 14

ವಾರ್ಷಿಕ ಚಂದಾ ರೂ. 12-0

